ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ


ಕನ್ನಡ ವಾರಪತ್ರಿಕೆ

ಸಂಪುಟ 2 ಸಂಚಿಕೆ 17

ಏಪ್ರಿಲ್ 27, 2008

ರೂ. 5/-

'ವಿಭಿನ್ನ' ಪಕ್ಷದ ಅಪರಾವತಾರಗಳು !










ಗೂಂಡಾಗಿರಿ ಇವರ ಮಾದರಿ



ನೇಪಾಳ : ಮಾವೋವಾದಿಗಳ 'ಪ್ರಚಂಡ' ಜಯ



ಶಾಂತರಸ : ಕಳಚಿದ ಸಿಡಿಲ ಕೊಂಡಿ

ಮಸೂದೆ : ನಕಲಿ ಔಷಧಿ ತಡೆಗೋ... ಅಥವಾ?

ಇದ್ದದ್ದು ಇದ್ದಾಂಗ....

ಉರಿಯುವ ಬೆಳದಿಂಗಳು

ಶಾಂತರಸ, ಅವರು ಸೂಕ್ಷ್ಮ ಪ್ರವೃತ್ತಿಯ ಶಾಂತ ಸ್ವರೂಪದ 'ಉರಿಯುವ ಬೆಳದಿಂಗಳು'

- ಡಾ. ಚಂದ್ರಶೇಖರ ಪಾಟೀಲ್

ವೈಯಕ್ತಿಕ ನಂಬಿಕೆ

ರಾಮಸೇತುವನ್ನು ರಾಮೇಶ್ವರದಿಂದ ಸೇತುವೆಯ ಇನ್ನೊಂದು ತುದಿಯವರೆಗೂ ಜನ ಪೂಜಿಸುತ್ತಾರೆ.

- ಡಾ. ಸುಬ್ರಹ್ಮಣ್ಯಸ್ವಾಮಿ
ಸುಪ್ರಿಂ ಕೋರ್ಟ್‌ನಲ್ಲಿ ವಾದಿಸುತ್ತಾ

"ಅದು ಜನರ ವೈಯಕ್ತಿಕ ನಂಬಿಕೆಯ ವಿಚಾರ"

ಸುಪ್ರಿಂ ಕೋರ್ಟ್ ನ್ಯಾಯಪೀಠ
'ರಾಮಸೇತು' ಪ್ರಕರಣದ ವಿಚಾರಣೆ ಸಂದರ್ಭದಲ್ಲಿ

ಯಾಕೆ? ಪ್ರಣಾಳಿಕೆ

"ಬೆಂಗಳೂರು ನಗರದಲ್ಲಿ ಅತಿ ಹೆಚ್ಚು ವಿಧಾನಸಭಾ ಕ್ಷೇತ್ರಗಳಲ್ಲಿ ಜಯ ಗಳಿಸಬೇಕಿದೆ. ಇದಕ್ಕಾಗಿ ನಗರದ ಮೂಲ ಸೌಕರ್ಯ ಸೇರಿದಂತೆ ಹಲವು ಸಮಸ್ಯೆಗಳ ನಿವಾರಣೆಗೆ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಪ್ರಾಶಸ್ತ್ಯ ನೀಡಲಾಗುವುದು."

ಎಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿಗಳು

ಯಾರಿಗಾಗಿ ಪ್ರಣಾಳಿಕೆ

"ಇದೇ 20ರೊಳಗೆ ಪಕ್ಷದ ಚುನಾವಣಾ ಪ್ರಣಾಳಿಕೆ ಸಿದ್ಧವಾಗಲಿದ್ದು, ಬಡವರು ಮತ್ತು ಶ್ರೀಮಂತರಿಗೆ ಪೂರಕವಾಗುವಂತಹ ಕಾರ್ಯಕ್ರಮಗಳನ್ನು ಪ್ರಕಟಿಸಲಾಗುವುದು."

ಅಪಾಯಕಾರಿ ಯಾರು?

"ಹಿಂದೂ ವಿರೋಧಿ ನೀತಿಯನ್ನು ಅನುಸರಿಸುತ್ತಿರುವ ಬಿಜೆಪಿ ಕಾಂಗ್ರೆಸ್‌ಗಿಂತ ಅಪಾಯಕಾರಿ ಪಕ್ಷ. ಈ ಪಕ್ಷವನ್ನು ಮುಂಬರುವ ಚುನಾವಣೆಯಲ್ಲಿ ಸೋಲಿಸುವ ಮೂಲಕ ಬಿಜೆಪಿಗೆ ತಕ್ಕ ಪಾಠ ಕಲಿಸಬೇಕು. ಆರ್‌ಎಸ್‌ಎಸ್‌ನಿಂದ ಉಪಯೋಗ ಪಡೆದ ಬಿಜೆಪಿ ಅದರ ಆಶಯಗಳಿಗೆ ತಿಲಾಂಜಲಿ ನೀಡಿದೆ. ಕೇವಲ ಅಧಿಕಾರ ಹಿಡಿಯಲು ಮಾತ್ರ ಹಿಂದೂ ಎಂದು ಹೇಳುವ ಬಿಜೆಪಿ ರಾಮಸೇತು ಯೋಜನೆಯ ನಿರ್ಣಯವನ್ನು ಅಂಗೀಕರಿಸಿತು. ಮುಸ್ಲಿಮರ ತುಷ್ಟೀಕರಣಕ್ಕೆ, ಓಲೈಕೆಗೆ ಮುಂದಾಯಿತು. ಹಿಂದೂ ಸಂಸ್ಕೃತಿ ಹಾಗೂ ಸಂಸ್ಕಾರವನ್ನು ಸ್ವಾರ್ಥಕ್ಕಾಗಿ ಹರಾಜು ಹಾಕುವ ಬಿಜೆಪಿಗೆ ತಕ್ಕ ಪಾಠ ಕಲಿಸಬೇಕು'.

- ಪ್ರಮೋದ್ ಮುತಾಲಿಕ್
ರಾಷ್ಟ್ರೀಯ ಹಿಂದೂ ಸೇನಾ ಅಧ್ಯಕ್ಷ

ಅತ್ಯುನ್ನತ ಗೌರವ

"ಒಲಂಪಿಕ್ಸ್ ಜ್ಯೋತಿಯ ರಿಲೆಯಲ್ಲಿ ಭಾಗವಹಿಸಿರುವುದು ಅತ್ಯುನ್ನತ ಗೌರವ ಎಂದು ನಾನು ಭಾವಿಸುತ್ತೇನೆ. ನಾನು ಒಲಂಪಿಕ್ ಆಟಗಳನ್ನು ನೋಡಿಯೇ ಬೆಳೆದದ್ದು.

-ಸಚಿನ್ ತೆಂಡೂಲ್ಕರ್

ವೈಮನಸ್ಸು ಬೆಳೆಸುವವರನ್ನು....

ಕೋಮು ಪ್ರಚೋದನೆಯ ಮೂಲಕ ಸಮಾಜದಲ್ಲಿ ಕೋಮುಗಲಭೆ ಸೃಷ್ಟಿಸುವವರನ್ನು, ಜಾತಿಧರ್ಮದ ಹೆಸರಿನಲ್ಲಿ ಹಿಂಸೆ, ಅಕ್ರಮಣ ನಡೆಸುತ್ತಾ ಜನರ ನಡುವೆ ವೈಮನಸ್ಸು ಬೆಳೆಸುವವರನ್ನು ಬಹಿಷ್ಕರಿಸಿ ಅಂಥವರಿಗೆ ಮತ ನೀಡಬೇಡಿ.

- ಮಾಣಿಲ ಶ್ರೀಧಾಮ ಮೋಹನದಾಸ ಸ್ವಾಮಿಜಿ
ಪುತ್ತೂರಿನಲ್ಲಿ ನಡೆದ ಮಿಲಾದ್ ಸಂಗಮ ಸೌಹಾರ್ದ ಸಮಾವೇಶದಲ್ಲಿ

ಇರಬೇಕು ಅಂತೀಯಾ?

"ಶ್ರೀ ರಾಮುಲು ಮನೆಗೆ ಬಂದರು, ಸ್ನೇಹಿತರಾದ ಅವರನ್ನು ಮಾತನಾಡಿಸಲು ಹೋದಾಗ ನನಗೆ ಜೀವ ಬೆದರಿಕೆ ಹಾಕಿದರು. ಬಳ್ಳಾರಿಯಲ್ಲಿ ಇರಬೇಕು ಅಂತಿದೀಯಾ, ಸಾಯಬೇಕು ಅಂತಿದ್ದೀಯಾ? ನಾನಾದರೂ ಇರಬೇಕು. ಇಲ್ಲಾಂದರೆ ನೀನಾದರೂ ಇರಬೇಕು ಎಂದು ನನ್ನನ್ನು ಬೆದರಿಸಿದರು. ಅವರು ಹೋದ ಸ್ವಲ್ಪ ಹೊತ್ತಿನಲ್ಲೇ ಶ್ರೀರಾಮುಲು ಬೆಂಬಲಿಗರ ಗುಂಪು ದಾಳಿ ನಡೆಸಿ ಮನೆಯತ್ತ ಕಲ್ಲು ತೂರಿ, ಮನೆ ಮುಂದೆ ನಿಲ್ಲಿಸಿದ್ದ 3 ಕಾರುಗಳಿಗೆ ಬೆಂಕಿ ಹಚ್ಚಿದರು"

- ಅನಿಲ್ ಲಾಡ್
ಮಾಜಿ ಶಾಸಕ, ಈಗ ಕಾಂಗ್ರೆಸ್ ಸೇರಿದವರು
ತಮ್ಮ ಮನೆ ಮೇಲೆ ಧಾಳಿ ನಡೆಸಿ ಕಾರುಗಳಿಗೆ ಬೆಂಕಿ ಹಚ್ಚಿರುವ ಕುರಿತು

ಭೂಮಾಫಿಯಾ ಶೇಖಡವಾರು

"ಭಾರತೀಯ ಜನತಾ ಪಕ್ಷವು ಮೊದಲ ಹಂತದಲ್ಲಿ ಬಿಡುಗಡೆ ಮಾಡಿರುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಶೇ.70ರಷ್ಟು ಮಂದಿ ಭೂ ಮಾಫಿಯಾದಲ್ಲಿ ತೊಡಗಿದ್ದಾರೆ. ಜಂಟಿ ಸದನ ಸಮಿತಿ ಸದಸ್ಯನಾಗಿದ್ದ ನನಗೆ ಬೆಂಗಳೂರು ಸುತ್ತಮುತ್ತ 35 ಸಾವಿರ ಎಕರೆ ಸರ್ಕಾರಿ ಭೂಮಿ ಒತ್ತುವರಿ ಮಾಡಿರುವವರ ವಿವರಗೊತ್ತಿದೆ. ಇಂತಹವರು ವಿಧಾನಸಭೆಗೆ ಆಯ್ಕೆಯಾಗಿ ಬಂದರೆ ಸಿಇಟಿ, ಪರಿಶಿಷ್ಟ ಜಾತಿ, ಪಂಗಡದವರ ಸಮಸ್ಯೆ ಹೇಗೆ ಅರ್ಥವಾಗುತ್ತದೆ"

- ಜಿ.ವಿ.ಶ್ರೀರಾಮರೆಡ್ಡಿ
ಸಿಪಿಐ(ಎಂ) ಮುಖಂಡರು, ಮಾಜಿ ಶಾಸಕರು, ಎಸ್‌ಎಫ್‌ಐ ಸಂಘಟಿಸಿದ್ದ
'ಚುನಾವಣೆಗಳಲ್ಲಿ ವಿದ್ಯಾರ್ಥಿಗಳ ಪಾತ್ರ' ಕುರಿತ ಸಮಾವೇಶದಲ್ಲಿ

'ನೇಪಾಳ ಮಾದರಿಯಾಗಲಿ'

"ನೇಪಾಳದ ಮಾವೋವಾದಿಗಳು ಶಸ್ತ್ರಾಸ್ತ್ರಗಳನ್ನು ತೊರೆದು ಚುನಾವಣೆಯಲ್ಲಿ ಭಾಗವಹಿಸಿದರು. ಆದರೆ ಇಲ್ಲಿನ ಮಾವೋವಾದಿಗಳು ಅಮಾಯಕರನ್ನು ಕೊಲ್ಲುತ್ತಿದ್ದಾರೆ. ಇಲ್ಲಿನ ಮಾವೋವಾದಿಗಳು ಸರಿಯಾದ ದಾರಿ ಹಿಡಿದು ಅವರನ್ನು ಭಾರತದ ಜನತೆ ಸ್ವಾಗತಿಸಿದರೆ ಎಡಪಕ್ಷಗಳು ಸಹ ಸ್ವಾಗತಿಸಲಿವೆ.

- ಸೀತಾರಾಮ್ ಯೆಚೂರಿ.

ಪುಸ್ತಕ ಪರಿಚಯ : 'ಮೋಹನದಾಸ'

ಮೋಹನದಾಸ ಕನ್ನಡಕ್ಕೆ ಬಂದ ಉತ್ತಮ ನೀಳ್ಗತೆ ಅಥವಾ ಚಿಕ್ಕ ಕಾದಂಬರಿ. ಈ ಕಥೆಯಲ್ಲಿ ಚಿತ್ರಿತವಾದ ವಾಸ್ತವ ನಮ್ಮ ನಿಮ್ಮ ಮಧ್ಯೆಯದೇ ಆಗಿದೆ.

ಮೋಹನದಾಸ ಒಂದು ಪ್ರತೀಕಾತ್ಮಕವಾದ ಅಂದರೆ ವಾಸ್ತವವನ್ನು ತನ್ನ ರಕ್ತ ಮಾಂಸವನ್ನಾಗಿ ಮಾಡಿಕೊಂಡ ಕಥೆ.

ಪ್ರತೀಕಾತ್ಮಕ ಎಂದರೆ ಯಾವುದು? ಪ್ರತೀಕಾತ್ಮ ಕತೆ ಎಂದರೆ ಮೋಹನದಾಸನದೇ. ಇದು ಮಹಾತ್ಮಗಾಂಧಿಯದು. ಯಾರು ಈ ದೇಶಕ್ಕೆ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿ ಸ್ವಾತಂತ್ರ್ಯ ತೆಗೆಸಿಕೊಡುವಲ್ಲಿ ಮಹತ್ವದ ಪಾತ್ರ ವಹಿಸಿದರೋ, ಯಾರು ಸತ್ಯ ಅಹಿಂಸೆಯ ಸಾಕ್ಷಾತ್ಕಾರಕ್ಕಾಗಿ ಜೀವನವನ್ನು ಪಣವನ್ನಾಗಿ ಮಾಡಿದರೋ ಅಂಥ ಮಹಾತ್ಮನದು. ಒಂದು ಕಡೆ ಮಹಾತ್ಮಗಾಂಧಿ ಇದ್ದಾರೆ. ಇನ್ನೊಂದು ಕಡೆ ಕಥಾನಾಯಕ ನಮ್ಮ ಮೋಹನದಾಸ್ ಇದ್ದಾನೆ. ಆದರೆ ಕೊನೆಯ ತನ ಇದು ಮರೆಯಲ್ಲೇ ಇರುತ್ತದೆ. 'ಸತ್ಯವೆಂದರೆ ಆನೆಯಿದ್ದ ಹಾಗೆ. ಕವಿ ಅಥವಾ ಕತೆಗಾರ ಅದರ ಮೇಲೆ ಅಂಗ ವಸ್ತ್ರ ಹರಡಿ ಅದನ್ನು ಕಳ್ಳತನದಲ್ಲಿ ನಡೆಸಿ ತಂದು ನಿಮ್ಮ ಎದುರಿಗೆ ನಿಲ್ಲಿಸಿದಾಗ ಅವನಿಗೆ ತನ್ನ ಜೀವನದ ಎಲ್ಲ ಸೇತುವೆಗಳೂ ಮುರಿದು ಬೀಳುತ್ತವೆ. ಅವನ ಎಲ್ಲ ನಾವೆಗಳೂ ಉರಿದು ಹೋಗುತ್ತವೆಯೆಂಬುದನ್ನು ನೀವು ಒಪ್ಪುತ್ತೀರಿ'

> **ಮೋಹನದಾಸ**
> ಅನು:ಆರ್.ಪಿ.ಹೆಗಡೆ,
> ಲೋಹಿಯಾ ಪ್ರಕಾಶನ.
> ಹಿಂದಿ ಮೂಲ
> ಲೇಖಕರಾದ
> ಉದಯ ಪ್ರಕಾಶ

ಇಲ್ಲಿ ಆಗುವುದು ಹಾಗೆ. ಮೋಹನ ಹಳ್ಳಿಯ ರೈತ ಮಗ. ಆತ ದಡ್ಡನಲ್ಲ. ಬಿ.ಎ.ದಲ್ಲಿ ಮೊದಲ ಸಾಲಿನಲ್ಲಿ ಪಾಸಾದವ. ಆದರೆ ಆತನಿಗೆ ಹೊಟ್ಟೆ ಹೊರೆದುಕೊಳ್ಳಲು ಒಂದು ನೌಕರಿ ಸಿಕ್ಕಲಿಲ್ಲ. ಆದರೆ ಅವನ ಸಂಗಡ ಸಾಮಾನ್ಯ ದರ್ಜೆಯಲ್ಲಿ ಪಾಸಾದ ಇನ್ನೊಬ್ಬ ಸಾಹುಕಾರನಾಗಿ ಮೆರೆಯುತ್ತಾನೆ. ಅವನೋ ಮೋಹನದಾಸ ತಾನೇ ಎಂದು ಸರ್ಕಾರದೆದುರು ತನ್ನನ್ನೇ ಪ್ರಸ್ತುತಪಡಿಸಿಕೊಳ್ಳುತ್ತಾನೆ. ಇದು ಹೇಗೆ ಆಯಿತು? ಇಲ್ಲಿ ಸ್ವತಂತ್ರ ಭಾರತದ ವಾಸ್ತವ ಚಿತ್ರವಿದೆ. ಇದು ದಿಗ್ಭ್ರಾಂತಿಗೊಳಗಾಗಿಸುವ ಚಿತ್ರ.

ಲೇಖಕರು ಈ ಚಿತ್ರವನ್ನು ನವಿರಾಗಿ ಬಿಡಿಸಿದ್ದಾರೆ. ಇದೇ ಇಲ್ಲಿಯ ಚಮತ್ಕಾರ. ಇಲ್ಲಿ ಇಂಥ ಬಡತನಕ್ಕೆ ಕಾರಣವೇನು ಎಂಬುದನ್ನು ಗಮನಿಸಬೇಕಾಗಿದೆ. ಅಧಿಕಾರಿಗಳು ಠಕ್ಕರು, ಲಂಚಕೋರರು ಮತ್ತು ಲಂಚಕೋರ, ರಾಜಕಾರಣಿಗಳು ಲಂಪಟರು.

'ಗಮನಿಸಿ, ಸಾವಿರಾರು ಕಿಲೋಮೀಟರ್ ದೂರದಲ್ಲಿ ಅನೇಕ ಸಮುದ್ರದಾಚೆ ವೈಟ್‌ಹೌಸ್‌ನಲ್ಲಿ ಕುರ್ಚಿಯಲ್ಲಿ ಕೂಡ ಅಮೇರಿಕೆಯ ರಾಷ್ಟ್ರಪತಿ ಮಾಡುತ್ತಿದ್ದುದನ್ನೇ ಹಿಂದೂಗಳ ಜಗದ್ಗುರು ತನ್ನ ಮಠದಲ್ಲಿ ಕೂಡ ಒಬ್ಬಳು ಹೆಣ್ಣಿನೊಂದಿಗೆ ಆ ಎಲ್ಲವನ್ನು ಮಾಡುತ್ತಿದ್ದಾಗಿನ ಸಮಯದ ವೃತ್ತಾಂತ ಇದು.(ಪುಟ 35) ಅಂದರೆ ಇಲ್ಲಿ ನಮ್ಮ ಕಥೆಗಾರ ಭಾರತದ ವಾಸ್ತವತೆಯ ಮೇಲೆ ಒಂದು ಕರ್‌ಚೀಫ್‌ನ್ನು ಹಾಕಿ ಮುಚ್ಚುತ್ತಾನೆ. ಆದರೆ ವಾಸ್ತವ ತನ್ನ ಬಿರುಕನ್ನು ಮುಚ್ಚಲಾರದಾಗಿದೆ. ಇಂಥ ಒಂದು ಭಾರತದ ವಾಸ್ತವವನ್ನು ಕಥೆ ಬಿಚ್ಚುತ್ತದೆ.

ಅನುವಾದ ಕೂಡ ಈ ಯಶಸ್ವಿ ಕೃತಿಯ ಪ್ರಮುಖ ಅಂಶ. ಒಂದು ಸ್ವತಂತ್ರ ಕೃತಿಯೇ ಎನ್ನುವಷ್ಟು ಸಹಜ ಭಾಷೆ. ಅವರ ಲಯ ಇಲ್ಲಿ ಒಡಮೂಡಿದೆ. ಇಂತಹ ಯಶಸ್ವಿ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ ಡಾ: ಆರ್.ಪಿ.ಹೆಗಡೆ (ಈಗಾಗಲೇ ಇಂತಹ ಹಲವು ಕೃತಿಗಳನ್ನು ಅವರು ಹಿಂದಿಯಿಂದ ಕನ್ನಡಕ್ಕೆ ತಂದು ಗ್ರಾಮೀಣ ಭಾಗದಲ್ಲಿ ತಣ್ಣಗೆ ಕುಳಿತಿದ್ದಾರೆ) ಅವರಿಗೆ ನನ್ನ ಅಭಿನಂದನೆಗಳು.

- ಡಾ: ಆರ್.ವಿ.ಭಂಡಾರಿ, ಕೆರೆಕೋಣ

ವರದಿಗಾರರು, ಬರಹಗಾರರ ಗಮನಕ್ಕೆ

ಪತ್ರಿಕೆಯ ಮೇಲೆ ಅಭಿಮಾನವಿಟ್ಟು ವರದಿ, ಲೇಖನ ಕಳಿಸುವ ಬರಹಗಾರರಲ್ಲಿ ವಿನಂತಿ. ದಯಮಾಡಿ ತಮ್ಮ ಲೇಖನದ ಜೊತೆಗೆ ಸಂಬಂಧಿಸಿದ ಫೋಟೋಗಳನ್ನು ಸಹ ಕಳಿಸಿಕೊಡಿ.

ಕೆಲವೊಂದು ವಿಷಯಗಳಲ್ಲಿ ಲೇಖನ-ವರದಿಗೆ ಬೇರೆಲ್ಲೂ ಫೋಟೋಗಳು ಸಿಗುವ ಸಂಭವ ಇರುವುದಿಲ್ಲ.

ನೀವು ಕಳಿಸುವುದು ಕೈಬರಹದ ವರದಿ ಲೇಖನವಾದರೆ ದಯಮಾಡಿ 'ಯಾರಿಗೇ ಆದರೂ ಅರ್ಥವಾಗಬಹುದಾದಂತೆ ಸ್ಪಷ್ಟವಾಗಿ ಬಿಡಿ ಬಿಡಿ ಅಕ್ಷರಗಳಲ್ಲಿ ಬರೆಯಿರಿ.

ನಿಮ್ಮ ಬರಹ ಕಂಪೋಸ್ ಆದ ಸ್ವರೂಪದಲ್ಲಿ ಇದ್ದರೆ ದಯಮಾಡಿ ಮೇಲ್ ಮಾಡಿ. ಅದು ತುಂಬಾ ಪ್ರಯೋಜನಕಾರಿ.

ಕನ್ನಡ ತಂತ್ರಾಂಶಗಳಾದ 'ಬರಹ' 'ಆಕೃತಿ' ಆಗಬಹುದು. 'ನುಡಿ' ಆದರೆ ಬಹಳ ಒಳ್ಳೆಯದು. ಹಾಗೇ ಒಂದು ಪ್ರತಿ ಇಟ್ಟುಕೊಳ್ಳಲು ಮರೆಯಬೇಡಿ

ಇಮೇಲ್ ವಿಳಾಸ :
js_weekly@yahoo.com,
kriyaprakashana@gmail.com

ಹಣ ತುಂಬಿ, ಜೊತೆಗೆ ಸೂಕ್ತ ಮಾಹಿತಿ ನೀಡಿ

ಏಜೆನ್ಸಿದಾರರೇ ದಯಮಾಡಿ ಈ ಸೂಚನೆ ಗಮನಿಸಿ ಪತ್ರಿಕೆಯ ಬಿಲ್ ಪಾವತಿಸುವ ಹಲವು ಏಜೆನ್ಸಿದಾರರು, ಪತ್ರಿಕೆಯ ಖಾತೆಗೆ ಹಣವನ್ನು ತುಂಬಲು ಕೋರ್ ಬ್ಯಾಂಕಿಂಗ್ ಸೌಲಭ್ಯವನ್ನು ಬಳಸುತ್ತಿರುವುದು ಸರಿಯಷ್ಟೇ. ಈ ಹಣವನ್ನು ತಮ್ಮ ತಮ್ಮ ಊರುಗಳಲ್ಲಿಂದಲೇ ಪತ್ರಿಕೆಯ ಖಾತೆಗೆ ತುಂಬುವಾಗ ಕೆಲವೊಂದು ಸೂಚನೆಗಳನ್ನು ಪಾಲಿಸುವುದು ಅವಶ್ಯಕ.

ಬ್ಯಾಂಕ್‌ನ ಚಲನ್‌ನಲ್ಲಿ ಯಾರ ಪರವಾಗಿ ಹಣ ತುಂಬಿರುವುದು ಎಂಬುದನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಹಾಗೆ ತುಂಬದೇ ಹೋದಲ್ಲಿ ಪತ್ರಿಕೆಯ ಖಾತೆಗೆ ಹಣ ಜಮಾ ಆಗುತ್ತದೆ. ಆದರೆ ಅದು ಯಾವ ಏಜೆನ್ಸಿದಾರರ ಹಣ ಎಂಬುದು ಗೊತ್ತಾಗುವುದಿಲ್ಲ. ದಯಮಾಡಿ ಹಣ ಜಮಾ ಮಾಡಿದ ನಂತರ ಅದರ ವಿವರಗಳನ್ನು ಬರೆದು ಒಂದು ಅಂಚೆ ಕಾರ್ಡನ್ನು ಕಳಿಸುವುದನ್ನು ಮರೆಯಬೇಡಿ.

ಈ ರೀತಿ ಹಣ ಜಮಾ ಆಗಿರುವ ಕೆಲವು ಪ್ರಕರಣಗಳಲ್ಲಿ ಸೂಕ್ತ ಮಾಹಿತಿ ಇಲ್ಲದೆ ಸಮಸ್ಯೆಯಾಗಿದೆ. ಸಂಬಂಧಿಸಿದವರು ದಯಮಾಡಿ ಸೂಕ್ತ ಮಾಹಿತಿ ನೀಡಿ.

ಸಂಪರ್ಕಕ್ಕೆ : ವೀರಣ್ಣ ಕಲ್ಮನಿ,
9480430394

ಸಂಪಾದಕೀಯ

ಬೆಲೆ ಏರಿಕೆ : ಕಾಲ ಮಿಂಚುವ ಮುನ್ನ


ಅಗತ್ಯ ವಸ್ತುಗಳ ಬೆಲೆ ಏರಿಕೆಯ ವಿರುದ್ಧ ತುರ್ತು ಕ್ರಮಗಳಿಗಾಗಿ ದೇಶದಾದ್ಯಂತ ಪ್ರತಿಭಟನೆಗಳು ನಡೆಯುತ್ತಿದ್ದರೂ ಬೆಲೆ ಇಳಿಸಲು ಸರ್ಕಾರ ಏನೊಂದೂ ಕ್ರಮ ವಹಿಸುತ್ತಿಲ್ಲ. ಬರೀ ಬಾಯ್ಮಾತಿನ ಹೇಳಿಕೆಗಳಿಂದ ಬೆಲೆಗಳು ಇಳಿಯುವಂತಿದ್ದರೆ ಕನಿಷ್ಟ ಅರ್ಧಕ್ಕಾದರೂ ಬೆಲೆಗಳು ಇಳಿದು ಬಿಡಬೇಕಿತ್ತು.

ಬೆಲೆ ಇಳಿಸುವುದಾಗಿ ಹೇಳುವ ಕೇಂದ್ರ ಸರ್ಕಾರ ಅದಕ್ಕಾಗಿ ಪ್ರಾಮಾಣಿಕ ಪ್ರಯತ್ನ ನಡೆಸುತ್ತಿಲ್ಲ. ಕೇವಲ ಅಂತರಾಷ್ಟ್ರೀಯ ಮಾರುಕಟ್ಟೆಯ ಮೇಲೆ ಹೊಣೆ ಹೊರಿಸುತ್ತಾ ಸರ್ಕಾರ ಕೈಚೆಲ್ಲಿ ಕುಳಿತಿರುವುದು ಹೊಣೆಗೇಡಿತನದ ಕ್ರಮವಾಗಿದೆ. ಬೆಲೆ ಏರಿಕೆ ತಡೆಯಲು, ಜನಸಾಮಾನ್ಯನಿಗೆ ಎಟುಕುವ ದರಗಳಲ್ಲಿ ದವಸಧಾನ್ಯದಂತಹ ಅಗತ್ಯ ವಸ್ತುಗಳನ್ನು ಪೂರೈಸುವ, ಈ ಬಿಕ್ಕಟ್ಟಿನಿಂದ ಪಾರಾಗುವ ಹಲವು ಪರ್ಯಾಯ ಕ್ರಮಗಳನ್ನು ಎಡ ಹಾಗೂ ಯು.ಎನ್.ಪಿ.ಎ ಪಕ್ಷಗಳು ನೀಡಿವೆ. ಇವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದರೆ ಒಂದು ಪರಿಹಾರ ಸಾಧ್ಯ ಆಗುತ್ತಿತ್ತು.

ಬೆಲೆ ಹೆಚ್ಚಳ ತಡೆದು, ಸುಲಭದರದಲ್ಲಿ ಜೀವನಾವಶ್ಯಕ ವಸ್ತುಗಳು ಸಿಗಬೇಕಾದರೆ ದೇಶದ ಮೂಲ ಆರ್ಥಿಕತೆಯಲ್ಲಿ ಕೆಲವು ಬದಲಾವಣೆಗಳು ಅತ್ಯಗತ್ಯ. ಜಾಗತಿಕವಾದ ಏರಿಕೆಯು ಬೆಲೆಯೇರಿಕೆಗೆ ಮೂಲ ಕಾರಣವೆಂದು ಸರ್ಕಾರ ವಾದಿಸುತ್ತಿದೆ. ಹೌದು ಜಾಗತಿಕವಾದ ಕೆಲವು ಬೆಳವಣಿಗೆಗಳು ಕಾರಣವಾಗಿವೆ. ಅದರಲ್ಲಿ ತೈಲದ ಬೆಲೆ ಏರಿಕೆಯು ಕೃಷಿ ರಂಗದ ಮೇಲೆ ಹೊರೆಯ ಪರಿಣಾಮ ಬೀಡುತ್ತದೆ. ಹಾಗೆಯೇ ಜೈವಿಕ ಇಂಧನದ ಬಳಕೆಯೂ ಸಹ. ಪ್ರಸಕ್ತವಾಗಿ ಇಂತಹ ಬಳಕೆಗೆ ಆದ್ಯತೆ ನೀಡುವುದು ತುಂಬಾ ದುಬಾರಿ. ಇಂದು ಅಮೇರಿಕಾದ ಮೆಕ್ಕೆ ಜೋಳದ ಉತ್ಪಾದನೆಯಲ್ಲಿ ಶೇ.20ರಷ್ಟು ಜೈವಿಕ ಅನಿಲದ ತಯಾರಿಕೆಗೆ ಬಳಕೆಯಾಗುತ್ತಿದೆ. ಇದರ ಅಗಾಧತೆ ಎಷ್ಟೆಂಬುದಕ್ಕೆ ದೊರೆತಿರುವ ಒಂದು ಮಾಹಿತಿಯನ್ನು ನೋಡಬಹುದು. ಕಾರೊಂದರ ತೈಲ ಟ್ಯಾಂಕ್ ಭರ್ತಿಯಾಗುವಷ್ಟು ಅನಿಲ ಉತ್ಪತ್ತಿಯಾಗಬೇಕೆಂದರೆ ಒಬ್ಬ ದೃಢಕಾಯದ ಮನುಷ್ಯ ವರುಷವೊಂದರಲ್ಲಿ ಬಳಸುವ ಒಟ್ಟು ಮೆಕ್ಕೆ ಜೋಳದ ಪ್ರಮಾಣವನ್ನು ಅನಿಲ ಉತ್ಪತ್ತಿಗೆ ಬಳಸಬೇಕು. ಹೀಗಿರುವಾಗ ಜಾಗತಿಕವಾಗಿ ಆಹಾರಧಾನ್ಯಗಳ ಉತ್ಪಾದನೆಯಲ್ಲಿ ಕುಸಿತ ಕಂಡಿರುವುದೂ ಇದೆ. ಇವೆಲ್ಲಕ್ಕೂ ಮುಖ್ಯವಾಗಿ ಆಹಾರಧಾನ್ಯಗಳ ಕ್ಷೇತ್ರಗಳಲ್ಲಿ 'ಮುಂಗಡ ವ್ಯಾಪಾರ'ವೇ ಅತ್ಯಂತ ಗಂಭೀರ ಪರಿಣಾಮ ಬೀರುತ್ತಿದೆ. ಫೆಬ್ರವರಿ 2008 ಅಂತ್ಯದಲ್ಲಿ ಗೋಧಿಯ ಬೆಲೆ ಶೇ.92ರಷ್ಟು, ಸೋಯಾಬಿನ್ ಬೆಲೆ ಶೇ.65ರಷ್ಟು ಜಾಗತಿಕವಾಗಿ ಹೆಚ್ಚಿರುವುದನ್ನು ಸಮೀಕ್ಷೆಗಳು ತಿಳಿಸಿವೆ. ಅಮೇರಿಕಾದ ದೈತ್ಯ ಹಣಕಾಸು ಸಂಸ್ಥೆಗಳು ಎದುರಿಸುತ್ತಿರುವ ಬಿಕ್ಕಟ್ಟಿನ ಹಾನಿಯಿಂದ ಪಾರಾಗಲು ಆಹಾರ ವಸ್ತುಗಳ ಮುಂಗಡ ವ್ಯಾಪಾರದಲ್ಲಿ ಬಂಡವಾಳ ತೊಡಗಿಸಿದ್ದು ಇದಕ್ಕೆ ಕಾರಣ ಎಂಬುದನ್ನು ಗುರುತಿಸಲಾಗಿದೆ. ವಿದೇಶದ, ದೇಶೀಯ ಕಂಪನಿಗಳನ್ನು ಇಂತಹ ಮುಂಗಡ ವ್ಯಾಪಾರದ ಕ್ಷೇತ್ರಕ್ಕೆ ಪ್ರವೇಶಿಸಲು ಅವಕಾಶ ಕಲ್ಪಿಸಿರುವುದು. ಭಾರತದಲ್ಲಿಯೂ ಘೋರ ಪರಿಣಾಮ ಸೃಷ್ಟಿಸಿದೆ. ಈ ಕಂಪನಿಗಳು ತಮ್ಮ ವ್ಯವಹಾರದಲ್ಲಿ ಆಹಾರಧಾನ್ಯವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡುಬಿಡುತ್ತಿವೆ. ಇನ್ನೊಂದೆಡೆ ಧಾನ್ಯಗಳ ಉತ್ಪತ್ತಿಯಾದರೂ ಸರ್ಕಾರವು ಆಹಾರಧಾನ್ಯಗಳನ್ನು ದಾಸ್ತಾನು ಮಾಡಲು ಕ್ರಮ ವಹಿಸುತ್ತಲೂ ಇಲ್ಲ. ಅದು 2003 -04ರಲ್ಲಿ 16.8 ಮಿಲಿಯ ಟನ್, 2005ರಲ್ಲಿ 14.4 ಮಿಲಿಯನ್, 2006ರಲ್ಲಿ 11.1 ಮಿಲಿಯನ್ ಟನ್‌ಗೆ ಕುಸಿದಿರುವುದನ್ನು ಗಮನಿಸಬಹುದು.

ಇಂತಹದ್ದಕ್ಕೆ ಮುಖ್ಯ ಕಾರಣ ಉದಾರೀಕರಣ, ಜಾಗತೀಕರಣದ ನೀತಿಗಳು, ಆಹಾರದ ಭದ್ರತೆಯನ್ನೇ ಕೈಬಿಟ್ಟು ಮುಕ್ತ ಮಾರುಕಟ್ಟೆಯ ಆರಾಧನೆಗೆ ತೊಡಗಿರುವ ಕೇಂದ್ರ ಸರ್ಕಾರದ ನೀತಿಗಳು. ಇದನ್ನು ಕೈಬಿಡಲು ಸರ್ಕಾರ ಸಿದ್ಧವಿಲ್ಲ. ಇಂತಹ ಗಂಭೀರ ಸಂದರ್ಭದಲ್ಲಿ ಕೇಂದ್ರ ಸರ್ಕಾರ ತನ್ನ ಹೊಣೆಯಾಗಿರುವ ಬೆಲೆ ಏರಿಕೆ, ಹಣದುಬ್ಬರದಿಂದ ಜನರನ್ನು ರಕ್ಷಿಸಬೇಕು. ಆ ಹಿನ್ನೆಲೆಯಲ್ಲಿ ಸಾರ್ವಜನಿಕ ಪಡಿತರ ವಿತರಣಾ ಪದ್ಧತಿ ಬಲಗೊಳಿಸುವುದು, ರಾಜ್ಯ ಸರ್ಕಾರಗಳಿಗೆ ನೀಡಲಾಗುತ್ತಿರುವ ಆಹಾರಧಾನ್ಯಗಳ ಪ್ರಮಾಣ ಕಡಿತಗೊಳಿಸಿರುವುದನ್ನು ರದ್ದುಗೊಳಿಸಿ ಹೆಚ್ಚಿಸಬೇಕು. ಸಬ್ಸಿಡಿಯನ್ನು ನೀಡಬೇಕು. 25 ವಸ್ತುಗಳನ್ನು ಮುಂಗಡ ವ್ಯಾಪಾರದ ವ್ಯಾಪ್ತಿಯಿಂದ ಹೊರಗಿಡಬೇಕು ಎಂದು ಆಯೋಗವೇ ತಿಳಿಸಿದೆ. ಪೆಟ್ರೋಲ್, ಡೀಸೆಲ್ ಮೇಲಿನ ಆಮದು ಸುಂಕ ಕಡಿಮೆ ಮಾಡುವುದು, ಕಾಳಸಂತೆಕೋರರು, ಅಕ್ರಮ ದಾಸ್ತಾನುದಾರರ ಮೇಲೆ ಮಿಂಚಿನ ಧಾಳಿ ನಡೆಯಬೇಕು ಎಂಬ ಎಡಪಕ್ಷಗಳ ಆಗ್ರಹವನ್ನು ಸರ್ಕಾರ ಪಾಲಿಸುವುದು ಅತಿ ಜರೂರಾಗಿದೆ. ಸನ್ನಿವೇಶದ ಗಂಭೀರತೆಯನ್ನು ಅರಿತು ಕೂಡಲೇ ಪರಿಹಾರಾತ್ಮಕ ಕ್ರಮವಹಿಸದಿದ್ದಲ್ಲಿ ವಾಜಪೇಯಿಯವರ ಎನ್.ಡಿ.ಎ ಸರ್ಕಾರಕ್ಕೆ ಆದ ಗತಿಯೇ ಯುಪಿಎಗೂ ಆದೀತು ಎಂಬುದನ್ನು ಮನಮೋಹನಸಿಂಗರು ಅರಿಯುವುದು ಒಳ್ಳೆಯದು.

ಗೂಂಡಾಗಿರಿ ಅವರ ಮಾದರಿ



ಈತ ಮಂತ್ರಿಯಾಗಿರುವಾಗ ಮುಖ್ಯಮಂತ್ರಿ ಮೇಲೆ ಕ್ರಿಮಿನಲ್ ಕೇಸ್ ಹಾಕಿದ. ಈಗ ಮಾಜಿ ಗೆಳೆಯನ ಮನೆಗೆ ಕಲ್ಲು ಹೊಡೆಸಿದ, ಕಾರುಗಳಿಗೆ ಬೆಂಕಿ ಇಟ್ಟ. ರಾಜ್ಯನಾಯಕರು ಚಪ್ಪಾಳೆ ತಟ್ಟಿದರು ಇದು ಗುಜರಾತ್ ಮಾದರಿಯ ಒಂದು ಸ್ಯಾಂಪಲ್ಲೇ!

ಮುಂಬರುವ ವಿಧಾನಸಭಾ ಚುನಾವಣೆಗೆ ವಿವಿಧ ರಾಜಕೀಯ ಪಕ್ಷಗಳ ಸಿದ್ಧತೆಯ ಪ್ರಕ್ರಿಯೆ ಹಾಗೂ ಎದುರಾಳಿಗಳನ್ನು ಎದುರಿಸುವ ಅವರದ್ದೇ ಶೈಲಿಯ ಕ್ರಮಗಳು ನಿಜಕ್ಕೂ ಆತಂಕ ತರುವಂತಹದ್ದಾಗಿದೆ. ಮೊದಲ ಹಂತದ ಚುನಾವಣೆಗೆ ನಾಮಪತ್ರ ಸಲ್ಲಿಕೆಯ ಅಂತಿಮ ದಿನ ಸಮೀಪಿಸುತ್ತಿರುವಾಗಲೇ ಅಭ್ಯರ್ಥಿಗಳ ಪೂರ್ಣ ಪಟ್ಟಿಯು ಪ್ರಕಟಣೆಯೇ ಆಗಿಲ್ಲ. ಇನ್ನೂ ಅಂತಿಮಗೊಳಿಸಿಲ್ಲ. ಗೆಲ್ಲಬಹುದಾದ 'ಅಭ್ಯರ್ಥಿಗಳ' ಶೋಧನೆಯಲ್ಲೇ ದಿನಕ್ಕೊಂದು ಲೆಕ್ಕಾಚಾರ ಹಾಕುವ ಈ ಪಕ್ಷಗಳು 'ಟಿಕೇಟ್' ಸಿಗದೇ ನಿರಾಶರಾಗಿ ಬಂಡಾಯ ಏಳುವ ಭಾರೀ ಕುಳಗಳಿಗಾಗಿ ಕಾಯುತ್ತಾ ಕುಳಿತಿವೆ. 'ಅಭ್ಯರ್ಥಿಗಳನ್ನು ಆರಿಸಿ ಆಗಿದೆ' ಎಂದು ಹೇಳಿಕೊಳ್ಳುವ ಬಿಜೆಪಿಯೂ ಸಹ ಎದುರಾಳಿ ಅಭ್ಯರ್ಥಿಯ ಶಕ್ತಿ ಪರಿಗಣಿಸಿ ಪಟ್ಟಿಯನ್ನು ಬದಲಿಸುತ್ತಿದೆ. ಇದು ನಿಜಕ್ಕೂ ಬಿಜೆಪಿ, ಕಾಂಗ್ರೆಸ್, ಜೆಡಿ(ಎಸ್) ನಂತಹ ಪಕ್ಷಗಳು ಚುನಾವಣೆಯನ್ನು ವಿಷಯಾಧಾರಿತವಾಗಿ ಎದುರಿಸಲು ಆಗದೇ ವಕ್ರಮಾರ್ಗ ಹಿಡಿದಿರುವುದಕ್ಕೆ ಉದಾಹರಣೆಯಾಗಿದೆ.

ಭಯೋತ್ಪಾದನೆ

ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಅದೂ ಕರ್ನಾಟಕದ ಆಡಳಿತ, ಅಧಿಕಾರವನ್ನು ಹಿಡಿಯಲು ಬಿಜೆಪಿಯು ಶತಾಯಗತಾಯ ಪ್ರಯತ್ನಕ್ಕೆ ಇಳಿದಿದೆ. ಅದಕ್ಕಾಗಿ ಸಾವಿರಾರು ಕೋಟಿ ರೂಪಾಯಿಗಳನ್ನು ಚೆಲ್ಲಲು ಸಿದ್ಧವಿದೆ. ಇದು ಸಂಘ ಪರಿವಾರದ ನಿರ್ಧಾರ ಸಹ ಎಂಬುದು ಬೇರೆ ಹೇಳಬೇಕಿಲ್ಲ. ಅಧಿಕಾರವನ್ನು ಸೀದಾ, ಸಾದಾ ರಾಜಕಾರಣದಿಂದ ಹಿಡಿಯಲು ಅಸಾಧ್ಯವೆಂದೇ ಭಾವಿಸಿರುವ ಬಿಜೆಪಿಯು ಪ್ರಜಾಪ್ರಭುತ್ವಕ್ಕೆ ಮಾರಕವಾದ ವಿಧಾನಗಳನ್ನು ಅನುಸರಿಸುತ್ತಿದೆ. ಅದು ಅಧಿಕಾರ ವಂಚಿತವೆಂಬ 'ಅನುಕಂಪ' ಸೃಷ್ಟಿಸಿಕೊಂಡು ಅದನ್ನೇ ಬಳಸಲು ಬಯಸಿರುವಾಗಲೇ ತನ್ನ 'ಸಿದ್ಧಾಂತಕ್ಕೆ ಬದ್ಧವಾಗಿಲ್ಲದಿದ್ದರೂ ಅಧಿಕಾರ ಅಪೇಕ್ಷಿತ ಅವಕಾಶವಾದಿಗಳನ್ನು ತನ್ನ ಪಕ್ಷಕ್ಕೆ ಸೇರಿಸಿಕೊಳ್ಳುತ್ತಿದೆ. ಇಂತಹ ಸಂದರ್ಭಸಾಧಕತೆ, ಅಧಿಕಾರದಾಹಿ ತನವು ಸಾಲದೆಂದು ಎದುರಾಳಿಗಳನ್ನು ಗೂಂಡಾಗಿರಿಯ ಮೂಲಕ ಹೆದರಿಸಿ, ಚುನಾವಣಾ ಕಣದಿಂದಲೇ ನಿರ್ಗಮಿಸು ವಂತೆ ಮಾಡುವ 'ಭಯೋತ್ಪಾದಕ' ಕೃತ್ಯಗಳಿಗೂ ಇಳಿದಿದೆ.

ಕ್ರಿಮಿನಲ್ ಕೃತ್ಯಗಳು

ಇದೇ ಶುಕ್ರವಾರದಂದು ಬಳ್ಳಾರಿ ನಗರದಲ್ಲಿ ಬಿಜೆಪಿಯ ಮಾಜಿ ಶಾಸಕ ಅನಿಲ್‌ಲಾಡ್ ಅವರ ಮನೆ ಮೇಲೆಯೇ ಧಾಳಿ ನಡೆಸಿ, ಮೂರು ಕಾರುಗಳಿಗೆ ಬೆಂಕಿ ಹಚ್ಚಿ ಪ್ರಾಣ ತೆಗೆಯುವ ಬೆದರಿಕೆ ಹಾಕಿರುವುದು ಮುಚ್ಚಿಟ್ಟಿದ್ದ ಅದರ ನಿಜವಾದ ಕರಾಳ ಮುಖವನ್ನು ಬಯಲಾಗಿಟ್ಟಿದೆ. ಇಂತಹ ಕೃತ್ಯಗಳ ನೇತೃತ್ವ ವಹಿಸಿದವ ಜೆಡಿ(ಎಸ್)/ಬಿಜೆಪಿ ಮೈತ್ರಿ ಸರ್ಕಾರದಲ್ಲಿ ಮಂತ್ರಿಯಾಗಿದ್ದ ಶ್ರೀರಾಮುಲು. ಬಿಜೆಪಿಯಲ್ಲೀಗ ಅಕ್ರಮ ಗಣಿಗಾರಿಕೆಯ ಜನಾರ್ಧನ ರೆಡಿಯದ್ದೇ ದರ್ಭಾರು. ಇದನ್ನು ವಿರೋಧಿಸಿ ಅನಿಲ್‌ಲಾಡ್‌ರು ಬಿಜೆಪಿಯ 'ಆಂತರಿಕ ವಿದ್ಯಮಾನಗಳಿಂದ ಬೇಸತ್ತು' ಹೊರಬಂದಿದ್ದರು. ನಂತರ ಕಾಂಗ್ರೆಸ್ ಸೇರಿದ್ದು, ಈ ಬಾರಿ ಬಳ್ಳಾರಿ ನಗರ ಕ್ಷೇತ್ರದಿಂದ ಚುನಾವಣೆಗೆ ಇಳಿಯುವುದು ಖಚಿತವಾಗಿತ್ತು. ಗಣಿಗಾರಿಕೆಯ ಕುಳವೇ ಆಗಿರುವ ಲಾಡ್‌ರ ಸ್ಪರ್ಧೆಯೂ ತೀವ್ರ ಪೈಪೋಟಿ ಸೃಷ್ಟಿಸುವುದಾಗಿದ್ದು ಇದನ್ನು ಸಹಜ ಸ್ಪರ್ದೆಯಿಂದ ಎದುರಿಸದೇ ಗೂಂಡಾಗಿರಿ, ಹಿಂಸಾಚಾರದಿಂದ ದಮನಿಸಲು ಬಿಜೆಪಿ ನಾಯಕರು ಯತ್ನಿಸುತ್ತಿರುವುದು ಖಂಡನೀಯವಾಗಿದೆ. ಪ್ರಜಾಪ್ರಭುತ್ವೀಯ ಮೌಲ್ಯಗಳಲ್ಲಿ ಎಳ್ಳಷ್ಟು ನಂಬಿಕೆ ಇಲ್ಲದ ಬಿಜೆಪಿಯ ಫಾಸಿಸ್ಟ್ ಮನೋಭಾವಕ್ಕೆ ಹಿಡಿದ ಕನ್ನಡಿಯಾಗಿದೆ. ಅಕ್ರಮದಂಧೆ, ಹಣಗಳಿಕೆ, ಅದನ್ನೇ ಉಳಿಸಿಕೊಳ್ಳಲು ಅಕ್ರಮ ವಿಧಾನಗಳು, ಕ್ರಿಮಿನಲ್ ಕೃತ್ಯಗಳೇ ಮೂರ್ತವೆತ್ತಿರುವ ಗಣಿ ಮಾಫಿಯಾ ಜನಾರ್ಧನರೆಡ್ಡಿ ಪರಿವಾರದ ಕೃತ್ಯಗಳು ಸಂಘಪರಿವಾರದ ಧೋರಣೆಗಳಿಗೆ ಸರಿ ಹೊಂದುತ್ತಿರುವುದು ಕಾಕತಾಳೀಯವೇನಲ್ಲ. ಇಂತಹವರನ್ನೇ ಬಿಜೆಪಿ ರಾಜ್ಯ, ರಾಷ್ಟ್ರ ನಾಯಕರು ಸಮರ್ಥಿಸುತ್ತಿದ್ದಾರೆ. ತಲೆ ಮೇಲೆ ಹೊತ್ತು ಮೆರೆಸುತ್ತಿದ್ದಾರೆ. ಕ್ರಿಮಿನಲ್ ಭೂಮಾಫಿಯಾ, ಗಣಿ ಮಾಫಿಯಾಗಳೇ ರಾಜ್ಯ ಬಿಜೆಪಿಯನ್ನು ನಿಯಂತ್ರಿಸುತ್ತಿವೆ.

ಗುಜರಾತ್ ಮಾದರಿಯ ಸ್ಯಾಂಪಲ್ಲೇ?

ಬಿಜೆಪಿ ಪಕ್ಷವು ಈ ಚುನಾವಣೆಗೆ ನಡೆಸಿರುವ ಕಸರತ್ತುಗಳು ಯಾವುದೇ ನೀತಿ, ನಿಯತ್ತುಗಳಿಲ್ಲದಿರುವುದನ್ನೇ ತೋರಿಸುತ್ತದೆ. ಕಾರ್ಯನಿರತ ಕ್ರಿಮಿನಲ್‌ಗಳು, ಪ್ರತಿಷ್ಟತೆಯ ಸೋಗಿನ ಗಣಿ-ಭೂಗಳ್ಳರು ಅಧಿಕಾರದಲ್ಲಿದ್ದಾಗ ಹಗರಣಗಳಲ್ಲಿ ಹೂತುಹೋದ ವೀರರು, ಭ್ರಷ್ಟರು, ಕೋಮುವಾದಿ ವೈರಸ್‌ಗಳು... ಇವರನ್ನೆಲ್ಲಾ ಮುಷ್ಠಿಯಲ್ಲಿಟ್ಟು ಕರ್ನಾಟಕವನ್ನು ಇನ್ನೇನು ಮಾಡಿಯಾರು? 'ಗುಜರಾತ್ ಮಾದರಿಗೆ' ಇವರೆಲ್ಲಾ ಕಾಲಾಳುಗಳು. ಈಗ ನಡೆದಿರುವ ಕರಾವಳಿ, ಬಳ್ಳಾರಿಯಲ್ಲಿನ ಘಟನೆಗಳು ಮೋದಿ ಮಾದರಿ ಎಂದರೆ ಏನೆಂದು ಸಾರಿ ಹೇಳುತ್ತಿವೆ. ಇಂತಹವರಿಗೆ ಜನ ತಕ್ಕ ಪಾಠ ಕಲಿಸದಿದ್ದರೆ ಕರ್ನಾಟಕ ಉಳಿದೀತೆ?

• • • • •

ಇದ್ದರೆ ಇರಲೇಬೇಕು ಅಧಿಕಾರದ ಕುರ್ಚಿಯಲ್ಲಿ!

ರಾಜಕೀಯ ಘಟನೆಗಳು ಹೇಗೆಲ್ಲಾ ಸಂಭವಿಸುತ್ತವೆ ನೋಡಿ. ಹಿಂದೆ ಗುಜರಾತ್‌ನ ಹತ್ಯಾಕಾಂಡ ನಡೆದಾಗ ಅದನ್ನು ಖಂಡಿಸಿದ್ದ ಆಗಿನ ಪೊಲೀಸ್ ಕಮಿಷನರ್ ಸಾಂಗ್ಲಿಯಾನ, ಹಿಂದೆ ಒಮ್ಮೆ ಧಾಳಿಖೋರರ ಜೊತೆಗೆ ಗುಜರಾತ್‌ನ ಆಡಳಿತಯಂತ್ರ ಮುಖ್ಯವಾಗಿ ಪೊಲೀಸರು ನೇರ ಭಾಗಿಯಾದದ್ದನ್ನು ಆತಂಕದಿಂದ ಹೇಳಿಕೊಂಡಿದ್ದರು. ನಂತರ ಅವರು ಬಿಜೆಪಿ ಸೇರಿ ಅಟಲ್ ಬಿಹಾರಿ ಕೈಬಲಪಡಿಸಿ ಭಾರತವನ್ನು ಹೊಳೆಸುವುದಾಗಿ ಹೇಳಿದ್ದರು! ಈಗ ಅವರೇ ಬಿಜೆಪಿಯ ಒಳ ರಸಾಯನದ ರುಚಿ ನೋಡಿ, ಈ ಬಾರಿ ಹೊರಬರುವ ಮಾತನ್ನಾಡುತ್ತಿದ್ದಾರೆ. ಅಲ್ಪಸಂಖ್ಯಾತರನ್ನು ಮರುಳುಗೊಳಿಸಲಷ್ಟೇ ತಮ್ಮಂಥಹವರನ್ನು ಉಪಯೋಗಿಸಿ ಕರಿಬೇವಿನ ಸೊಪ್ಪಿನಂತೆ ಬಿಸಾಡಲಾಗುತ್ತಿದೆ ಎಂದು ಕೊರಗಿದ್ದಾರೆ. ಒಂದು ಕಾಲು ಹೊರಗೆ ಎಂದೂ ತಿಳಿಸಿದ್ದಾರೆ. ಹಾಗೆಯೇ ಇಂದಿನ ಈ ಕ್ಷಣದವರೆಗೂ ಸಾಮಾಜಿಕ ನ್ಯಾಯಕ್ಕಾಗಿ, ಕೋಮುವಾದದ ವಿರುದ್ಧ ತಾವೆನ್ನುತ್ತಿದ್ದ ಪ್ರಗತಿಪರ ನಾಮದ ಹಿರಿಯ ಪೊಲೀಸ್ ಅಧಿಕಾರಿ ಸುಭಾಶ್ ಭರಣಿ ಬಿಜೆಪಿ ಪಕ್ಷಕ್ಕೆ ದಿಡೀರನೆ ಸೇರಿಕೊಂಡಿದ್ದಾರೆ. ಕಾಂಗ್ರೆಸ್ಸನ್ನು ನಂಬಿಯೇ ಬಂದಿದ್ದ ಭರಣಿ, ಖಾಕಿ ಬಿಚ್ಚಿಟ್ಟು ಖಾದಿ ತೊಟ್ಟು ಟಿಕೆಟ್ ಆಕಾಂಕ್ಷಿಯಾಗಿ ತಿರುಗುತ್ತಿದ್ದರು. ಟಿಕೆಟ್ ಸಿಗದಾಗ ಆಕಾಶವೇ ನೆಗೆದು ಬಿತ್ತು ಎಂದುಕೊಂಡು ಪ್ರಗತಿಪರ ಪಾದರಕ್ಷೆ ತೆಗೆದೊಗೆದು 'ಹಿಂದುತ್ವದ' ದೋಣಿಯಲ್ಲಿ ಕಾಲು ಹಾಕುತ್ತಿದ್ದಾರೆ. ಅದರಂತೆ ಕೋಮುಗಲಭೆಗಳ ಸಂದರ್ಭದಲ್ಲಿ ಪೊಲೀಸರ ಪಾತ್ರದ ಕುರಿತು ವಿದ್ವತ್‌ಪೂರ್ಣ ಲೇಖನ ಬರೆದಿದ್ದ ಮಾಜಿ ಪೊಲೀಸ್ ಅಧಿಕಾರಿ ಎಲ್.ರೇವಣಸಿದ್ದಯ್ಯ ಬಿಜೆಪಿಯೊಳಗೆ ಲಿಂಗೈಕ್ಯರಾಗಿದ್ದಾರೆ. ಇನ್ನೊಬ್ಬ ಅಧಿಕಾರಿ ಕೆ.ಸಿ.ರಾಮಮೂರ್ತಿ ಸದ್ಯ ಕಾಂಗ್ರೆಸ್‌ನಲ್ಲಿದ್ದಾರೆ. ಆದರೀಗ ಟಿಕೇಟ್ ಕೈತಪ್ಪಿದೆಯೆಂದು ಪರಿತಪಿಸುತ್ತಿದ್ದಾರೆ. ಹೇಗೂ ಇರಲಿ ಎಂದು ಬಿಜೆಪಿಯತ್ತಲೂ ಒಂದು 'ಅರ್ಜಿ' ಗುಜರಾಯಿಸಿದ್ದಾರೆ! ಹೀಗೇಕೆ ಇವರು ಮಾಡುತ್ತಿದ್ದಾರೆ ಖಾಕಿ ಉಟ್ಟು ಅಧಿಕಾರದ ದರ್ಬಾರು ಮಾಡಿದಾಯ್ತು. ಈಗ ಖಾದಿ ಉಟ್ಟ ಕೂಡಲೇ ಶಾಸಕರೂ, ಸಚಿವರೂ ಆಗಲೇಬೇಕು. ಈಗ ಕೆಲಸ ಮಾಡೋಣ, ಮುಂದೊಂದು ದಿನ ಜನ ಆರಿಸಲಿ ಎಂಬ ಕಿಂಚಿತ್ತೂ ಯೋಚನೆಯಾದರೂ ಇವರಲ್ಲಿ ಸುಳಿದೀತೆ? ಅಧಿಕಾರಿಗಳು ಕಾಯುವುದುಂಟೆ? ಬದಲು ಜನರನ್ನು ಕಾಯಿಸಿದವರಲ್ಲವೇ?

ದಿವಾಳಿತನದ ರಾಜಕಾರಣ

ಮಾಜಿ ಅಧಿಕಾರಿ ಶಾಹಿಗಳ ಕಥೆ ಹೀಗಿದ್ದರೆ

ಪುಟ 6ಕ್ಕೆ

'ಹೊಗೆ', 'ಬೆಂಕಿ' ಬೇಡ

ನೀರು ವಿದ್ಯುತ್ ಹಂಚಿಕೊಳ್ಳಬಹುದು

ನೀರಾವರಿ ತಜ್ಞರು, ಗಣ್ಯರ ಅಭಿಮತ

ಅಂತರ ರಾಷ್ಟ್ರೀಯ ನಿಯಮದ ಪ್ರಕಾರ ನದಿಯ ಮೇಲ್ಭಾಗದ ಜನರಿಗೆ ಯಾವುದೇ ರೀತಿ ಹಾನಿ ಆಗದಂತೆ ಕೆಳಭಾಗದ ಜನರು ತಮ್ಮ ಪಾಲಿನ ನೀರನ್ನು ಬಳಸಿಕೊಳ್ಳಬಹುದು. ಅದೇ ರೀತಿ ಧರ್ಮಪುರಿ, ಕೃಷ್ಣಗಿರಿ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸಲು ತಮಿಳುನಾಡು ಹೊಗೆನಕಲ್‌ನಲ್ಲಿ ಉದ್ದೇಶಿದ ಯೋಜನೆ ಕೈಗೊಳ್ಳಬಹುದು. ಆದರೆ ಕರ್ನಾಟಕದ ಭೂಭಾಗ .ಹಾನಿಗೊಳಗಾದಲ್ಲಿ ಅದಕ್ಕೆ ವಿದ್ಯುತ್ ಅನ್ನು ಪರಿಹಾರವಾಗಿ ಕೊಡಬೇಕು.

– ಎಚ್.ಎನ್.ನಂಜೇಗೌಡ
ಮಾಜಿ ಸಚಿವರು

★

ಜನಾಭಿಪ್ರಾಯ ರೂಪಿಸಬೇಕು

ಬಸ್‌ಗೆ ಬೆಂಕಿ ಕಲ್ಲು ತೂರಾಟದಂತಹ ಹೋರಾಟದಿಂದ ಕನ್ನಡಿಗರಿಗೆ ಗೌರವ ಬರುವುದಿಲ್ಲ. ಜನಾಭಿಪ್ರಾಯ ರೂಪಿಸುವ ಮೂಲಕ ಸರ್ಕಾರಗಳ ಮೇಲೆ ಒತ್ತಡ ತಂದು ರಾಜ್ಯದ ಹಿತವನ್ನು ಕಾಪಾಡಿಕೊಳ್ಳಬೇಕು.

ಪ್ರೊ. ರವಿವರ್ಮ ಕುಮಾರ್
ಹಿರಿಯ ನ್ಯಾಯವಾದಿಗಳು

★

ಆಗ ಅಭಿಮಾನವಿರಲಿಲ್ಲವೇ?

ಅನಂತಕುಮಾರ್ ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಸಚಿವರಾಗಿದ್ದಾಗಲೇ ಹೊಗೆನಕಲ್ ಯೋಜನೆಗೆ ಸಹಿ ಹಾಕಲಾಯಿತು. ಆಗ ಅವರಿಗೆ ಕರ್ನಾಟಕದ ಬಗೆಗೆ ಅಭಿಮಾನವಿರಲಿಲ್ಲವೇ? ಕೋಮುವಾದಿ ಪಕ್ಷವಾದ ಬಿಜೆಪಿ, ಕನ್ನಡ ಸಂಘಟನೆಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಭಾಗವಾಗಿ ಹೊಗೆನಕಲ್ ವಿವಾದವನ್ನು ಬಳಸಿಕೊಳ್ಳುತ್ತಿದೆ. ಕನ್ನಡಪರ ಸಂಘ ಸಂಸ್ಥೆಗಳು ಕೋಮುವಾದಿಗಳ ಹುನ್ನಾರಕ್ಕೆ ಬಲಿಯಾಗಬಾರದು.

– ಜಿ.ಎನ್.ನಾಗರಾಜ್
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು

★

ಸಹಭಾಗಿತ್ವ ಬೇಕು

"ಹೊಗೆನಕಲ್‌ನಲ್ಲಿ ತಮಿಳುನಾಡು, ಕರ್ನಾಟಕದ ಸಹಭಾಗಿತ್ವದಲ್ಲಿ ಯೋಜನೆ ಕೈಗೆತ್ತಿಕೊಳ್ಳಬೇಕು. ಕುಡಿಯುವ ನೀರು ಮತ್ತು ವಿದ್ಯುತ್ ಎರಡನ್ನು ಹಂಚಿಕೊಳ್ಳುವುದರಿಂದ ಯಾವುದೇ ವಿವಾದ ಉಂಟಾಗಲಾರದು"

– ಡಾ. ಸಿದ್ಧನಗೌಡ ಪಾಟೀಲ
ರಾಜ್ಯ ಕಾರ್ಯದರ್ಶಿ
ಸಿಪಿಐ ಕರ್ನಾಟಕ ರಾಜ್ಯ ಮಂಡಳಿ

ಕರುನಾಡ ಸೇನೆಯು ಸಂಘಟಿಸಿದ್ದ 'ಹೊಗೆನಕಲ್ ವಿವಾದ ಸತ್ಯ ಮಿಥ್ಯ' ಚರ್ಚಾಗೋಷ್ಠಿಯಲ್ಲಿ.

○

ಪಂಚಪ್ರಶ್ನೆ



ಬಿ.ಮಾಳಮ್ಮ, ಕರ್ನಾಟಕ ರಾಜ್ಯ ದೇವದಾಸಿಯರ ವಿಮೋಚನಾ ಸಂಘದ ರಾಜ್ಯಾಧ್ಯಕ್ಷೆ

ಸರಕಾರದ ದೇವದಾಸಿ ಪದ್ಧತಿ ನಿರ್ಮೂಲನಾ ಕ್ರಮಗಳು ತೃಪ್ತಿ ತಂದಿದೆಯೇ?

ಖಂಡಿತಾ ಇಲ್ಲ. 1983ರಲ್ಲಿ ನಡೆದ ಸರ್ವೆ ಕಾರ್ಯ ಅವೈಜ್ಞಾನಿಕವಾಗಿದೆ. ರಾಜ್ಯದಲ್ಲಿ 23 ಸಾವಿರ ದೇವದಾಸಿಯರಿದ್ದಾರೆ ಎಂದು ಸರಕಾರದ ಸರ್ವೆ ಹೇಳುತ್ತದೆ. ನಮ್ಮ ಸಂಘಟನೆಯಿಂದ ಸರ್ವೆ ಮಾಡಿದಾಗ ಒಂದು ಲಕ್ಷಕ್ಕೂ ಹೆಚ್ಚು ದೇವದಾಸಿಯರಿರುವುದು ಕಂಡುಬಂದಿದೆ. ಹೀಗಾಗಿ ಸರಕಾರದ ಸರ್ವೆ ಸಮರ್ಪಕವಾಗಿ ನಡೆದಿಲ್ಲ. ಭೂಮಿ, ನಿವೇಶನ, ಮನೆ, ಪಡಿತರ ಚೀಟಿ ಸೌಲಭ್ಯ ಕಲ್ಪಿಸಿದ್ದರೆ ಆರ್ಥಿಕ ಸ್ಥಿತಿ ಸುಧಾರಿಸಬಹುದಿತ್ತು.

●

ಉತ್ತರ ಕರ್ನಾಟಕ, ಹೈದ್ರಾಬಾದ್ ಕರ್ನಾಟಕದ ದೇವದಾಸಿ ಪದ್ಧತಿಗೆ ಕೊನೆಯಿಲ್ಲವೇ?

ದೇವದಾಸಿ ಪದ್ಧತಿಯನ್ನು ನಿರ್ಮೂಲನ ಮಾಡುವವರ್‍ಯಾರು? ಉ.ಕ., ಹೈ.ಕ. ಭಾಗದಲ್ಲಿ ಕೂಲಿಕಾರರು, ಶ್ರಮಿಕರು, ದಲಿತ, ಹಿಂದುಳಿದ ಕುಟುಂಬಗಳಿದ್ದು ಅದರಲ್ಲೂ ದಲಿತ ವರ್ಗದಲ್ಲಿ ಈ ಪದ್ಧತಿ ಜೀವಂತವಾಗಿದೆ. ಪರಿಶಿಷ್ಟ ಜಾತಿ, ವರ್ಗದವರ ಆರ್ಥಿಕ ಬಲವರ್ಧನೆಗೆ ಸರಕಾರ ಏನೂ ಕ್ರಮ ಕೈಗೊಂಡಿಲ್ಲ. ದೇವದಾಸಿ ಪದ್ಧತಿ ಜತೆಗೆ ಜೀತಪದ್ಧತಿಯೂ ವೇಗವಾಗಿ ಬೆಳೆಯುತ್ತಿದೆ.

●

ಉಚ್ಚಂಗಿದುರ್ಗ, ಚಂದ್ರಗುತ್ತಿ ಯಲ್ಲಿ ಮುತ್ತು ಕಟ್ಟುವ ಸಂಪ್ರದಾಯ ಇದೆಯಲ್ಲ....?

ಹೌದು. ಅದು ಆಗಾಗ್ಗೆ ಕದ್ದುಮುಚ್ಚಿ ನಡೆಯುತ್ತಿದೆ. ಇತ್ತೀಚೆಗೆ ಜನರಲ್ಲಿ ಸ್ವಲ್ಪ ಮಟ್ಟಿಗೆ ತಿಳುವಳಿಕೆ ಬಂದಿರುವುದರಿಂದ ಕಡಿವಾಣ ಹಾಕಿದಂತಾಗಿದೆ. ಅಲ್ಲದೆ ಕದ್ದುಮುಚ್ಚು ನಡೆಯುತ್ತಿರುವುದಕ್ಕೂ ಕಡಿವಾಣ ಹಾಕಬೇಕು. ಹಿಂದೆ ಆ ಸ್ಥಳಗಳು ರಾಜ್ಯದ ಸಾಂಸ್ಕೃತಿಕ ಕೇಂದ್ರಗಳಾಗಿದ್ದರಿಂದ ಮುತ್ತುಕಟ್ಟುವ ಸಂಪ್ರದಾಯ ಪ್ರಬಲವಾಗಿ ಬೆಳೆದಿತ್ತು.

●

ಇದರ ನಿರ್ಮೂಲನೆಗೆ ಸಂಘಟನೆ ಏನು ಮಾಡ್ತಿದೆ?

. ಸಂಘವು ರಾಜ್ಯವ್ಯಾಪಿ ವಿಸ್ತರಿಸಿದ್ದು ಜನರಲ್ಲಿ ತಿಳುವಳಿಕೆ ಮಟ್ಟ ಹೆಚ್ಚಿಸಲು ಸಾಧ್ಯವಾಗಿದೆ. ದೇವದಾಸಿಯರ ಸಮಸ್ಯೆಗಳ ಪಟ್ಟಿ ಮಾಡಿ 12 ಬೇಡಿಕೆಗಳನ್ನು ಈಡೇರಿಸಲು ಸರಕಾರವನ್ನು ಒತ್ತಾಯಿಸಲಾಗಿದೆ. ದೇವದಾಸಿಯರಿಗೆ ಮದುವೆ ಮಾಡಿಸುವುದು. ಕಾನೂನು ಅರಿವು ಮೂಡಿಸುವುದು, ಅನಿಷ್ಟ ಸಂಪ್ರದಾಯ, ಕಾರ್ಯಕ್ರಮಗಳಲ್ಲಿ ಭಾಗವಹಿಸದಂತೆ ನೋಡಿಕೊಳ್ಳುತ್ತಿದೆ. ಸಂಕಷ್ಟದಲ್ಲಿರುವವರನ್ನು ಮೇಲೆತ್ತಲು ಯೋಜನೆ ಹಮ್ಮಿಕೊಳ್ಳುತ್ತಿದೆ.

●

ಶಕ್ತಿ ದೇವತೆ ಹೆಸರಿನಲ್ಲಿ ಬಾಲಕಿ ಯರು ಈ ಪದ್ಧತಿಗೆ ಬಲಿಯಾಗುತ್ತಿದ್ದಾರೆ?

ಸಾಕ್ಷರತೆ ಕೊರತೆ, ಅಜ್ಞಾನ, ಮೂಢನಂಬಿಕೆ, ಬಡತನ, ಅಭದ್ರತೆ, ಶಕ್ತಿ ದೇವತೆ ಮೇಲಿಟ್ಟಿರುವ ಅಪಾರ ನಂಬಿಕೆ ದೇವದಾಸಿಯರಾಗಿ ಪರಿವರ್ತನೆಯಾಗಲು ಕಾರಣಗಳಾಗಿವೆ. ಪೋಷಕರ ಒತ್ತಡದಿಂದಾಗಿಯೂ ಬಾಲಕಿಯರು, ಯುವತಿಯರು ಅನ್ಯ ಮಾರ್ಗವಿಲ್ಲದೆ ಶರಣಾಗುತ್ತಿದ್ದಾರೆ. ಹೀಗಾಗಿ ಸರಕಾರ ಇಂಥ ಸೂಕ್ಷ್ಮ ನಂಬಿಕೆಗಳ ಕಡೆ ಗಮನ ಹರಿಸಬೇಕಿದೆ.

(ವಿಜಯ ಕರ್ನಾಟಕದಿಂದ)



ಡಾ. ಬಿ.ಆರ್. ಅಂಬೇಡ್ಕರ್‌ರವರ 117ನೇ ಜನ್ಮ ದಿನಾಚರಣೆಯಂದು ಸಿಪಿಐ(ಎಂ) ಧಾರವಾಡ ಜಿಲ್ಲಾ ಸಂಘಟನಾ ಸಮಿತಿಯ ಪರವಾಗಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಸಂಗಾತಿ ನಿತ್ಯಾನಂದಸ್ವಾಮಿಯವರು ಹುಬ್ಬಳ್ಳಿಯಲ್ಲಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುತ್ತಿರುವುದು. ಪಕ್ಷದ ಜಿಲ್ಲಾ ಸಂಘಟನಾ ಸಮಿತಿಯ ಕಾರ್ಯದರ್ಶಿ ಬಿ.ಎಸ್.ಸೊಪ್ಪಿನ್, ಸಮಿತಿ ಸದಸ್ಯರಾದ ಬಿ.ಐ. ಈಳಿಗೇರ, ಎಂ.ಎಸ್.ಹಡಪದ, ಹುಬ್ಬಳ್ಳಿ ಶಾಖೆಯ ಸದಸ್ಯರಾದ ಮಹೇಶ್ ಪತ್ತಾರ್ ಮತ್ತು ಬಿ.ವಿ.ಕೋರಿಮಠ ಉಪಸ್ಥಿತರಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರೇ 30 ಮುಸ್ಲಿಂ ಪೊಲೀಸರು !

ನಂಬಿದರೆ ನಂಬಿ, ಬಿಟ್ಟರೆ ಬಿಡಿ. ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮುಸ್ಲಿಂ ಪೋಲೀಸರ ಸಂಖ್ಯೆ ಕೇವಲ 30. ಅದರಲ್ಲಿ 2 ಎಸ್.ಐ. 2 ಎ.ಎಸ್.ಐ. 8 ಹೆಡ್ ಕಾನ್ಸ್‌ಟೇಬಲ್, 18 ಪೊಲೀಸ್ ಕಾನ್ಸ್‌ಟೇಬಲ್ ಸೇರಿದ್ದಾರೆ. ಆದರೆ, ಒಬ್ಬನೇ ಒಬ್ಬ ಎಸ್ಪಿ, ಎಎಸ್ಪಿ ಅಥವಾ ಡಿವೈಎಸ್ಪಿ ಇಲ್ಲವೇ ಇನ್ಸ್‌ಪೆಕ್ಟರ್ ದರ್ಜೆಯ ಅಧಿಕಾರಿಗಳು ಇರಲಿಲ್ಲ. ಅದಲ್ಲದೆ ಜಿಲ್ಲೆಯ 28 ಠಾಣೆಗಳ ಪೈಕಿ 9 ಠಾಣೆಗಳಲ್ಲಿ ಮುಸ್ಲಿಂ ಪೋಲೀಸರೇ ಇಲ್ಲ.

ಮೂರು ಉಪವಿಭಾಗ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ನಗರ, ಪಣಂಬೂರು, ಪುತ್ತೂರು, ಹೀಗೆ 3 ಉಪವಿಭಾಗವಿದೆ. ಇಲ್ಲಿ ಸದ್ಯ ಇಬ್ಬರು ಐಪಿಎಸ್ ದರ್ಜೆ ಮತ್ತು ಒಬ್ಬ ಡಿವೈಎಸ್‌ಪಿ ದರ್ಜೆಯ ಅಧಿಕಾರಿಗಳು ಇದ್ದಾರೆ. ಈ 3 ಉಪವಿಭಾಗದಲ್ಲಿ ಒಟ್ಟು 28 ಪೋಲೀಸ್ ಠಾಣೆಗಳಿವೆ. ಅದರಲ್ಲಿ ಮಂಗಳೂರಿನ ಮಹಿಳಾ ಮತ್ತು ಮಂಗಳೂರು ನಗರದಲ್ಲಿರುವ 2 ಟ್ರಾಫಿಕ್ ಠಾಣೆಗಳೂ ಸೇರಿದೆ. ಇಲ್ಲೆಲ್ಲಾ ಸಾವಿರಕ್ಕೂ ಅಧಿಕ ಪೋಲೀಸರು ಕಾರ್ಯ ನಿರ್ವಹಿಸುತ್ತಿದ್ದಾರೆ. ಆದರೆ, ಮುಸ್ಲಿಂ ಪೋಲೀಸರ ಸಂಖ್ಯೆ ಬೆರಳೆಣಿಕೆಯಷ್ಟು.

ಮಂಗಳೂರು ಉಪವಿಭಾಗದಲ್ಲಿ 8 ಪೋಲೀಸ್ ಠಾಣೆಗಳಿದ್ದು, ಅದರಲ್ಲಿ ಪಾಂಡೇಶ್ವರ, ಬಂದರ್, ಬರ್ಕೆ, ಕದ್ರಿ, ಉರ್ವ, ಮಹಿಳಾ, ಟ್ರಾಫಿಕ್ ಈಸ್ಟ್, ಟ್ರಾಫಿಕ್ ವೆಸ್ಟ್‌ಗಳಿಗೆ ತಲಾ ಒಬ್ಬೊಬ್ಬರು ಇನ್ಸ್‌ಪೆಕ್ಟರ್‌ಗಳಿದ್ದಾರೆ. ಆದರೆ, ಎಲ್ಲೂ ಕೂಡ ಮುಸ್ಲಿಂ ಇನ್ಸ್‌ಪೆಕ್ಟರ್‌ಗಳಿಲ್ಲ.

ಟ್ರಾಫಿಕ್ ವೆಸ್ಟ್‌ನಲ್ಲಿ ಒಬ್ಬ ಮುಸ್ಲಿಂ ಎಸ್.ಐ, ಒಬ್ಬ ಎಎಸ್‌ಐ, ಒಬ್ಬ ಪಿಸಿ, ಪಾಂಡೇಶ್ವರದಲ್ಲಿ ಒಬ್ಬ ಹೆಚ್.ಸಿ., ಉರ್ವದಲ್ಲಿ ಒಬ್ಬ ಹೆಚ್.ಸಿ., ಬಂದರ್‌ನಲ್ಲಿ ಒಬ್ಬ ಪಿ.ಸಿ, ಕದ್ರಿಯಲ್ಲಿ ಇಬ್ಬರು ಪಿಸಿ ಮತ್ತು ಮಹಿಳಾ ಠಾಣೆಯಲ್ಲಿ ಒಬ್ಬರು ಮುಸ್ಲಿಂ ಮಹಿಳಾ ಪಿಸಿ ಇದ್ದಾರೆ. ಬರ್ಕೆ ಮತ್ತು ಟ್ರಾಫಿಕ್‌ನಲ್ಲಿ ಒಬ್ಬನೇ ಒಬ್ಬ ಮುಸ್ಲಿಂ ಪೋಲೀಸ್ ಇಲ್ಲ. ಮಂಗಳೂರು ನಗರ ಉಪವಿಭಾಗದಲ್ಲಿ 1.ಎಸ್.ಐ., 1 ಎಎಸ್‌ಐ, 2 ಹೆಚ್.ಸಿ., 5 ಪಿಸಿಗಳ ಸಹಿತ ಒಟ್ಟು ಇಲ್ಲಿ 9 ಮಂದಿ ಇದ್ದಾರೆ.

ಪಣಂಬೂರು ಉಪ ವಿಭಾಗ ಪುತ್ತೂರುಗಳಲ್ಲಿನ ಪರಿಸ್ಥಿತಿ ಇದಕ್ಕಿಂತ ಬಹಳ ಭಿನ್ನವಾಗೇನೂ ಇಲ್ಲ. ಈಗಾಗಲೇ ಕರ್ನಾಟಕದ ಕರಾವಳಿಯನ್ನು ಸಂಘ ಪರಿವಾರವು ಹಿಂದುತ್ವ ಪ್ರಯೋಗ ಶಾಲೆಯಾಗಿ ರೂಪಿಸಿ ಬಾರಿ ಪ್ರಯೋಗವನ್ನು ನಡೆಸುತ್ತಿದೆ. ಅಲ್ಪಸಂಖ್ಯಾತರ ಮೇಲೆ ಹಲವು ಬಗೆಯ ಅಪಪ್ರಚಾರ, ಸುಳ್ಳು ಸುದ್ದಿ ವದಂತಿ ಹರಡುವುದು, ದೌರ್ಜನ್ಯ ನಡೆಸುವುದು, ಮನೆ, ಮಾರುಗಳಿಗೆ ಬೆಂಕಿ ಇಡುವುದು, ಅಂಗಡಿ ಮುಂಗಟ್ಟು ನಾಶ ಇಂಥದ್ದೆಲ್ಲಾ ನಡೆಯುತ್ತಿದೆ. ಇಂತಹ ಸೂಕ್ಷ್ಮ ಪರಿಸ್ಥಿತಿಯಲ್ಲಿ ಎಲ್ಲ ಸಮುದಾಯ ಎಲ್ಲ ವಿಭಾಗಗಳಿಗೆ ಸೇರಿದ ಜನರು ಪೋಲೀಸ್ ಪಡೆಯಲ್ಲಿ ಇರಬೇಕಾದದ್ದು ಮತ್ತು ಅವರು ಜಾತ್ಯಾತೀತ ನಿಷ್ಪಕ್ಷಪಾತ ಮನೋಭಾವದವಾಗಿರಬೇಕಾದದ್ದು ತುಂಬಾ ಅಗತ್ಯ. ಇಲ್ಲವಾದರೆ ಪೋಲಿಸರು ಗಲಭೆ ಕೋರರೊಂದಿಗೆ ಕೈಜೋಡಿಸಬಹುದು ಇಲ್ಲವೇ ತಾವೇ ಹಿಂಸಾಚಾರವನ್ನು ನಡೆಸಬಹುದು. ಇದೆಲ್ಲಾ ಅಸಾಧ್ಯವೇನೂ ಅಲ್ಲ. ಮುಂಬೈ ಗಲಭೆ, ಇತ್ತೀಚಿನ ಗುಜರಾತ್ ನರಮೇಧಗಳಲ್ಲಿ ಇಂಥದ್ದೆಲ್ಲಾ ನಡೆದಿದೆ ಎನ್ನುವುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳಿವೆ.

ಅಂಕಿ ಸಂಖ್ಯೆಗಳು : ಕರಾವಳಿ ಅಲೆ

ಜನಶಕ್ತಿ ಕನ್ನಡ ವಾರಪತ್ರಿಕೆ

ಕೊನೆಗಾಲದವರೆಗೂ ಜನಪರ ತತ್ವಕ್ಕೆ ಬದ್ಧರಾಗಿ ಬರೆದ, ಬರೆಸಿದ, ಬದುಕಿದ ಶಾಂತರಸ ಇಂದು ನಮ್ಮೊಂದಿಗಿಲ್ಲ. ಅವರು ಬಿಟ್ಟುಹೋದ ಶ್ರೀಮಂತ ಸಾಹಿತ್ಯ, ಸ್ಫೂರ್ತಿ ನಮ್ಮೊಂದಿಗಿದೆ...

ಗಜ಼ಲ್ ಗಾರುಡಿಗ ಶಾಂತರಸ

ಡಾ. ಮೀನಾಕ್ಷಿ ಬಾಳಿ

ಕನ್ನಡದ ಪ್ರಥಮ ಗಜಲ್‌ಕಾರ, ಸಾಹಿತ್ಯಲೋಕದ ದಿಗ್ಗಜ. ಹೈದ್ರಾಬಾದ್ ಕರ್ನಾಟಕದ ಸ್ವಾಭಿಮಾನದ ಸಂಕೇತ ನಾಡೋಜ "ಶಾಂತರಸ" ಮೊನ್ನೆ ಅಂದರೆ ದಿನಾಂಕ 13.4.08ರಂದು ಸಾವಿನ ಮನೆಗೆ ನಡೆದರು. ಶಾಂತರಸ ಕೇವಲ ಕನ್ನಡದ ಕವಿ, ಲೇಖಕ ಎಂದು ಮಾತ್ರವಲ್ಲ; ಏಕೆ ಬರೆಯಬೇಕು ಮತ್ತು ಯಾರಿಗಾಗಿ ಬರೆಯಬೇಕು ಎಂಬುದರ ಬಗೆಗೆ ಸ್ಪಷ್ಟವಾದ ನಿಲುವನ್ನು ಹೊಂದಿದ ಒಂದು ಪರಂಪರೆಯೇ ಆಗಿದ್ದರು. ಹೌದು ಶಾಂತರಸ ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಭಾಷಿಕವಾಗಿ ಅವಜ್ಞೆಗೆ ತುತ್ತಾಗಿದ್ದ ರಾಜಕೀಯವಾಗಿ ಹಲವು ಕೀಳರಿಮೆಗೆ ಒಳಗಾಗಿದ್ದ ಹೈದ್ರಾಬಾದ್ ಕರ್ನಾಟಕದ ಭಾಗದಲ್ಲಿ ಕನ್ನಡದ ದೀಕ್ಷೆ ತೊಟ್ಟ ಛಲಗಾರರಾಗಿದ್ದರು.

ಕನ್ನಡ ಕಟ್ಟಿದವರು

ಹೈದ್ರಾಬಾದ್ ಕರ್ನಾಟಕದ ಎಡೆದೊರೆ ನಾಡು ಎಂದೇ ಪರಿಚಿತವಾಗಿದ್ದ ರಾಯಚೂರು ಜಿಲ್ಲೆಯ ಹೆಂಬೇರಾಳು ಎಂಬ ಪುಟ್ಟಹಳ್ಳಿಯಲ್ಲಿ ದಿನಾಂಕ 2.08.1924ರಲ್ಲಿ ಜನಿಸಿದರು. ಬೀದರ್ ಎಂಬ ಧರಿನಾಡು, ಗುಲ್ಬರ್ಗಾವೆಂಬ ಸಗರನಾಡು, ರಾಯಚೂರಿನ ಎಡೆದೊರೆನಾಡಿನ ಭಾಗಗಳು ಅಖಂಡ ಆರುನೂರು ವರ್ಷಗಳವರೆಗೆ ಅನ್ಯಭಾಷಿಕ ಪಾಳೇಗಾರಿ ಶಕ್ತಿಗಳ ಧಾಳಿಗೆ ನಲುಗಿ ಹೋಗಿದ್ದ ಕಾಲ ಅದಾಗಿತ್ತು. ಒಂದೆಡೆ ಉರ್ದು ಭಾಷೆಯ ಹೇರಿಕೆ, ಇನ್ನೊಂದೆಡೆ ಮರಾಠಿಯ ದಬ್ಬಾಳಿಕೆಯ ನಡುವೆ ಕನ್ನಡವೂ ಸುಖಾಸುಮ್ಮನೆ ಬದುಕುಳಿಯಲು ಹೆಣಗಾಡುತ್ತಿತ್ತು. ಹಾಗೆ ನೋಡಿದರೆ ಇಲ್ಲಿನವರ ಉನೆ, ಮನ, ಭಾವದ ಭಾಷೆ ಅಚ್ಚಗನ್ನಡವೇ. ಕನ್ನಡ ಬಿಟ್ಟರೆ ಬೇರೆ ಭಾಷೆಯ ಸೋಂಕಿರದ ಅಸಂಖ್ಯ ನಾಡಾಡಿಗರು ವಚನ, ತತ್ವಪದ, ಕೀರ್ತನೆಗಳ ಕನ್ನಡವನ್ನು ಹಾಸಿ ಹೊದ್ದುಕೊಂಡಿದ್ದರು. ಆದರೆ ಮೊಘಲರ ಸುಬೇದಾರನಾಗಿದ್ದ ನಿಜಾಮನ ನೇರ ಆಳ್ವಿಕೆಗೆ ಒಳಪಟ್ಟಿದ್ದ ಈ ನಾಡವರು ಆಡಳಿತಾತ್ಮಕ ಮತ್ತು ವ್ಯವಹಾರಿಕವಾಗಿ ಉರ್ದು ಬಳಸದಿದ್ದರೆ ಗತ್ಯಂತರವೇ ಇರಲಿಲ್ಲ. ಇನ್ನೊಂದೆಡೆ ಪೇಶ್ವೆಯರ ಆಳ್ವಿಕೆಯ ಗಡಿಭಾಗಗಳಾಗಿರುವ ಹಳ್ಳಿಗಳಲ್ಲಿ ಮರಾಠಿ ತನ್ನಷ್ಟಕ್ಕೆ ಕನ್ನಡ ಪ್ರದೇಶ ಮತ್ತು ಭಾಷೆಗಳ ಮೇಲೆ ಒತ್ತಾಯದ ಸವಾರಿ ಮಾಡುತ್ತಿತ್ತು. ಅಂಥ ತ್ವೇಷಮಯ ಕ್ಲಿಷ್ಟಕರ ವಾತಾವರಣದ ನಡುವೆ ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನ ಚನ್ನಬಸವ ಪಟ್ಟದ್ದೇವರಂಥವರು ಮಠದ ಹೊರಗೆ ಉರ್ದುಬೋರ್ಡ್ ಹಾಕಿ ಒಳಗೆ ಮಕ್ಕಳಿಗೆ ಕನ್ನಡ ಕಲಿಸುವ ರಿಸ್ಕ್ ತೆಗೆದುಕೊಳ್ಳುತ್ತಿದ್ದರು. ಅಪ್ರತಿಮ ಕನ್ನಡದ ಕಟ್ಟಾಳು ಭಾಲ್ಕಿ ಪಟ್ಟದ್ದೇವರ ಗರಡಿಮನೆಯಲ್ಲಿ ಬೆಳೆದ ಶಾಂತರಸರು ಬಿ.ಎ.ಆನರ್ಸ್‌ವರೆಗೆ ಉರ್ದು ಮೀಡಿಯಂನಲ್ಲಿ ಅಭ್ಯಾಸ ಮಾಡಿದರೂ ಹಟತೊಟ್ಟು ಕನ್ನಡವನ್ನು ಬೆಳೆಸಿ ಕನ್ನಡದಲ್ಲಿ ಸಾಹಿತ್ಯ ರಚಿಸುವ ಪರಂಪರೆಗೆ ನಾಂದಿ ಹಾಡಿದರು. ಶಾಂತರಸರೇ ಸಾಂದರ್ಭಿಕವಾಗಿ ಹಲವಾರು ಸಲ ನಮ್ಮೊಟ್ಟಿಗೆ ಹೇಳಿರುವಂತೆ ಅಂದು ಉರ್ದು ಮೀಡಿಯಂನಲ್ಲಿ ಕಲೆತು ಡಿಗ್ರಿ ಪಡೆದರೆ ಮಾತ್ರ ಸರಕಾರಿ ನೌಕರಿ, ಸಂಬಳ ಪಡೆಯಲು ಸಾಧ್ಯವಿತ್ತು.

ವಚನ ತತ್ವಪದ ಪ್ರಚಾರ

ಅಂದು ಈ ಭಾಗದವರಿಗೆ ಅನ್ನ, ಸೂರು ಮತ್ತು ರಾಜಮರ್ಯಾದೆ ದಕ್ಕಬೇಕಾದರೆ ಉರ್ದು ಅನಿವಾರ್ಯವಾಗಿತ್ತು. ಆದರೆ ಕನ್ನಡ ಇವರ ತಲೆತಲಾಂತರದ ತಾಯಿಭಾಷೆ, ಸ್ವಾಭಿಮಾನ ಎಲ್ಲವೂ ಆಗಿತ್ತು. ಶಾಂತರಸರು ಬದುಕಿಗಾಗಿ ಉರ್ದು ಪಂಡಿತರೆನಿಸಿಕೊಂಡರೂ ಕನ್ನಡದ ಹಣತೆಯ ಬೆಳಕಿನಲ್ಲಿಯೇ ಸಾಹಿತ್ಯ ರಚನೆಯ ಕಸುವನ್ನು ಪಡೆದುಕೊಂಡರು. ಇವರು ತಮ್ಮ ಗೆಳೆಯರಾದ ವೀರಣ್ಣಗೌಡ ನೀರಮಾನ್ವಿ, ಚನ್ನಬಸವ ಬೆಟ್ಟದೂರು, ಶಂಕರಗೌಡ ಬೆಟ್ಟದೂರು, ಗುರುಬಸಯ್ಯ ಅಮ್ಮಾಪೂರ ಮುಂತಾದವರ ಜೊತೆಗೂಡಿ ಆ ಕಾಲಕ್ಕೆ ಹಳ್ಳಿಹಳ್ಳಿಗೂ ಸಂಚರಿಸಿ ಕನ್ನಡದ ವಚನ, ತತ್ವಪದ ಕುರಿತು ಪ್ರಚಾರ, ಪ್ರಸಾರ ಕಾರ್ಯವನ್ನು ಮಾಡಿದರು. ವಚನವೆಂದರೆ ಅದು ವೈದಿಕ ವಿರೋಧಿ ತಾತ್ವಿಕ ಸಂಘರ್ಷ, ಜಾತಿ, ವರ್ಗ, ವರ್ಣ, ಲಿಂಗ ಮುಂತಾದ ತಾರತಮ್ಯಗಳ ವಿರುದ್ಧ ಹೂಡುವ ಬಂಡಾಯವಾಗಿತ್ತು. ಶಾಂತರಸ ಮತ್ತು ಅವರ ಗೆಳೆಯರ ಬಳಗ ಅಂದು ವಚನ ಮತ್ತು ಕನ್ನಡ ಈ ಎರಡನ್ನು ಉಸಿರಾಗಿಸಿಕೊಂಡು ವೈದಿಕವಾದಿಗಳ ವಿರುದ್ಧ ಸಮರವನ್ನೇ ಸಾರಿದರು.

> **ಎದೆಯ ಗಾಯಗಳು ಮಾಯದಿದ್ದರೂ ಕೊನೆಗೆ ರಾಜಿ ಬೇಡ -ಎನ್ನುವ ಶಾಂತರಸರು ವೈಯಕ್ತಿಕ ಗಜಲ್ ಲೋಕವನ್ನು ಸಮಾಜಮುಖಿ ಚಿಂತನೆಯತ್ತ ಹೊರಳಿಸಿದರು. ತಮ್ಮೊಟ್ಟಿಗೆ ಹಲವು ಕನ್ನಡಿಗರಿಗೆ ಗಜಲ್ ಬರೆಯುವ ಹುಚ್ಚು ಹಚ್ಚಿ ಹೋದರು.**

ಜಗಳಗಂಟ

ಸ್ವಂತ ಜಾತಿ ಜಂಗಮ ಕರ್ಮಠರ ಮನೆಯಲ್ಲಿ ಜನಿಸಿದ್ದ ಶಾಂತಯ್ಯ ತಮ್ಮ ತಂದೆಯ ಪಂಚಾಂಗ ವೃತ್ತಿಯನ್ನೇ ಧಿಕ್ಕರಿಸಿದ್ದು ಸಾಮಾನ್ಯ ಸಂಗತಿಯಾಗಿರಲಿಲ್ಲ. ತಮ್ಮ ಎಂಟನೇ ವರ್ಗದ ಅವಧಿಯಲ್ಲಿಯೇ ಜ್ಯೋತಿಷ್ಯ ಹೇಳುವ ಅಪ್ಪನ ವೃತ್ತಿಯನ್ನು ವಿರೋಧಿಸಿ ಜಗಳಕ್ಕೆ ನಿಂತರಲ್ಲದೆ ಬದುಕಿನುದ್ದಕ್ಕೂ ಜಾತಿ ಜಂಗಮತ್ವದ ಫ್ಯೂಡಲ್ ಮನೋಭಾವವನ್ನು ಕಿತ್ತೆಸೆಯಲು ಸೆಣಸಾಡಿದರು. ಬಸವಾದಿ ಶರಣ ಸಿದ್ಧಾಂತವನ್ನು ನಂಬಿಕೊಂಡಿದ್ದ ಶಾಂತರಸರು ಬದುಕು ಮತ್ತು ಬರಹಗಳಲ್ಲಿ ಸಮಾಜವಾದಿ ನೆಲೆಗಳನ್ನೇ ಎತ್ತಿ ಹಿಡಿದದ್ದು ಅಪರೂಪದ ಸಂಗತಿ. ಅಪರೂಪ ಏಕೆಂದರೆ ಶಾಂತರಸರು ಸೈದ್ಧಾಂತಿಕವಾಗಿ ಎಂದಿಗೂ ಎಳ್ಳಷ್ಟು ಅಲುಗಾಡಲಿಲ್ಲ. ಶರಣರ ಸಮಾನತೆಯ ತತ್ವಗಳಿಗಾಗಿ ಅವರು ಸಮಕಾಲೀನ ನೂರಾರು ಸಂಘರ್ಷಗಳಿಗೆ ಇಂಬುಕೊಟ್ಟರಲ್ಲದೆ; ತತ್ವರಹಿತರೊಂದಿಗೆ ಯಾವುದೇ ಕಾರಣಕ್ಕೂ ರಾಜಿ ಮಾಡಿಕೊಳ್ಳಲಿಲ್ಲ. "ನ್ಯಾಯ ನಿಷ್ಠುರಿ; ದಾಕ್ಷಿಣ್ಯಪರ ನಾನಲ್ಲವಯ್ಯ. ಲೋಕವಿರೋಧಿ



ಶರಣನಾರಿಗೂ ಅಂಜುವವನಲ್ಲ" ಎಂಬ ಬಸವಣ್ಣನ ವಚನದಂತೆ ಬಾಳಿದ ಶಾಂತರಸರು ಸಾಹಿತ್ಯಲೋಕದಲ್ಲಿ ಜಗಳಗಂಟರೆಂದೇ ಛಾಪು ಮೂಡಿಸಿದರು.

'ಬೆನ್ನ ಹಿಂದಿನ ಬೆಳಕು'

ಎಪ್ಪತ್ತು , ಎಂಭತ್ತರ ದಶಕದಲ್ಲಿ ಲಂಕೇಶರು ಹೈದ್ರಾಬಾದ್ ಕರ್ನಾಟಕದ ಕವಿಗಳನ್ನು ಉದ್ದೇಶಪೂರ್ವಕವಾಗಿಯೇ ದೂರವಿಟ್ಟು ಅಕ್ಷರ ಹೊಸ ಕಾವ್ಯ ಎಂಬ ಪ್ರಾತಿನಿಧಿಕ ಕವನ ಸಂಕಲನವನ್ನು ಹೊರತಂದಾಗ ಶಾಂತರಸರು ಅದನ್ನು ದಿಟ್ಟತನದಿಂದ ಪ್ರತಿಭಟಿಸಿದರು. ರಾಜಧಾನಿ ವಲಯದ ಮುದ್ದಾಂ, ಉದ್ದಾಮ ಸಾಹಿತಿಗಳೊಂದಿಗೆ ವಾದಕ್ಕಿಳಿದು ಹೈದ್ರಾಬಾದ್ ಕರ್ನಾಟಕದ ಕನ್ನಡ ಬರಹಗಾರರ ಪ್ರತಿಭಟನೆಯ ವಿರಾಡ್ರೂಪವನ್ನು ಎತ್ತಿ ತೋರಿಸಿದರು. ಅಷ್ಟಕ್ಕೂ ನಮ್ಮ ಭಾಗದ ಸಾಹಿತ್ಯವನ್ನು ಮೈಸೂರು ಕರ್ನಾಟಕದ ಜಾನಾಮಾನಾ ಪಂಡಿತರು ಇದು 'ಕನ್ನಡವೇ ಅಲ್ಲ' ಎಂದು ಅಲ್ಲಗಳೆದರಂತೆ. ಆಗ ಸೆಟೆದೆದ್ದ ಶಾಂತರಸರು ಹೈದ್ರಾಬಾದ್ ಕರ್ನಾಟಕ ಭಾಗದವರ ಕವನಗಳನ್ನು ಸಂಗ್ರಹಿಸಿ "ಬೆನ್ನಹಿಂದಿನ ಬೆಳಕು" ಎಂಬ ಪ್ರಾತಿನಿಧಿಕ ಸಂಕಲನವನ್ನು ಪ್ರಕಟಿಸಿ ಸಾಹಿತ್ಯಲೋಕದ ಸಾಂಸ್ಕೃತಿಕ ರಾಜಕಾರಣವನ್ನು ಬಟ್ಟಬಯಲುಗೊಳಿಸಿದರು.

ಬರೆಸಿದರು

ಶಾಂತರಸರು ಸ್ವಂತ ಬರೆದದ್ದರ ಹತ್ತು ಪಟ್ಟು ಇತರರಿಂದ ಬರೆಸಿದರು. ನಮ್ಮ ಭಾಗದಲ್ಲಿ ಯಾರೇ ಒಂದು ಚಿಕ್ಕ ಕವನ, ಕಥೆ, ಲಲಿತ ಪ್ರಬಂಧ, ರೇಡಿಯೋ ಬರಹ ಏನೇ ಬರೆಯಲಿ ಅವರ ಬೆನ್ನು ಚಪ್ಪರಿಸಿ ಪ್ರೋತ್ಸಾಹಿಸಿ ಅದರ ಪ್ರಕಟಣೆಗಾಗಿ ಇತರರೊಂದಿಗೆ ಕುಸ್ತಿ ಹಿಡಿಯುವುದು ಅನಿವಾರ್ಯವಾಗುತ್ತಿತ್ತು. ಹೀಗೆ ಹೈದ್ರಾಬಾದ್ ಕರ್ನಾಟಕ ಭಾಗದ ಆಧುನಿಕ ಮತ್ತು ಆಧುನಿಕೋತ್ತರ ಸಾಹಿತ್ಯ ಪರಂಪರೆಗೆ ಇವರು ಸ್ಪಷ್ಟವಾದ ಅಷ್ಟೇ ಗಟ್ಟಿಯಾದ ನೆಲೆಯನ್ನು ರೂಪಿಸಿಕೊಟ್ಟರು. ಆದ್ದರಿಂದಲೇ ಶಾಂತರಸರು ವೈಯಕ್ತಿಕ ನೆಲೆಯ ಲೇಖಕರಲ್ಲ. ಅವರದು ಸಮೂಹಸೃಷ್ಟಿ. ಅವರು ನಿಂತಲ್ಲಿ ಅನುಭವ ಮಂಟಪ ನೆರೆಯುತ್ತಲೆ ಇರುತ್ತಿತ್ತು. ಶಾಂತರಸರೊಂದಿಗೆ ಒಂದು ಸಲ ಕುಳಿತರೂ ಸಾಕು ಅವರ ಛಾಪು ಕುಳಿತವರ ಮೈ ಮನಗಳಲ್ಲಿ ಓತಪ್ರೋತವಾಗಿ ತುಂಬಿಕೊಳ್ಳುತ್ತಿತ್ತು. ಈ ಭಾಗದ ಹಿರಿ, ಕಿರಿಯ ತಲೆಮಾರಿನ ಬರಹಗಾರರ ಮೇಲೆ ಶಾಂತರಸರ ಪ್ರಭಾವವು ಒಂದಿಲ್ಲೊಂದು ರೀತಿಯಲ್ಲಿ ಆವರಿಸಿಕೊಂಡಿದ್ದನ್ನು ಗುರುತಿಸಬಹುದು.

ಪ್ರಖರ ವಿಚಾರವಾದಿ

ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದ ಪ್ರಖರ ವಿಚಾರವಾದಿಗಳಲ್ಲಿ ಒಬ್ಬರೆಂದೇ ಗುರುತಿಸಲಾಗುವ ಶಾಂತರಸರು ಸಾಹಿತ್ಯದ ಹಲವು ಪ್ರಥಮ ಪ್ರಯೋಗಗಳಿಗೆ ಭಾಜನರಾಗಿದ್ದರು. ಅದರಲ್ಲಿ ಉರ್ದು ರೀತಿಯ ಕನ್ನಡದ ಗಜಲ್ ರಚನೆಯ ಕನ್ನಡದ ಭಾಷಿಕ ಸಾಮರ್ಥ್ಯವನ್ನೇ ಹಿಗ್ಗಿಸಿದೆ. ಉರ್ದು ಭಾಷೆ ಅಪರೂಪದ ಭಾರತೀಯ ಭಾಷೆಗಳಲ್ಲಿ ಒಂದು. ರಾಜಕೀಯ ಉದ್ದೇಶಗಳಿಗಾಗಿ ಮೊಘಲ್, ಶಾಹಿ ಮನೆತನಗಳು ಆ ಭಾಷೆಯನ್ನು ಬಳಸಿಕೊಳ್ಳಲು ಪ್ರಯತ್ನ ಪಟ್ಟಿರಬಹುದಾದರೂ ಅದು ಮೂಲತ: ಶ್ರೀಮಂತ ಸಾಂಸ್ಕೃತಿಕ ಜೀವ ಸೆಲೆಯುಳ್ಳ ಭಾಷೆ. ಉರ್ದುವಿನ ಶೇರ, ಶಾಯರಿ, ಗಜಲ್, ಕವ್ವಾಲಿಯಂಥ ರೂಪಗಳು ಶೃಂಗಾರ ಸೀಮೆಯ ಉತ್ಕೃಷ್ಟ ಮಾದರಿಗಳು. ಗಜಲ್ ರೂಪದ ಮುಖ್ಯ ಧಾತುವೆಂದರೆ ಪ್ರೇಮ ಮತ್ತು ಮಧುಪಾತ್ರೆ. ಕನ್ನಡ ವಚನಗಳ ಶರಣಸತಿ, ಲಿಂಗಪತಿ ಭಾವದ ತಿರುಗುಮುರುಗು ರೂಪ ಅಲ್ಲಿರುತ್ತದೆ. ಅಂದರೆ ಭಕ್ತ ಪ್ರೇಮಿಯಾದರೆ, ಭಗವಂತ ಪ್ರೇಯಸಿ, ಪ್ರೇಮದ ವಿಸ್ತಾರ ಉತ್ತುಂಗಗಳ ವರ್ಣನೆ. ಭಾವೋತ್ಕರ್ಷವೇ ಅಲ್ಲಿ ವಿಜೃಂಭಿಸಿರುತ್ತದೆ. ಗಜಲ್ ಏನಿದ್ದರೂ ವೈಯಕ್ತಿಕ ಮೆಹಫಿಲ್‌ಗಳಲ್ಲಿ ತೆರೆದುಕೊಳ್ಳುವ ಮನುಷ್ಯರ ಆಂತರಿಕ ಹುಡುಕಾಟದ ಲೋಕ. ಅದನ್ನು ಕನ್ನಡಕ್ಕೆ ತರುವ ಶಕ್ತಿ, ಸಾಮರ್ಥ್ಯ ಮತ್ತು ಮಹತ್ವಾಕಾಂಕ್ಷೆ ಇವು ಶಾಂತರಸರದು ಮಾತ್ರ. ಗಜಲ್ ಉರ್ದು ಭಾಷೆಯ ಸಾಹಿತ್ಯ ರೂಪಗಳಲ್ಲೇ ಹೆಚ್ಚು ನಾಜೂಕಾದದ್ದು. ಅದನ್ನು ಕನ್ನಡದ ಜಾಯಮಾನಕ್ಕೆ ಒಗ್ಗಿಸುವುದು ಅಷ್ಟು ಸರಳವಲ್ಲ. ಉರ್ದುವು ಇಶ್ಕ, ಮೊಹಬ್ಬತ್‌ನಂತಹ ಶೃಂಗಾರ ಭಾವಗಳ ರಸೋತ್ಕರ್ಷಕ್ಕೆ ಹೇಳಿ ಮಾಡಿದಂಥ ಭಾಷೆಯಾದರೆ; ಕನ್ನಡವು ವೈಚಾರಿಕ ಪ್ರಖರತೆ ಮತ್ತು ತಾತ್ವಿಕ ಫಲಕುಗಳಿಗೆ ಒಗ್ಗಿಕೊಳ್ಳುವ ಭಾಷೆ. ಈ ಎರಡೂ ಸಂಗತಿಗಳನ್ನು ಮೇಳೈಸಿಕೊಂಡು ಕನ್ನಡದಲ್ಲಿ ಗಜಲ್ ಎಂಬ ಹೊಸ ವಿಶಿಷ್ಟ ರೂಪವನ್ನು ಕೊಟ್ಟು ಹೋದವರು ಶಾಂತರಸರು.

ಬದಲಾವಣೆ ಬೇಕು ನಿಜ ಕಾಲದೊಂದಿಗೆ ರಾಜಿ ಬೇಡ

ಎದೆಯ ಗಾಯಗಳು ಮಾಯದಿದ್ದರೂ ಕೊನೆಗೆ ರಾಜಿ ಬೇಡ -ಎನ್ನುವ ಶಾಂತರಸರು ವೈಯಕ್ತಿಕ ಗಜಲ್ ಲೋಕವನ್ನು ಸಮಾಜಮುಖಿ ಚಿಂತನೆಯತ್ತ ಹೊರಳಿಸಿದರು. ತಮ್ಮೊಟ್ಟಿಗೆ ಹಲವು ಕನ್ನಡಿಗರಿಗೆ ಗಜಲ್ ಬರೆಯುವ ಹುಚ್ಚು ಹಚ್ಚಿ ಹೋದರು.

ಬೀಜ ಕಳಪೆ ಇತ್ತು, ಭತ್ತ ಜೊಳ್ಳಾಗಿತ್ತು.... ಆಮೇಲೆ ?

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಮರುಕುಂಬಿ ಮತ್ತು ಗುಳದಾಳ, ಮುಕ್ಕುಂಪಿ, ಬರಗೂರು ಗ್ರಾಮದಲ್ಲಿ ಹತ್ತಾರು ರೈತರು. ಕಳಪೆ ಭತ್ತದ ಬೀಜ ಬಿತ್ತನೆಗಳಿಂದ ಕನಿಷ್ಠ 40 ಎಕರೆಯಲ್ಲಿ ಬೆಳೆ ನಾಶವಾಗಿದ್ದು, ಗಂಗಾವತಿ ತಾಲ್ಲೂಕಿನ ನೀರಾವರಿ ಪ್ರದೇಶದ ರೈತರಿಗೆ ತೀವ್ರ ಆತಂಕದ ವಾತಾವರಣ ಮೂಡಿತ್ತು. ಈ ಬೇಸಿಗೆ ಹುಂಗಾಮಿನಲ್ಲಿ ರೈತ ಹೆಚ್ಚಿನ ಇಳುವರಿ ಬರುವಂತಹ ಬೀಜ ಬಿತ್ತನೆ ಮಾಡಿ ಹೆಚ್ಚಿನ ಲಾಭ ಮಾಡಬೇಕೆಂಬ ಆಶಯದೊಂದಿಗೆ ಖಾಸಗಿ ಕಂಪನಿಗಳು ಮಾರುವ ಬೀಜಗಳಿಗೆ ಮಾರುಹೋಗಿ ರೈತ ತನ್ನ ಕೈಯನ್ನು ತಾನೇ ಸುಟ್ಟುಕೊಂಡಿದ್ದಾನೆ.

ಕಳಪೆ ಶಕ್ತಿ ಬೀಜ-ಭತ್ತ ಬರೀ ಜೊಳ್ಳು :

ಹೈದ್ರಾಬಾದ್ (ಆಂಧ್ರ) ಮೂಲದ ಶಕ್ತಿ ಸೀಡ್ಸ್ ಕಂಪನಿ ಅದು. ಕರ್ನಾಟದಲ್ಲಿ ದಾವಣಗೆರೆ ಕೇಂದ್ರ ಸ್ಥಾನವಾಗಿ ಮಾಡಿಕೊಂಡು ಹುಬ್ಬಳ್ಳಿ, ಬಾಗಲಕೋಟೆ ವಿಜಾಪುರ, ರಾಯಚೂರು ಕೊಪ್ಪಳ, ಗುಲ್ಬರ್ಗಾ, ಬಳ್ಳಾರಿ ಜಿಲ್ಲೆಗಳಲ್ಲಿ ಮಾರಾಟದ ಮಳಿಗೆಗಳನ್ನು ತೆಗೆದು, ಕಳಪೆ ಭತ್ತದ ಬೀಜಗಳನ್ನು ಮಾರಾಟ ಮಾಡುವ ದಂಧೆಗೆ ಇಳಿದಿದೆ. ಗಂಗಾವತಿ ತಾಲ್ಲೂಕಿನಲ್ಲಿ ಶಕ್ತಿ ಸೀಡ್ಸ್ ತಯಾರಿಸಿದ ಭತ್ತದ ಬೀಜ ಎಸ್.ಆರ್.ಕೆ. 54 03 ತಳಿಯ ಬೀಜವನ್ನು ರೇಣುಕಾ ಎಂಬ ಮಾರಾಟ ಸಂಸ್ಥೆಯಿಂದ ನೂರಾರು ರೈತರು ಖರೀದಿಸಿ ಬಿತ್ತನೆ ಮಾಡಿದ್ದಾರೆ. ಬೆಳೆ ಚೆನ್ನಾಗಿಯೇ ಬಂದಿದೆ. ಭತ್ತದ ತೆನೆ ಹೊರಗೆ ಹಾಕಿದೆ. 25-30 ದಿನಗಳಾದರೂ ಯಾವುದೇ ತರಹದ ಸುಂಕವಾಗಲಿ ಅಥವಾ ಹಾಲು ತುಂಬುವದಾಗಲೀ ಕಂಡು ಬರಲಿಲ್ಲ. ಬಿತ್ತನೆ ಮಾಡಿದ ಬೀಜದಿಂದ ಭತ್ತ ಜೊಳ್ಳಾಗಿದೆ ಎಂಬುದನ್ನು ರೈತರು ಮನಗಂಡರು.

ರೈತರಿಗೆ ಪರಿಹಾರ ನೀಡಲು ಕಂಪನಿಗಳ ನಿರಾಕರಣೆ:

ಶಕ್ತಿ ಸೀಡ್ಸ್ ಕಂಪನಿಯವರು ಎಕರೆಗೆ 56-60 ಚೀಲ ಭತ್ತ ಇಳುವರಿ ಬರುತ್ತದೆ. ಆಂಧ್ರದಲ್ಲಿ ರೈತರು ಇದೇ ಕಂಪನಿ ಬೀಜವಾದ ಎಸ್‌ಆರ್‌ಹೆಚ್-5403 ಬ್ರಾಂಡ್ ಬಳಸುತ್ತಿದ್ದು, ಹೆಚ್ಚಿನ ಲಾಭ ತೆಗೆಯುತ್ತಿದ್ದಾರೆ ಎಂದು ರೈತರಿಗೆ ನಂಬಿಸಿ ಬೀಜ ಮಾರಾಟ ಮಾಡಿದ್ದಾರೆ. ಆದರೆ ಕಂಪನಿಯ ಮಾರಾಟಗಾರರು ಹೇಳಿದ ಪ್ರಕಾರ ಬಿತ್ತನೆ ಮಾಡಿದ್ದೇವೆ. ನಮ್ಮ ಹೊಲದಲ್ಲಿ ತೆನೆ ಬಿಟ್ಟಲ್ಲಿ ಎಕರೆಗೆ 60 ಚೀಲ ಹೋಗಲಿ. ಎಕರೆಗೆ ಒಂದು ಚೀಲ ಭತ್ತವಾದರೂ ಬರುವುದಿಲ್ಲ. ಹೀಗಾಗಿ ರೈತರಿಗೆ ಪರಿಹಾರ ಕೊಡಬೇಕೆಂದು ರೈತರು ಕಂಪನಿ ಮಾಲೀಕರ ಹತ್ತಿರ ಮಾತನಾಡಿದ್ದಾರೆ. ಮಾಲೀಕ ಇಲ್ಲಿ ನೀವು ಬಿತ್ತನೆ ಮಾಡಿದ ದಿನಗಳಲ್ಲಿ ಹವಾಮಾನ ಸರಿಯಿರಲಿಲ್ಲ ನಿಮ್ಮ ಭೂ ಮಣ್ಣು ಸರಿಯಲ್ಲ ಎಂದು ರೈತರಿಗೆ ಧಮಕಿ ಹಾಕಿ ಪರಿಹಾರ ನೀಡಲು ಸಾಧ್ಯವಿಲ್ಲವೆಂದು ಕೈ ತೊಳೆದುಕೊಂಡು ಕುಳಿತ.

ಕೃಷಿ ಇಲಾಖೆ ಮುಂದೆ ರೈತ ಕೂಲಿಕಾರರ ಧರಣಿ

ವಿಷಯ ಮರುಕುಂಬಿ ಗ್ರಾಮದಲ್ಲಿ ಕೃಷಿ ಕೂಲಿಕಾರರ ಸಂಘದ ಗಮನಕ್ಕೆ ಬಂತು. ತಕ್ಷಣದಲ್ಲಿ ಕಾರ್ಯ ಪ್ರವೃತ್ತರಾದ ಕೂಲಿಕಾರರ ಸಂಘದ ತಾಲ್ಲೂಕು ಸಮಿತಿ ಈ ಹೋರಾಟವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಹೆಸರಿನಲ್ಲಿ ಹೋರಾಟ ಆರಂಭಿಸಬೇಕೆಂದು ತೀರ್ಮಾನಿಸಿ, 02.04.2008 ರಂದು ಸಹಾಯಕ ಕೃಷಿ ನಿರ್ದೇಶಕರ ಕಾರ್ಯಾಲಯದ ಎದುರು ನೂರಾರು ರೈತರು ಪ್ರತಿಭಟನಾ ಧರಣಿ ಆರಂಭಿಸಿದರು.

ಸಹಾಯಕ ಕೃಷಿ ನಿರ್ದೇಶಕ- ಗ್ರಾಮ ಭೇಟಿ:

ಕೃಷಿ ಸಹಾಯಕ ನಿರ್ದೇಶಕರ ಕಛೇರಿ ಮುಂದೆ ಹೋರಾಟ ನಡೆಯುತ್ತಿದ್ದಂತೆ. ಕೃಷಿ ಅಧಿಕಾರಿಗಳು ಶಕ್ತಿ ಸೀಡ್ಸ್ ಕಂಪನಿಗಳ ಏಜೆಂಟ್‌ರು ದೌಡಾಯಿಸಿ ಬಂದರು.



ಕೈ ಸುಟ್ಟುಕೊಂಡಿರುವ ರೈತರು

ಕೃಷಿ ಇಲಾಖೆ ಸಿಬ್ಬಂದಿಗಳು ಶಕ್ತಿ ಸೀಡ್ಸ್ ಬೀಜ ಬಿತ್ತನೆ ಮಾಡಿದ ಹೊಲಗಳಿಗೆ ಪರಿಶೀಲನೆಗೆ ಹೋಗಲು ಒಪ್ಪಿದರಲ್ಲದೆ, ಶೇ.100 ಬೆಳೆ ನಾಶವಾಗಿದೆಯೆಂದು ಮತ್ತು ಈ ಬೀಜ ಮಾರಾಟ ಮಾಡುವುದಕ್ಕಿಂತ ಪೂರ್ವದಲ್ಲಿ ಕೃಷಿ ಇಲಾಖೆಯ ಅನುಮತಿ ಪಡೆದಿಲ್ಲವೆಂದು ವರದಿ ನೀಡಿದರು.

ಗ್ರಾಮ ಭೇಟಿ ಸಂದರ್ಭದಲ್ಲಿ ಕೃಷಿ ಕೂಲಿಕಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ: ಚಂದ್ರಪ್ಪ ಹೊಸ್ಕೆರಾ ಮಾತನಾಡಿ ಮೊದಲೇ ಸಾಧೆ, ಬೆಲೆ ಕುಸಿತ, ಮುಂತಾದ ಸಮಸ್ಯೆಗಳಿಂದ ರೈತರು ಹೇಗೆ ಕಂಗೆಟ್ಟಿದ್ದಾರೆ ಮತ್ತು ರೈತರ ಸದರಿ ಆತ್ಮಹತ್ಯೆಗಳಿಗೆ ಕಳಪೆ, ಬೀಜ, ಔಷಧ ಕಂಪನಿಗಳೂ ಹೇಗೆ ಕಾರಣವಾಗುತ್ತಿವೆ ಎಂದು ವಿವರಿಸಿ ಸೂಕ್ತ ಪರಿಹಾರಕ್ಕೆ ಆಗ್ರಹಿಸಿದ್ದಾರೆ.

ಪ್ರತಿಭಟನೆಗೆ ಮಣಿದ ಕಂಪನಿ

ಕೃಷಿ ಸಹಾಯಕ ನಿರ್ದೇಶಕರು, ಕಂಪನಿಯ ಮಾಲೀಕರು, ರೈತ-ಕೂಲಿಕಾರರ ಮುಖಂಡರು ಒಳಗೊಂಡು ಕೃಷಿ ನಿರ್ದೇಶಕರ ಕಛೇರಿಯಲ್ಲಿ 4.4.08ರಂದು ಸಭೆ ಸೇರಿ, ರೈತ ಸಂಘದ ಮುಖಂಡರಾದ ಜಿ.ನಾಗರಾಜ್, ನಿರುಪಾದಿ, 30 ಎಕರೆಯಲ್ಲಿ ಬೆಳೆ ನಾಶವಾಗಿದೆ. ಎಕರೆ 30,000-40,000 ಪರಿಹಾರ ನೀಡಬೇಕೆಂದು ಮನವಿ ಮಾಡಿದರು. ಕೊನೆಗೆ ವಾದ-ವಿವಾದ ನಡೆದು ಎಕರೆ 43 ಚೀಲದ ಪ್ರಕಾರ ಕ್ವಿಂಟಾಲ್‌ಗೆ ಮಾರುಕಟ್ಟೆಯ ಬೆಲೆ 700 ರೂ ನಂತೆ ರೈತರಿಗೆ ಪರಿಹಾರ ನೀಡಲು ಕಂಪನಿ ಮಾಲೀಕರು ಒಪ್ಪಿದರು. ಈ ಬಗ್ಗೆ ಬರವಣಿಗೆಯಲ್ಲಿ ಕೃಷಿ ಸಹಾಯಕ ನಿರ್ದೇಶಕರು ಬರೆದುಕೊಡಲು ಒಪ್ಪಿದ ಬಳಿಕ ಹೋರಾಟಕ್ಕೆ ತೆರೆ ಬಿತ್ತು. ಇಂತಹ ಪರಿಹಾರ ಗಂಗಾವತಿ ತಾಲ್ಲೂಕಿನಲ್ಲಿ ಕೊಡಿಸಿದ್ದು, ಇದೇ ಮೊದಲು ಎಂದು ಜನ ಮಾತನಾಡಿಕೊಳ್ಳಲು ಆರಂಭಿಸಿದ್ದಾರೆ. ಇದು ರೈತರ ಹೋರಾಟಕ್ಕೆದೊರೆತ ಜಯ. ■

ವಿಮೋಚನೆಯ ಹರಿಕಾರ ಕಾರ್ಲ್‌ಮಾರ್ಕ್ಸ್‌ಗೆ ವಿಶಿಷ್ಟ ರೀತಿಯನಮನ

ಮಾರ್ಚ್ 14, ಜಗತ್ತಿನ ಶೋಷಿತ ಜನತೆಗೆ ವಿಮೋಚನೆಯ ಪಾಠ ಹೇಳಿಕೊಟ್ಟ, ಜಗತ್ತಿನ ಕಾಮಿಕರೇ ಒಂದಾಗಿ ಎಂದು ಕರೆ ನೀಡಿದ ಕಾರ್ಲ್‌ಮಾರ್ಕ್ಸ್ ಅವರ ನಿಧನದ 125ನೇ ವಾರ್ಷಿಕ ದಿನ.

ಆ ದಿನದಂದು ಭಾರತೀಯ ಕ್ರಾಂತಿಕಾರಿ ಚಳುವಳಿಗಳ ತೌರೂರಾದ ಕೋಲ್ಕತ್ತ ನಗರ ಮತ್ತೊಂದು ಅಖಿಲ ಭಾರತ ಸಂಘಟನೆಗೆ ಜನ್ಮ ನೀಡಿತು. ಭಾರತದ ಸಾರ್ವಜನಿಕ ಕ್ಷೇತ್ರದ ಅತಿ ದೊಡ್ಡ ಉದ್ಯಮವಾದ ಭಾರತ ಸಂಚಾರ ನಿಗಮ (ಬಿಎಸ್‌ಎನ್‌ಎಲ್)ದಲ್ಲಿ ದುಡಿಯುತ್ತಿರುವ ಒಂದು ಲಕ್ಷಕ್ಕಿಂತ ಅಧಿಕ ಗುತ್ತಿಗೆ ಹಾಗೂ ಕ್ಯಾಶುಯಲ್ ಕಾರ್ಮಿಕರನ್ನು ಸಂಘಟಿಸುವ ಸಲುವಾಗಿ "ಬಿಎಸ್‌ಎನ್‌ಎಲ್ ಕ್ಯಾಶುಯಲ್ ಆ್ಯಂಡ್ ಕಾಂಟ್ರಾಕ್ಟ್ ವರ್ಕರ್ಸ್ ಫೆಡರೇಷನ್" ಎನ್ನುವ ಅಖಿಲ ಭಾರತ ಸಂಘಟನೆ ಸ್ಥಾಪನೆಗೊಂಡಿತು.

ಬಿಎಸ್‌ಎನ್‌ಎಲ್‌ನಲ್ಲಿ ಮಾನ್ಯತೆ ಪಡೆದ ಖಾಯಂ ನೌಕರರ ಸಂಘಟನೆ ಬಿಎಸ್‌ಎನ್‌ಎಲ್ ಎಂಪ್ಲಾಯೀಸ್ ಯೂನಿಯನ್ ಇಂತಹ ಅಖಿಲ ಭಾರತ ಸಮಾವೇಶವನ್ನು ನಡೆಸಿ ಹೊಸ ಭಾಷ್ಯ ಬರೆಯಿತು. ಮಾತ್ರವಲ್ಲ, ಭಾರತದ ಇತರೆ ಸಾರ್ವಜನಿಕ ಕ್ಷೇತ್ರಗಳ ನೌಕರರ ಸಂಘಗಳಿಗೂ ಮಾದರಿಯಾಯಿತು.

ಮಾರ್ಚ್ 14 ಮತ್ತು 15ರಂದು ಕೋಲ್ಕತ್ತಾದಲ್ಲಿ ನಡೆದ ಈ ಸಮಾವೇಶವನ್ನು ಟೆಲಿಕಾಂ ನೌಕರರ ಸಂಘಟನೆಯ ಅಗ್ರಗಣ್ಯ ಹಾಗೂ ಪ್ರೀತಿಪಾತ್ರ ನಾಯಕರಾದ ಕಾಂ.ವಿ.ಎ.ಎನ್. ನಂಬೂದ್ರಿ ಉದ್ಘಾಟಿಸಿದರು. ಸಮಾವೇಶದಲ್ಲಿ, ಸಿಐಟಿಯು, ಪ.ಬಂಗಾಳ ರಾಜ್ಯ ಅಧ್ಯಕ್ಷರಾದ ಶಾಮಲ್ ಚಕ್ರವರ್ತಿ, ಬಿಎಸ್‌ಎನ್‌ಎಲ್‌ಇಯು ಡೆಪ್ಯೂಟಿ ಜನರಲ್ ಸೆಕ್ರೆಟರಿ, ಅಭಿಮನ್ಯು, ಹಿರಿಯ ನೇತಾರ ಮೋನಿಬೋಸ್, ಪಶ್ಚಿಮ ಬಂಗಾಳ ಬಿಎಸ್‌ಎನ್‌ಎಲ್‌ಇಯುವಲಯ ಕಾರ್ಯದರ್ಶಿ ಕಾಂ.ಅನಿಮೇಶ್‌ಮಿತ್ರ, ಕೇರಳ ವಲಯ ಕಾರ್ಯದರ್ಶಿ ಕಾಂ.ಮೋಹನ್ ಸೇರಿದಂತೆ ಹಲವಾರು ನಾಯಕರು ಪಾಲ್ಗೊಂಡು ಮಾತನಾಡಿದರು. ಮಾರ್ಚ್ 15ರಂದು ಸಮಾವೇಶದ ಸಮಾರೋಪ ಭಾಷಣವನ್ನು ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾದ ಎಂ.ಕೆ.ಪಂಧೆ ಮಾಡಿದರು. ಇದಕ್ಕಿಂತ ಮುನ್ನ ಆಕರ್ಷಕ ಮೆರವಣಿಗೆ ನಡೆಯಿತು.

ಎರಡು ದಿನಗಳ ಈ ಸಮಾವೇಶದಲ್ಲಿ 22 ರಾಜ್ಯಗಳಿಂದ ಸುಮಾರು 329 ಪ್ರತಿನಿಧಿ ವೀಕ್ಷಕರು ಸೇರಿದಂತೆ ಒಟ್ಟು 502 ಜನರು ಪಾಲ್ಗೊಂಡಿದ್ದರು. ಇದಲ್ಲದೆ ಬಿಎಸ್‌ಎನ್‌ಎಲ್‌ಇಯು 17 ರಾಜ್ಯಗಳ ಸರ್ಕಲ್ ಸೆಕ್ರೆಟರಿಗಳು, ಪದಾಧಿಕಾರಿಗಳು ಪಾಲ್ಗೊಂಡಿದ್ದರು. ಕರ್ನಾಟಕದಿಂದ ಬಿಎಸ್‌ಎನ್‌ಎಲ್‌ಇಯು ಸರ್ಕಲ್ ಸೆಕ್ರೆಟರಿ ಕಾಮ್ರೇಡ್ ಸಿ.ಕೆ.ಗುಂಡಣ್ಣ ಹಾಗೂ ರಾಜ್ಯ ಗುತ್ತಿಗೆ ಕಾರ್ಮಿಕರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಕೆ.ಮಹಾಂತೇಶ್ ನೇತೃತ್ವದಲ್ಲಿ ಬೆಂಗಳೂರು ನಗರ, ಗ್ರಾಮಾಂತರ, ಮೈಸೂರು, ಮಂಡ್ಯ, ಚಾಮರಾಜನಗರ, ಉಡುಪಿ, ಕಾರವಾರ, ಗುಲ್ಬರ್ಗಾ, ಬೀದರ್, ಬಿಜಾಪುರ, ರಾಯಚೂರು, ಕೊಪ್ಪಳ, ಬಳ್ಳಾರಿ, ಹಾವೇರಿ, ಗದಗ್ ಹಾಗೂ ಶಿವಮೊಗ್ಗ ಜಿಲ್ಲೆಗಳಿಂದ 28 ಜನ ಗುತ್ತಿಗೆ ಹಾಗೂ ದಿನಗೂಲಿ ಕಾರ್ಮಿಕರ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಸಮಾವೇಶದಲ್ಲಿ ಕಾಮ್ರೇಡ್ ವಿ.ಎ.ಎನ್.ನಂಬೂದ್ರಿಯವರು ಮಂಡಿಸಿದ 'ಕರಡು ಘೋಷಣೆ'ಯ ಆಧಾರದಲ್ಲಿ ವಿವಿಧ ರಾಜ್ಯಗಳನ್ನು ಪ್ರತಿನಿಧಿಸಿ 28 ಜನ ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡರು. ಕರ್ನಾಟಕದಿಂದ ರಾಜ್ಯ ಉಪಾಧ್ಯಕ್ಷರಾದ ಕಾಮ್ರೇಡ್ ಹೆಚ್.ಕೆ.ಚೆಲುವರಾಜ್ (ಬೆಂಗಳೂರು) ಹಾಗೂ ರಾಜ್ಯ ಸಹ ಕಾರ್ಯದರ್ಶಿ ಅಬ್ದುಲ್ ರಹೀಂ (ಬಾಬು ರಾಯಚೂರು) ಭಾಗವಹಿಸಿ ಮಾತನಾಡಿದರು.

ಸಮಾವೇಶದ ಪ್ರಮುಖ ಕರೆಗಳು :

ಎರಡು ದಿನಗಳ ಈ ಐತಿಹಾಸಿಕ ಸಮಾವೇಶವು ಈ ಕೆಳಕಂಡ ಕಾರ್ಯಕ್ರಮಗಳಿಗೆ ಕರೆ ನೀಡಿದೆ.

2008 ಜೂನ್-30 ರೊಳಗಾಗಿ ಎಲ್ಲಾ ರಾಜ್ಯಗಳಲ್ಲಿ ಸಮಾವೇಶಗಳನ್ನು ನಡೆಸಿ ರಾಜ್ಯ ಫೆಡರೇಷನ್‌ಗಳನ್ನು ಅಸ್ತಿತ್ವಕ್ಕೆ ತರುವುದು.

ಪ್ರಪ್ರಥಮ ಅಖಿಲ ಭಾರತ ಸಮಾವೇಶವು 11 ಜನರ ಅಖಿಲ ಭಾರತ ಸಮಿತಿಯನ್ನು ಈ ಕೆಳಗಿನಂತೆ ಸರ್ವಾನುಮತದಿಂದ ಚುನಾಯಿಸಿತು.

ಅಧ್ಯಕ್ಷರು : ವಿ.ಎ.ಎನ್. ನಂಬೂದ್ರಿ ಬಿಎಸ್‌ಎನ್‌ಎಲ್‌ಇಯು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ಕರ್ನಾಟಕದ ಹೆಚ್.ಕೆ.ಚೆಲುವರಾಜ್ ಉಪಾಧ್ಯಕ್ಷರೂಗಳಲ್ಲೊಬ್ಬರಾಗಿ, ಪ್ರಧಾನ ಕಾರ್ಯದರ್ಶಿಯಾಗಿ ತಪಸ್ ಘೋಷ್ (ಪ.ಬಂಗಾಳ)ಆಯ್ಕೆಯಾಗಿದ್ದಾರೆ. ಉದ್ಯೋಗ ಭದ್ರತೆ, ಭವಿಷ್ಯ ನಿಧಿ, ಕನಿಷ್ಠ ಕೂಲಿ, ವಾರದ ಗುರುತಿನ ಚೀಟಿ ಸಂಬಳ ಚೀಟಿ, ಮಹಿಳಾ ನೌಕರರಿಗೆ ಹೆರಿಗೆ ರಜೆ, ಭತ್ಯೆ, ಇತ್ಯಾದಿಗಳಿಗೆ ಸಂಬಂಧಿಸಿದ 12 ಬೇಡಿಕೆಗಳನ್ನು ಸಮ್ಮೇಳನ ಅಂಗೀಕರಿಸಿತು.

■ ಕೆ.ಮಹಾಂತೇಶ್

ಇದ್ದರೆ ಇರಲೇಬೇಕು ಅಧಿಕಾರದ ಕುರ್ಚಿಯಲ್ಲಿ!

ಪುಟ 3 ರಿಂದ

ಸಮಾಜಸೇವಕರದ್ದು ಇನ್ನೊಂದು ಬಗೆ. ಮಂಡ್ಯ ಜಿಲ್ಲೆಯಲ್ಲೊಬ್ಬ ಸಮಾಜಸೇವಕ ರಾಜು ಎಂಬಾತನಿಗೆ ಬಿಜೆಪಿ ಟಿಕೇಟ್ ಕೊಟ್ಟಿದೆ. ಈತನ ಮೇಲೆ ರಾಜ್ಯದ ಸುಮಾರು 9 ಪೊಲೀಸ್ ಸ್ಟೇಷನ್‌ಗಳಲ್ಲಿ ವಿವಿಧ ಕೇಸ್‌ಗಳಿವೆ. ಅಕ್ಕಿಯ ಕಳ್ಳ ಎಂದು ಲೋಕಕ್ಕೆ ಗೊತ್ತಿದೆ. ಇನ್ನೊಂದೆಡೆ ವಿಶ್ವವಿದ್ಯಾಲಯದಲ್ಲಿ ತನ್ನ ಘನಸೇವೆಯಿಂದಾಗಿ ವಜಾಗೊಂಡ ಪ್ರೊ(?) ಮೈಲಾರಪ್ಪನವರು ಈಗ ಬಿಜೆಪಿಯ ಅಭ್ಯರ್ಥಿ..., ಆದರೆ ಅಪರಾಧಿಗಳಿಗೆ ಕ್ರಿಮಿನಲ್ ಭೂಮಾಫಿಯಾಗಳಿಗೆ ಸ್ಥಾನವಿಲ್ಲ ಎಂಬ ಸದಾನಂದಗೌಡರ ಒಡಕಲು ರೆಕಾರ್ಡ್ ಹಾಡು ಇನ್ನೂ ನಿಂತಿಲ್ಲ.

ಇನ್ನೊಂದೆಡೆ ಇಲ್ಲಿ ಸಲ್ಲದವರು ನಮ್ಮಲ್ಲಾದರೂ ಸಲ್ಲಲಿ ಎಂದು ಕಾದು ಕುಳಿತಿರುವ ದೀನಸ್ಥಿತಿ ಜೆಡಿ(ಎಸ್), ಕಾಂಗ್ರೆಸ್. ಅದೇ ರೀತಿ ಬಿಜೆಪಿಯೂ ಬಂದಿದೆ. ಭೂಮಾಲೀಕ, ಬಂಡವಾಳಶಾಹಿ ಪಕ್ಷಗಳ ದಿವಾಳೀತನದ ರಾಜಕಾರಣಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕೆ?

'ಕೋಮುವಾದಿಗಳನ್ನು ಸೋಲಿಸುವುದೇ ಪ್ರಥಮ ಆದ್ಯತೆ, ಸೋಲಿಸುವವರಿಗೆ ಮತ'

ಅಭ್ಯರ್ಥಿ ಪಟ್ಟಿ ಬಿಡುಗಡೆ ಸಂದರ್ಭದಲ್ಲಿ ಕಾಂ. ವಿ.ಜೆ.ಕೆ.

ಹದಿಮೂರನೆಯ ವಿಧಾನಸಭಾ ಚುನಾವಣೆ ಇದೇ ಮೇ ತಿಂಗಳಲ್ಲಿ ಮೂರು ಹಂತಗಳಲ್ಲಿ ನಡೆಯುತ್ತಿರುವುದನ್ನು ಸ್ವಾಗತಿಸಿರುವ ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿಯು ವಿಧಾನಸಭೆಯಲ್ಲಿ ಸ್ವಂತ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು ಹಾಗೂ ರಾಜ್ಯದಲ್ಲಿ ಕೋಮುವಾದಿ ಬಿಜೆಪಿ ಪಕ್ಷವು ಅಧಿಕಾರಕ್ಕೆ ಬರದಂತೆ ತಡೆಯುವ ಪ್ರಧಾನ ರಾಜಕೀಯ ಹೋರಾಟ ನಡೆಸಲು ನಿರ್ಧರಿಸಿದೆ.

ಕೋಮುವಾದಿ ಬಿಜೆಪಿಯು ಕರ್ನಾಟಕದ ಆಡಳಿತದ ಚುಕ್ಕಾಣಿ ಹಿಡಿಯದಂತೆ ತಡೆಯುವುದೇ ಪ್ರಥಮ ಆದ್ಯತೆ ಎಂದು ಸಿಪಿಐ(ಎಂ)ನ 19ನೇ ರಾಜ್ಯ ಸಮ್ಮೇಳನವು ನಿರ್ಧರಿಸಿತ್ತು. ಈ ವಿಧಾನ ಸಭಾ ಚುನಾವಣೆಯಲ್ಲಿ ಪಕ್ಷವು ಸ್ಪರ್ಧಿಸದೇ ಇರುವ ಕಡೆಗಳಲ್ಲಿ ಬಿಜೆಪಿಯನ್ನು ಸೋಲಿಸಲು ಶ್ರಮಿಸುವುದು ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಹೇಳಿದರು.

ಸೌಹಾರ್ಧತೆಯ ಕರ್ನಾಟಕವು ಕೋಮುದ್ವೇಷದ ಕರ್ನಾಟಕವಾಗಿ ಪರಿವರ್ತಿಸುವುದನ್ನು ಸಿಪಿಐ(ಎಂ) ದೃಢವಾಗಿ ವಿರೋಧಿಸುತ್ತದೆ. ಈಗಾಗಲೇ ಕರ್ನಾಟಕವನ್ನು ಗುಜರಾತನ್ನಾಗಿಸುವ, ಹಾಗೂ ಗುಜರಾತ್‌ನ ಮಾದರಿಯೇ ತಮ್ಮ ಮಾದರಿಯೆಂದು, ನರೇಂದ್ರ ಮೋದಿಯನ್ನು ಆದರ್ಶ ನಾಯಕನೆಂದೂ ಬಿಜೆಪಿ ಪಕ್ಷವು ಘೋಷಿಸಿದೆ. ಒಂದೆಡೆ ಅತ್ಯಂತ ಜನವಿರೋಧಿ, ದುಡಿಯುವ ವರ್ಗ ವಿರೋಧಿ, ಪ್ರತಿಗಾಮಿಯಾದ ಆರ್ಥಿಕ ನೀತಿಗಳನ್ನು ಅನುಸರಿಸುತ್ತಾ ಅಪಾರ ಸಂಕಷ್ಟಗಳ ಹೊರೆಯನ್ನು ಜನ ಸಮುದಾಯದ ಮೇಲೆ ಬಿಜೆಪಿ ಆಡಳಿತ ಹೊರಿಸಿದೆ. ಅದೇ ಸಂದರ್ಭದಲ್ಲಿ ಕೋಮು ವಿಭಜನೆ ತರಲು ಅದಕ್ಕಾಗಿ ಕೋಮುದ್ವೇಷ ಹೆಚ್ಚಿಸುವ, ಅಲ್ಪಸಂಖ್ಯಾತರ ಮೇಲೆ ಮಾರಣ ಹೋಮಗೈದ ಫ್ಯಾಸಿಸ್ಟ್ ಮಾದರಿಯ 'ಪೊಗ್ರಾಂ'ನ್ನೇ ಅನುಸರಿಸುತ್ತಿದೆ. ಇದೇ ಗುಜರಾತ್‌ನ ಮಾದರಿಯಾಗಿದ್ದು ರಾಜ್ಯದಲ್ಲಿಯೂ ಈ ಸಂಘ ಪರಿವಾರ ಕರಾವಳಿ, ಉ.ಕರ್ನಾಟಕ ಮುಂತಾದೆಡೆ ಅಂತಹುದೇ ಪ್ರಯೋಗಕ್ಕೆ ಇಳಿದಿದೆ. ರಾಜ್ಯದಲ್ಲಿ ಅಧಿಕಾರದಲ್ಲಿ ಪಾಲು ಪಡೆದಿರುವಾಗ ಆಡಳಿತ ಯಂತ್ರವನ್ನೇ ಈ ತನ್ನ ನೀತಿಗೆ ಬಳಸಿದೆ. ಕೋಮುಗಲಭೆಗಳನ್ನು ಹುಟ್ಟುಹಾಕಿದಾಗ ಅದನ್ನು ತಡೆಯುವ ಪ್ರಯತ್ನ ಮಾಡದೇ ಪರೋಕ್ಷವಾಗಿ ಬೆಂಬಲಿಸಿದೆ. ಆದ್ದರಿಂದ ಬಿಜೆಪಿಯ ಇಂತಹ ಮಾದರಿಯು ಕರ್ನಾಟಕದ ಪ್ರಗತಿ, ಶಾಂತಿ-ಸಹಬಾಳ್ವೆಗೆ ಅತ್ಯಂತ ಮಾರಕವಾಗಿದೆ.

ಹಾಗೆಯೇ ಇಂದು ಭೂಮಾಫಿಯಾ ಹಾಗೂ ಗಣಿ ಮಾಫಿಯಾಗಳದ್ದೇ ಬಿಜೆಪಿಯಲ್ಲಿ ಮೇಲುಗೈಯಾಗಿದ್ದು ಅದೇ ಶಕ್ತಿಗಳ ಅಕ್ರಮ ಹಣ ಬಳಸಿ, ಗೆದ್ದು ಬರಲು, ಆ ಮೂಲಕ ನಾಡಿನ ಸಂಪತ್ತಿನ ಯಥೇಚ್ಛ ಲೂಟಿಗೆ ಸಕ್ರಿಯವಾಗಿದೆ. ಇದಕ್ಕಾಗಿ ಗೂಂಡಾಪಡೆಗಳು ಸೃಷ್ಟಿಯಾಗಿವೆ ಹಾಗೂ ಪ್ರಗತಿಪರರು, ಎಡಶಕ್ತಿಗಳ ವಿರುದ್ಧ ಅವುಗಳನ್ನು ಬಳಸಲಾಗುತ್ತಿದೆ. ಸಂವಿಧಾನೇತರ ಶಕ್ತಿಯಾಗಿ ಬೆಳೆಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಬಿಜೆಪಿಯು ಕರ್ನಾಟಕದಲ್ಲಿ ಅಧಿಕಾರಕ್ಕೆ ಬರುವುದರ ವಿನಾಶಕಾರಿ ಗಂಭೀರ ಪರಿಣಾಮಗಳನ್ನು ಅರಿತಿರುವ ಸಿಪಿಐ(ಎಂ) ಪಕ್ಷವು ಬಿಜೆಪಿಯನ್ನು ಸೋಲಿಸುವ ಚುನಾವಣಾ ತಂತ್ರವನ್ನು ಅನುಸರಿಸುವುದು.

ಜನವಿರೋಧಿ ಆರ್ಥಿಕ ನೀತಿಗಳ ಜಾರಿ ಹಾಗೂ ಪ್ರಜಾಪ್ರಭುತ್ವ, ಸೆಕ್ಯೂಲರ್ ಮೌಲ್ಯಗಳಿಗೆ ಅಪಾಯಕಾರಿಯಾಗಿರುವ ಕೋಮುವಾದದ ವಿರುದ್ಧ ನಿರಂತರವಾಗಿ ರಾಜಿಯಿಲ್ಲದ ಹೋರಾಟವನ್ನು ನಡೆಸುತ್ತಾ ಬಂದಿರುವ ಸಿಪಿಐ(ಎಂ) ಪ್ರಸಕ್ತವಾಗಿ ಈ ನೀತಿಗಳಿಗೆ ಸಿಪಿಐ(ಎಂ) ಒಳಗೊಂಡ ಎಡ ಪರ್ಯಾಯವೇ ನಿಜವಾದ ಪರ್ಯಾಯವಾಗಿದೆ. ರಾಜ್ಯದಲ್ಲಿ ಜನಚಳುವಳಿಯನ್ನು ಮುನ್ನಡೆಸುವಲ್ಲಿ ಮುಂಚೂಣಿಯಲ್ಲಿರುವ ಸಿಪಿಐ(ಎಂ) ತನ್ನ ಪ್ರಮುಖ ನೆಲೆಗಳಲ್ಲಿ ಸ್ಪರ್ಧಿಸಲು ನಿರ್ಧರಿಸಿದೆ.

ಅದರಂತೆ ಇದೇ ಏಪ್ರಿಲ್ 7ರಂದು ಸೇರಿದ್ದ ರಾಜ್ಯಸಮಿತಿಯ ಸಭೆಯು 12 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ನಿರ್ಧರಿಸಿದ್ದು ಅಭ್ಯರ್ಥಿಗಳನ್ನು ಆಯ್ಕೆ ಮಾಡಿತ್ತು.

ಮಾಧ್ಯಮಗೋಷ್ಠಿಯಲ್ಲಿ ರಾಜ್ಯಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್, ಎಸ್.ಪ್ರಸನ್ನಕುಮಾರ್ ಉಪಸ್ಥಿತರಿದ್ದರು. ○

ಕ್ಷೇತ್ರಗಳು	ಜಿಲ್ಲೆ	ಅಭ್ಯರ್ಥಿ
ಬಾಗೇಪಲ್ಲಿ	ಚಿಕ್ಕಬಳ್ಳಾಪುರ	ಜಿ.ವಿ.ಶ್ರೀರಾಮರೆಡ್ಡಿ (ಮಾಜಿ ಶಾಸಕರು)
ಗೌರಿಬಿದನೂರು	ಚಿಕ್ಕಬಳ್ಳಾಪುರ	ಜಿ.ಸಿದ್ಧಗಂಗಪ್ಪ
ಕೆ.ಜಿ.ಎಫ್(ಮೀಸಲು)	ಕೋಲಾರ	ಪಿ.ತಂಗರಾಜ್
ದೊಡ್ಡಬಳ್ಳಾಪುರ	ಬೆಂಗಳೂರು	ಆರ್.ಚಂದ್ರತೇಜಸ್ವಿ
ಕೃಷ್ಣರಾಜಪುರ	ಬೆಂಗಳೂರು	ಗೌರಮ್ಮ
ಗುಲ್ಬರ್ಗಾ ಗ್ರಾಮಾಂತರ(ಮೀಸಲು)	ಗುಲ್ಬರ್ಗಾ	ಮಾರುತಿ ಮಾನ್ಪಡೆ
ಚಿಂಚೋಳಿ (ಮೀಸಲು)	ಗುಲ್ಬರ್ಗಾ	ಸಿದ್ಧಾರ್ಥ ತುಮಕುಂಟ
203-ಮಂಗಳೂರು ನಗರ ದಕ್ಷಿಣ	ದ.ಕನ್ನಡ	ಯಶವಂತ ಮರೋಳಿ
204-ಮಂಗಳೂರು ನಗರ	ದ.ಕನ್ನಡ	ಯಾದವಶೆಟ್ಟಿ
ಬೈಂದೂರು	ಉಡುಪಿ	ಯು.ದಾಸು ಬಂಡಾರಿ
ವಿಜಯನಗರ	ಬಳ್ಳಾರಿ	ಡಿ.ವೆಂಕಟರಮಣ

ಈ ಎಲ್ಲಾ ಅಭ್ಯರ್ಥಿಗಳು ಜನ ಚಳುವಳಿಗೆ ತಮ್ಮನ್ನು ಪೂರ್ಣವಾಗಿ ಸಮರ್ಪಿಸಿಕೊಂಡವರಾಗಿದ್ದಾರೆ.

ಬೆಲೆ ಏರಿಕೆ ಎನ್.ಡಿ.ಎ. ನೀತಿ - ಕಾಂಗ್ರೆಸ್ ಮುಂದುವರಿಕೆ : ಪ್ರತಿಭಟನೆ

ಯುನೈಟೆಡ್ ನ್ಯಾಷನಲ್ ಪ್ರೋಗ್ರೆಸ್ಸಿವ್ ಅಲಯನ್ಸ್(ಯುಎನ್‌ಪಿಎ) ಮತ್ತು ಎಡ ಪಕ್ಷಗಳ ಕರೆಯ ಮೇರೆಗೆ ಸಿಪಿಐ(ಎಂ), ಸಿಪಿಐ ಮತ್ತು ಅಖಿಲ ಭಾರತ ಫಾರ್ವರ್ಡ್ ಬ್ಲಾಕ್‌ನ ನೂರಾರು ಕಾರ್ಯಕರ್ತರು ಬೆಂಗಳೂರಿನ ಎಂ.ಜಿ.ರಸ್ತೆಯಲ್ಲಿರುವ ಗಾಂಧಿ ಪ್ರತಿಮೆ ಬಳಿ ಧರಣಿ ಸತ್ಯಾಗ್ರಹ ನಡೆಸಿದರು.

ಧರಣಿಯನ್ನುದ್ದೇಶಿಸಿ ಸಿಪಿಐನ ರಾಜ್ಯ ಕಾರ್ಯದರ್ಶಿ ಸಿದ್ದನಗೌಡ ಪಾಟೀಲ್ ಮಾತನಾಡಿ "ಆಹಾರ ದಾನ್ಯ, ಬೇಳೆಕಾಳು, ಕಟ್ಟಡ ಸಾಮಾಗ್ರಿಗಳ ಮತ್ತೀತರ ವಸ್ತುಗಳ ಬೆಲೆ ಗಗನಕ್ಕೇರಿದೆ. ಸಾಮಾನ್ಯ ಜನರ ಬದುಕು ದುಸ್ತರವಾಗಿದೆ. ಎಡಪಕ್ಷಗಳು ಯುಪಿಎ ಸರ್ಕಾರಕ್ಕೆ ಬೆಂಬಲ ನೀಡುವಾಗ ಬೆಲೆಗಳನ್ನು ಹತೋಟಿಯಲ್ಲಿ ಪಡಿತರ ವ್ಯವಸ್ಥೆಯನ್ನು ಬಲಗೊಳಿಸಬೇಕು ಎಂದು ಹೇಳಲಾಗಿತ್ತು. ಆದರೂ ಕೇಂದ್ರ ಸರ್ಕಾರ ರಾಜ್ಯಗಳಲ್ಲಿ ಪಡಿತರ ಪೂರೈಕೆಯನ್ನು ಕಡಿತಗೊಳಿಸಿದೆ " ಎಂದು ಟೀಕಿಸಿದರು. ರಾಜ್ಯದಲ್ಲಿ ಚುನಾವಣೆ ಬಂದಿರುವುದರಿಂದ ಇದು ಸಾಂಕೇತಿಕ ಪ್ರತಿಭಟನೆಯಾಗಿದ್ದು ಮುಂದಿನ ದಿನಗಳಲ್ಲಿ ಹೋರಾಟಗಳನ್ನು ತೀವ್ರಗೊಳಿಸಲಾಗುವುದು ಎಂದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಮತನಾಡಿ "ಉದಾರೀಕರಣ ನೀತಿಯ ಜ್ಯಾರಿಯ ನಂತರ ಶ್ರೀಮಂತ ಬಡವರ ನಡುವಿನ ಅಂತರ ಹೆಚ್ಚಿರುವುದು ಮಾತ್ರವಲ್ಲದೆ, ಶ್ರೀಮಂತರು ಬಳಕೆ ಮಾಡುವ ವಸ್ತುಗಳ ಬೆಲೆ ಕಡಿಮೆಯಾಗುತ್ತಿದ್ದು, ದೈನಂದಿನ ಬಳಕೆಯ ವಸ್ತುಗಳ ಬೆಲೆ ಒಂದೇ ಸಮನೆ ಏರುತ್ತಿದೆ. ಇದಕ್ಕೆ ಹಿಂದಿನ ಎನ್.ಡಿ.ಎ. ಸರ್ಕಾರ ಮತ್ತು ಇಂದಿನ ಯುಪಿಎ ಸರ್ಕಾರ - ಎರಡೂ ಹೊಣೆಯಾಗಿವೆ" ಎಂದು ಹೇಳಿದರು.

ಸಭೆಯಲ್ಲಿ ಫಾರ್ವರ್ಡ್ ಬ್ಲಾಕ್ ಅಧ್ಯಕ್ಷ ಜಿ.ಆರ್.ಶಿವಶಂಕರ್, "ರೈತರು ಬೆಳೆದ ಬೆಳೆಗಳಿಗೆ ಬೆಲೆ ಇಲ್ಲ. ಆದರೆ ಮಾರುಕಟ್ಟೆಯಲ್ಲಿ ಬೆಲೆ ಜಾಸ್ತಿ. ಆಹಾರ ದಾಸ್ತಾನು ಮಾಡಿದ ಕಾಳಸಂತೆ ಕೋರರಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ ಲಾಭವಾಗುತ್ತಿದೆ ಎಂದು ದೂಷಿಸಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್ ಸ್ವಾಗತಿಸಿದ್ದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಹರಿಗೋವಿಂದ ವಂದಿಸಿದರು.

ಸಿಪಿಐ(ಎಂ) ಮುಖಂಡರಾದ ನಿತ್ಯಾನಂದಸ್ವಾಮಿ, ಕೆ.ಪ್ರಕಾಶ್, ಸಿಪಿಐನ ಎಂ.ಸಿ.ವೆಂಕಟರಾಂ ಮುಂತಾದವರಿದ್ದರು. ರಾಜ್ಯದ ವಿವಿಧ ಭಾಗಗಳಲ್ಲಿಯೂ ಪ್ರತಿಭಟನೆ ನಡೆದ ವರದಿ ಇದೆ. ○



ಬಳ್ಳಾರಿ : ಮಾಜಿ ಶಾಸಕ ಅನಿಲ್ ಲಾಡ್ ಮನೆ ಮೇಲೆ ದಾಳಿ



ಬಳ್ಳಾರಿಯಲ್ಲಿ ಮಾಜಿ ಶಾಸಕ ಅನಿಲ್ ಲಾಡ್‌ರವರ ಮನೆಯ ಮೇಲೆ ಮಾಜಿ ಸಚಿವ ಶ್ರೀರಾಮಲು ಮತ್ತು ಬಿಜೆಪಿ ಗುಂಪು ಧಾಳಿ ನಡೆಸಿ ವಾಹನಗಳಿಗೆ ಬೆಂಕಿ ಹಚ್ಚಿರುವ ಗೂಂಡಾಗಿರಿ ಕ್ರಮವನ್ನು ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ರಾಜ್ಯ ಕಾರ್ಯದರ್ಶಿ ಮಂಡಳಿಯು ಉಗ್ರವಾಗಿ ಖಂಡಿಸಿದೆ.

ಇತ್ತೀಚಿಗೆ ಅನಿಲ್‌ಲಾಡ್ ರವರು ಬಿಜೆಪಿಯಿಂದ ಹೊರಬಂದಿದ್ದು ಬಿಜೆಪಿಯ ಹಲವಾರು ಕ್ರಮಗಳನ್ನು ವಿರೋದಿಸಿದ್ದಾರೆ. ತಮ್ಮ ಹೂರಣ ಎಲ್ಲಿ ಬಯಲಾಗುವುದೋ, ಎಂಬ ಭಯದಿಂದ ಇಂತಹ ಗೂಂಡಾ ಧಾಳಿ ಮಾಡಿ ಭಿನ್ನಧ್ವನಿ ದಮನಿಸಲು ಮುಂದಾಗಿರುವುದು ಫ್ಯಾಶಿಸ್ಟ್ ಮನೋಭಾವವನ್ನು ತೋರಿಸುತ್ತದೆ. ಇಂತಹ ಪ್ರಜಾಪ್ರಭುತ್ವ ವಿರೋಧಿ ಧಾಳಿಗಳು ಅಪಾಯಕಾರಿಯಾಗಿವೆ.

ಬಿನ್ನ ಪಕ್ಷವೆಂದು ಅದರ ನಾಯಕರು ಹೇಳಿಕೊಳ್ಳುತ್ತಿರುವುದು ಹಾಸ್ಯಸ್ಪದ. ಇಲ್ಲಿ ಕ್ರಿಮಿನಲ್‌ಗಳಿಗೆ ಅವಕಾಶವಿಲ್ಲ ಎಂದು ಬಿಜೆಪಿ ಅಧ್ಯಕ್ಷರಾದ ಸದಾನಂದಗೌಡರು ಹೇಳುತ್ತಿರುವಾಗಲೇ ಈ ಧಾಳಿ ನಡೆದಿರುವುದು ಮತ್ತು ಬಿಜೆಪಿ ನಾಯಕತ್ವ ಚಕಾರ ಎತ್ತದೇ ಬೆಂಬಲಿಸಿರುವುದು ಅದರ ಡೋಂಗಿತನವನ್ನು ಎತ್ತಿ ತೋರಿಸಿದೆ. ಈ ಕ್ರಿಮಿನಲ್ ಧಾಳಿ ನಡೆಸಿರುವ ಮಾಜಿ ಸಚಿವ ಶ್ರೀರಾಮುಲು ಒಳಗೊಂಡು ಗೂಂಡಾ ಗುಂಪಿನ ಮೇಲೆ ಸರ್ಕಾರವು ಕಠಿಣ ಕ್ರಮ ಕೈಗೊಳ್ಳಬೇಕು. ಒಂದು ವೇಳೆ ಇಂತಹ ಶಕ್ತಿಗಳು ಅಧಿಕಾರಕ್ಕೆ ಬಂದಲ್ಲಿ ಅವರ ಈ 'ಗುಜರಾತ್ ಮಾದರಿ' ಎಂತಹ ಅನಾಹುತ ಉಂಟು ಮಾಡಬಹುದೆಂಬುದನ್ನು ಜನತೆ ಅರಿಯಬೇಕು. ಹಾಗೂ ಅವರನ್ನು ಸೋಲಿಸಿ ಮೂಲೆಗುಂಪು ಮಾಡಬೇಕೆಂದು ಸಿಪಿಐ(ಎಂ) ಜನತೆಯಲ್ಲಿ ಮನವಿ ಮಾಡಿದೆ.

ಸಿಪಿಐ(ಎಂ)ನ ರಾ.ಕಾ.ಮಂ. ಸದಸ್ಯ ಎಸ್.ಪ್ರಸನ್ನಕುಮಾರ್, ಜಿಲ್ಲಾ ಕಾರ್ಯದರ್ಶಿ ಯು.ಬಸವರಾಜ್ ಮುಂತಾದವರ ನಿಯೋಗ ಲಾಡ್ ಮನೆಗೆ ಭೇಟಿ ನೀಡಿದೆ. ○

'ವಿಭಿನ್ನ' ಪಕ್ಷದ ಅಪರಾವತಾರಗಳು

ಚುನಾವಣೆಗಳು ಸಮೀಪಿಸುತ್ತಿವೆ. ತಮ್ಮದು ಉಳಿದೆಲ್ಲರಿಗಿಂತ ವಿಭಿನ್ನ ಪಕ್ಷ, ದೇಶ ಪ್ರೇಮಿಗಳ ಪಕ್ಷ, ಶಿಸ್ತುಬದ್ಧವಾದ ಪಕ್ಷ, ಸ್ವಚ್ಛವಾದ ಪಕ್ಷ ಎಂದು ಬಿಜೆಪಿಯವರು ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುತ್ತಾರೆ. ಆದರೆ ಜನರ ಮುಂದೆ ತೆರೆದುಕೊಳ್ಳುತ್ತಿರುವ ಚಿತ್ರ ನೋಡಿದರೆ ಬಿಜೆಪಿ ಕೋಮುವಾದಿ ಮಾತ್ರವಲ್ಲ ಭ್ರಷ್ಟಾಚಾರ, ಜಾತಿವಾದ, ಗುಂಪುಗಾರಿಕೆ, ಅಶಿಸ್ತು, ಅಪರಾಧ ದಾಖಲೆಗಳು ಯಾವುದರಲ್ಲೂ ಹಿಂದೆ ಬಿದ್ದಿಲ್ಲ, ಈ ಗುಂಪಿನ ಎಲ್ಲ ಪಕ್ಷಗಳಿಗಿಂತಲೂ ಮುಂಚೂಣಿಯಲ್ಲಿದೆ ಎಂಬುದು ಸಾಬೀತಾಗುತ್ತಿದೆ. ಈ ತುಣುಕುಗಳನ್ನು ನೋಡಿ.

ಅರ್ಜಿ ತಲುಪಿಸಲೇ ಇಲ್ಲ

"ಬಿಜೆಪಿ ಜಿಲ್ಲಾಧ್ಯಕ್ಷರಾಗಿರುವ ಕಟಕದೊಂಡ ಅವರು ಏಕಪಕ್ಷೀಯವಾಗಿ ನಡೆದುಕೊಂಡಿದ್ದಾರೆ. ಪಕ್ಷದ ಟಿಕೆಟ್ ಬಯಸಿ ನಾನು ಸಲ್ಲಿಸಿದ್ದ ಅರ್ಜಿಯನ್ನು ವರಿಷ್ಠರಿಗೆ ತಲುಪಿಸದೆ ತಾವೇ ಟಿಕೆಟ್ ಗಿಟ್ಟಿಸಿಕೊಂಡಿದ್ದಾರೆ"

- ಶಂಕರ ಚವ್ಹಾಣ
ಬಿಜಾಪುರ ಬಿಜೆಪಿ ಮುಖಂಡರು

★

ಸೋಲಿಸುವುದೇ ಗುರಿ

"ನಮ್ಮ ಕ್ಷೇತ್ರದಿಂದ ಸ್ಪರ್ಧಿಸಲು ಸ್ಥಳೀಯ ಮುಖಂಡ ಬಿಜೆಪಿ ಯುವ ಮೋರ್ಚಾ ಜಿಲ್ಲಾ ಅಧ್ಯಕ್ಷ ಕಾಳಿನಾಥ ಮುಸಬಿನಾಳ ಅವರಿಗೆ ಟಿಕೆಟ್ ನಿರಾಕರಿಸಿ ಯತ್ನಾಳರಿಗೆ ಅವಕಾಶ ನೀಡಿರುವುದು ಸರಿಯಲ್ಲ. ಯತ್ನಾಳ್ ಇಲ್ಲಿಂದ ಸ್ಪರ್ಧಿಸಿದರೆ ಮುಸನಾಳ ಅವರನ್ನು ಬಿಜೆಪಿ ಬಂಡಾಯ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಲಾಗುವುದು. ನಮಗೆ ಜಯ ಸಿಗದಿದ್ದರೂ ಪರವಾಗಿಲ್ಲ. ಯತ್ನಾಳರನ್ನು ಸೋಲಿಸುವುದೇ ನಮ್ಮ ಗುರಿ".

- ಬಿಜಾಪುರದ ವಿವಿಧ
ಬಿಜೆಪಿಮುಖಂಡರು

★

ಬಿಜೆಪಿಗೆ ನಾನು 'ಜಾತ್ಯಾತೀತ ಮುಖ'

ಬಿಜೆಪಿ ಪಕ್ಷವು ಪ್ರಕಟಿಸಿರುವ 171 ಅಭ್ಯರ್ಥಿಗಳ ಪಟ್ಟಿಯಲ್ಲಿ ಒಬ್ಬರೂ ಅಲ್ಪಸಂಖ್ಯಾತ ಸಮುದಾಯದವರಿಲ್ಲದಿರುವುದರಿಂದ ನನಗಂತೂ ತುಂಬಾ ನಿರಾಶೆಯಾಗಿದೆ. ನಾನು ಕನಿಷ್ಠ ಇಬ್ಬರು ಮುಸ್ಲಿಂ ಅಭ್ಯರ್ಥಿಗಳಿಗೆ, ಒಬ್ಬರಾದರೂ ಕ್ರಿಶ್ಚಿಯನ್ನರಿಗೆ ಅವಕಾಶ ನೀಡಬೇಕೆಂದು ಮನವಿ ಮಾಡಿದ್ದೆ. ಪಕ್ಷವು ಅಲ್ಪಸಂಖ್ಯಾತರನ್ನು ಪೂರ್ಣವಾಗಿ ನಿರ್ಲಕ್ಷಿಸುತ್ತಿದೆ.

ನಾನು ಬಿಜೆಪಿಯ ಜಾತ್ಯಾತೀತತೆಯ ಮುಖ. ಬಿಜೆಪಿ ನನ್ನನ್ನು ಅಲ್ಪಸಂಖ್ಯಾತರ ಮನವೊಲಿಸಲು ಬಳಸಿತು. ನಾನು ಬಿಜೆಪಿ ಪಕ್ಷಕ್ಕೆ ಈಶಾನ್ಯ ರಾಜ್ಯಗಳಲ್ಲೂ ಪ್ರಚಾರ ಮಾಡಿದೆ.

- ಎಚ್.ಟಿ.ಸಾಂಗ್ಲಿಯಾನ
ಬಿಜೆಪಿ ಸಂಸದರು

★

50 ಲಕ್ಷ ಕೇಳಿದರು

"ತಾಲ್ಲೂಕು ಜಿಲ್ಲೆಯಿಂದ ನನ್ನ ಹೆಸರನ್ನೇ ಸೂಚಿಸಲಾಗಿತ್ತಾದರೂ ಮುಖಂಡರು ಅದನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಸಂಸದ ಜಿ.ಎಂ.ಸಿದ್ದೇಶ್ 50 ಲಕ್ಷ ತಂದುಕೊಂಡು,



ಟಿಕೆಟ್ ಕೊಡುತ್ತೇವೆ ಎಂದಿದ್ದರು. ಆದರೆ ನಾನು ಬಡವ ಅಷ್ಟೊಂದು ದುಡ್ಡಿರಲಿಲ್ಲ. ಆದರೂ ನನ್ನ ಅಭಿಮಾನಿಗಳು ಕಾರ್ಯಕರ್ತರು ನನ್ನ ಪರವಾಗಿ 40 ಲಕ್ಷ ರೂಪಾಯಿ ಸಂಗ್ರಹಿಸಿದ್ದರು. ಇನ್ನೂ 10 ಲಕ್ಷ ರೂಪಾಯಿ ಹೊಂದಿಸಬೇಕಿತ್ತಷ್ಟೆ. ಸೌಜನ್ಯಕ್ಕಾದರೂ ಕಾರ್ಯಕರ್ತರ, ಪಕ್ಷದ ಪದಾಧಿಕಾರಿಗಳ ಸಲಹೆ ಕೇಳದೆ ಏಕಾಏಕಿ ಚಂದ್ರಪ್ಪನವರಿಗೆ ಟಿಕೆಟ್ ನೀಡಿದ್ದಾರೆ. ನನಗೆ ಮೋಸ ಮಾಡಿದ್ದಾರೆ. ಆದ್ದರಿಂದ ನಾವೆಲ್ಲರೂ ಸಾಮೂಹಿಕವಾಗಿ ರಾಜೀನಾಮೆ ನೀಡುತ್ತಿದ್ದೇವೆ. ಇಷ್ಟೇ ಅಲ್ಲ ನಾನು ಬಂಡಾಯ ಅಭ್ಯರ್ಥಿಯಾಗಿ ಚುನಾವಣೆಗೆ ನಿಲ್ಲುವುದು ಖಚಿತ"

- ದೇವೇಂದ್ರ ನಾಯ್ಕ ಮತ್ತು ಬಿಜೆಪಿಯ
ಹೊಳಲ್ಕೆರೆ ಕ್ಷೇತ್ರ ಹಾಗೂ ದಾವಣಗೆರೆ
ಜಿಲ್ಲಾ ಸಮಿತಿಯ ಹತ್ತಾರು
ಪದಾಧಿಕಾರಿಗಳು

★

20 ಲಕ್ಷಕ್ಕೆ ಬಿಜೆಪಿ ಟಿಕೆಟ್ ಮಾರಾಟ

ಬಿಜೆಪಿಯು 20 ಲಕ್ಷಕ್ಕೆ ಟಿಕೆಟ್ ಮಾರಾಟ ಮಾಡಿರುವುದು ಖಚಿತ. ಇದರಿಂದ ಪಕ್ಷವು ಗೆಲುವು ಕಾಣುತ್ತದೆ ಎಂಬುದು ಭ್ರಮೆ. ಪಕ್ಷದ ತೀರ್ಮಾನ ಖಂಡಿಸಿ ಹಾಗೂ ಕಾರ್ಯಕರ್ತರ ಅಭಿಪ್ರಾಯದ ಮೇರೆಗೆ ಬಂಡಾಯ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದೇನೆ. ಆದರೆ ಯಾವುದೇ ಕಾರಣಕ್ಕೂ ಪಕ್ಷ ಬಿಡುವುದಿಲ್ಲ. ಸಣ್ಣ ಸಮುದಾಯಗಳನ್ನು ಬಳಸಿಕೊಂಡು, ಬೇಡ ಎಂದಾಗ ಚರಂಡಿಗೆ ಬಿಸಾಡುವ ಪ್ರವೃತ್ತಿಯನ್ನು ಪಕ್ಷ ಬಿಡಬೇಕು. ಇದು ತೀರಾ ಅನ್ಯಾಯ. ಇದು ಪ್ರಾಮಾಣಿಕವಾಗಿ ಕೆಲಸ ಮಾಡಿದ ಹಾಗೂ ರಾಜಕೀಯ ಮಾಡಿದ ಮುಖಂಡರ ಕತ್ತು ಹಿಸುಕಿ ಸಾಯಿಸುವ ಕೆಲಸ.

- ಗಂಗಾಧರ್ ಭಟ್
ಕಾರವಾರದ ಮಾಜಿ ಶಾಸಕರು, ಬಿಜೆಪಿ

★

ಒಕ್ಕಲಿಗರೆಂಬ ಕಾರಣಕ್ಕೆ....

ನಾವು ಒಕ್ಕಲಿಗರು ಎನ್ನುವ ಒಂದೇ ಕಾರಣಕ್ಕೆ ಟಿಕೆಟ್ ತಪ್ಪಿಸಲಾಗಿದೆ. ಜಾತಿವಾದ ಮಾಡುವ ಬಿಜೆಪಿ ಮುಖಂಡರಿಗೆ ಹೆಚ್.ಡಿ.ಕುಮಾರಸ್ವಾಮಿ ಅಧಿಕಾರ ಹಸ್ತಾಂತರ ಮಾಡದೆ ಸರಿಯಾದ ಪಾಠ ಕಲಿಸಿದ್ದಾರೆ.

- ಅಶ್ವತ್ಥ ನಾರಾಯಣ, ಬಿಜೆಪಿ ಟಿಕೆಟ್
ವಂಚಿತ

ತಮ್ಮ ಜೊತೆಗಾರರೊಂದಿಗೆ ಬಿಜೆಪಿ ಸಂಸದ ಅನಂತಕುಮಾರ್ ಮುನೆ ಮುಂದೆ ಪ್ರತಿಭಟನೆ ನಡೆಸಿ ಧಿಕ್ಕಾರ ಕೂಗುತ್ತಾ ಹೇಳಿದ್ದು.



★

ಏನು ಅನ್ಯಾಯ ಮಾಡಿದ್ದೆ?

ನನಗೆ ಗೊತ್ತಿಲ್ಲ, ನಾನು ಪಕ್ಷಕ್ಕೆ ಏನು ಅನ್ಯಾಯ ಮಾಡಿದ್ದೇನೆ? ಅವರು ಏನೇನೋ ಕಾರಣ ನೀಡಿದ್ದಾರೆ. ಬೇರೆ ಪಕ್ಷದವರು ನಡೆಸಿದ ಕಂಬಳಕ್ಕೆ ನಾನು ಹೋಗಿದ್ದು, ನಿಗಮ ಮಂಡಳಿ ಅಧ್ಯಕ್ಷತೆ ಕೊಟ್ಟಾಗ ಅದನ್ನು ನಿರಾಕರಿಸಿದ್ದು ಇತ್ಯಾದಿ ಕಾರಣ ಹೇಳುತ್ತಿದ್ದಾರೆ. ಆದರೆ ನಾನು ಪಕ್ಷಕ್ಕೆ ಏನು ಅನ್ಯಾಯ ಮಾಡಿದ್ದೇನೆಂದು ಹೇಳುತ್ತಿಲ್ಲ. ದಿನಾ ದಿನಾ ನನ್ನ ವಿರುದ್ಧ ಆರೋಪ ಮಾಡುತ್ತಿದ್ದಾರೆ. ನನ್ನ ವಿರುದ್ಧ ಕಾರ್ಯಕರ್ತರ ಬಳಿ ಗಂಟೆಗಟ್ಟಲೆ ದೂರು ಹೇಳುತ್ತಿದ್ದಾರೆ. ಅದಷ್ಟೇ ನನಗೆ ಗೊತ್ತು.

- ಶಕುಂತಲಾ ಶೆಟ್ಟಿ,
ಬಿಜೆಪಿ ಮಾಜಿ ಶಾಸಕಿ, ಪುತ್ತೂರು

★

ಕುರಿ ಕಾಯಬೇಕೆ?

ಗೆಲುವಿಗಾಗಿ ಏನೆಲ್ಲಾ ಪ್ರಯತ್ನ ಮಾಡುವ ರಾಜಕಾರಣಿಗಳು ಇದೀಗ ಮಹಾರಾಷ್ಟ್ರದ ಬಾಳುಮಾಮಾರ ಕುರಿ ಕಾಯುತ್ತಿದ್ದಾರೆ. ಸಂತ ಬಾಳುಬಾಮಾರ ಸುಮಾರು ಎರಡು ಸಾವಿರ ಕುರಿಗಳ ಪೈಕಿ ಒಂದು ತಂಡ ಜಿಲ್ಲೆಯ ಶಿಗ್ಗಾಂವ್‌ಗೆ ಬಂದಿದೆ. ಶರದ್ ಪವಾರ್, ವಿಲಾಸರಾವ್ ದೇಶಮುಖ್ ಮುಂತಾದ ಗಣ್ಯರು ಈ ಕುರಿಗಳನ್ನು ಕಾಯ್ದಿದ್ದರಿಂದಲೇ ಗೆಲುವು ಸಾಧಿಸಿ ಉನ್ನತ ಹುದ್ದೆಗೇರಿದ್ದಾರೆ ಎಂಬ ಸುದ್ದಿ ಕೇಳಿರುವ ಶಿಗ್ಗಾಂವ ಶಾಸಕರಾಗುವ ಕನಸು ಕಾಣುವವರು ಒಬ್ಬೊಬ್ಬರಾಗಿ ಕುರಿ ಕಾಯಲಾರಂಭಿಸಿದ್ದಾರೆ. ಮಾಜಿ ಶಾಸಕ ಅಜ್ಜಂಪೀರ್ ಖಾದ್ರಿ ಮೊದಲು ಕುರಿ ಕಾಯ್ದು ಸುದ್ದಿ ಮಾಡಿದರು. ಇದನ್ನು ಕೇಳಿದ ಬಿಜೆಪಿ ಮಂದಿ ಬಸವರಾಜ ಬೊಮ್ಮಾಯಿ ಅವರನ್ನು ಕರೆತಂದು ಕುರಿ ಕಾಯಿಸಿದರು. ಜಿಲ್ಲೆಯ ಇತರ ರಾಜಕಾರಣಿಗಳೂ ಕುರಿ ಕಾಯುವುದಕ್ಕೆ ಮುಂದಾಗಿದ್ದಾರೆ.

ಎಲ್ಲರೂ ಕುರಿ ಕಾಯ್ದರೆ ಸೋಲುವವರಾರು? ಎಂಬುದೇ ಪ್ರಶ್ನೆ. ಏನೇ ಆಗಲಿ ಕುರಿ ಕಾಯುವ ಇರಾದೆ ಇದ್ದರೆ 'ಕ್ಯೂ ಪ್ಲೀಸ್'...

- ಎನ್.ಲೋಕೇಶ್ವರಪ್ಪ, ಹಾವೇರಿ
('ಪ್ರಜಾವಾಣಿ'ಯಲ್ಲಿ ಕಂಡುಬಂದ ವರದಿ)

ಕೋಮುವಾದಿ ಬಿಜೆಪಿ ಅಧಿಕಾರಕ್ಕೆ ಬಾರದಂತೆ ತಡೆಯೋಣ
ಶಾಂತಿ, ಸಾಮರಸ್ಯದ ಕರ್ನಾಟಕವನ್ನು ಉಳಿಸೋಣ

ಅಬ್ಬಬ್ಬ ಏನು ಶಿಸ್ತು - ಎಂಥಾ ದೊಣ್ಣೆ ವರಸೆ

ದೇಶಪ್ರೇಮಿಗಳ ದೊಣ್ಣೆ ವರಸೆ

ಶಿಸ್ತುಬದ್ಧವಾದ ಪಕ್ಷ, ವಿಭಿನ್ನವಾದ ಪಕ್ಷವಾದ ಬಿಜೆಪಿಯಲ್ಲಿ ರಾಜ್ಯದಾದ್ಯಂತ ಬಂಡಾಯವೋ ಬಂಡಾಯ. ಅತ್ಯಂತ ಶಿಸ್ತುಬದ್ಧವಾದ ಬಂಡಾಯಗಳು. ಈ ರೀತಿಯ ಬಂಡಾಯವನ್ನು ಶಮನ ಮಾಡುವ ಬಿಜೆಪಿ ಪಕ್ಷದ ಸಾಮರ್ಥ್ಯ ಮತ್ತು ಶಿಸ್ತಿನ ಕತೆ ಇನ್ನೂ ರೋಮಾಂಚಕ ಶಿಸ್ತಿನ ಬೃಹತ್ ಕಾದಂಬರಿ.

ಏಪ್ರಿಲ್ 11ನೇ ತಾರೀಕು, ಗುಬ್ಬಿ ಕ್ಷೇತ್ರದ ಟಿಕೆಟ್ ಹಂಚಿಕೆ ಕುರಿತು ಬಿಜೆಪಿಯ ಸಂಸದ ಮಲ್ಲಿಕಾರ್ಜುನಯ್ಯ ಬಹಿರಂಗವಾಗಿ ತಮ್ಮ ಬಂಡಾಯ ಘೋಷಿಸಿ ಲೋಕ ಸಭಾ ಸ್ಥಾನಕ್ಕೆ ಹಾಗೂ ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೆ ರಾಜಿನಾಮೆ ನೀಡಿದರು. ಮಾಧ್ಯಮ ಪ್ರತಿನಿಧಿಗಳ ಎದುರೇ ತುರ್ತು ಪತ್ರಿಕಾಗೋಷ್ಠಿಯಲ್ಲಿ ಅವರು ತಮ್ಮ ರಾಜಿನಾಮೆ ಪತ್ರಕ್ಕೆ ಸಹಿ ಹಾಕಿದ ವರದಿ ಫೋಟೋ ಸಹಿತ ಪತ್ರಿಕೆಗಳಲ್ಲಿ ಬಂದಿದೆ.

ಶುಕ್ರವಾರ ಬಂಡಾಯವೆದ್ದ ಮಲ್ಲಿಕಾರ್ಜುನಯ್ಯ ಶನಿವಾರ ಮದ್ಯಾಹ್ನ ಬಂಡಾಯದ ಬಾವುಟ ಇಳಿಸಿದರು. ಹೇಗೆ ಅಂತೀರಾ? ಮುಂದೆ ಶನಿವಾರ ತಮ್ಮ ಕಚೇರಿಯಲ್ಲಿ ಬೆಂಗಳೂರಿಗೆ ಹೊರಡುವ ತಯಾರಿಯಲ್ಲಿದ್ದ ಮಲ್ಲಿಕಾರ್ಜುನಯ್ಯ ಅವರ ಕಛೇರಿಗೆ ನುಗ್ಗಿದ ಬಿಜೆಪಿ ಕಾರ್ಯಕರ್ತರು ಅವರದೇ ಕಛೇರಿಯಲ್ಲಿ ಅವರನ್ನು ಕೂಡಿ ಹಾಕಿ, ಹೊರಗೆ ಬೀಗ ಹಾಕಿದರು. ದಿಗ್ಬಂಧನ ಹಾಕಿ, ಬೆದರಿಸಿ, ಒತ್ತಡ ಹಾಕಿದರು.

ಹೀಗೆ ಅವರು ಗ್ರಹಬಂಧನದಲ್ಲಿ ಇರುವಾಗಲೇ ಮಾಧ್ಯಮದವರನ್ನು ಕರೆಸಲಾಯಿತು. "ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜಿನಾಮೆ ನೀಡಿಲ್ಲ. ಪತ್ರಿಕೆಗಳಲ್ಲಿ ತಪ್ಪಾಗಿ ವರದಿಯಾಗಿದೆ" ಎಂದರು ಮಲ್ಲಿಕಾರ್ಜುನಯ್ಯ.

ಆರೆಸ್ಸೆಸ್ ಶಿಸ್ತು ಅಂದರೆ ಏನು ಸುಮ್ಮನೆಯೇ! ಎಂತಹ ಬಂಡಾಯ ಗಾರರನ್ನು ಅದು ಬಗ್ಗುಬಡಿಯುತ್ತದೆ.

ಒಬ್ಬ ಚುನಾಯಿತ ಲೋಕಸಭಾ ಸದಸ್ಯನ ಕತೆಯೇ ಹೀಗಾದರೆ ಇನ್ನು ಸಾಮಾನ್ಯರ ಪಾಡೇನು? ಜೈ ಗೋಲ್ವಾಲ್ಕರ್. ಜೈ ಯಡಿಯೂರಪ್ಪ

★

ಅಂಬೇಡ್ಕರ್ ಬಗೆಗೆ ಮಾತನಾಡಿದರೆ ಹುಷಾರ್ !!

ಅವರ ಹೆಸರು ಬಿ.ಆರ್.ನಾರಾಯಣ ರಾವ್ ಅಂತ. ರಾಜಕೀಯ ಪಕ್ಷವೊಂದರ ಜಿಲ್ಲಾ ಉಪಾಧ್ಯಕ್ಷರು. ಅವರಿಗೆ ಬಾಬಾಸಾಹೇಬ ಅಂಬೇಡ್ಕರ್ ಅಂದರೆ ಯಾರು ಅಂತ ಗೊತ್ತಿಲ್ಲವಂತೆ. ಅವರ ಜನ್ಮದಿನ ಎಂದು ಎಂಬುದು ತಿಳಿದಿಲ್ಲವಂತೆ.

ಯಾವ ಪಕ್ಷದವರು ಅಂದ್ರಾ? ನೀವೇ ಹೇಳಿ ಯಾವ ಪಕ್ಷದವರಿರಬಹುದು. ನಿಮ್ಮ ಊಹೆ ಸರಿ ಬಿಜೆಪಿಯವರು ಅವರು. ಮೈಸೂರು ಜಿಲ್ಲೆಯ ಪಿರಿಯಾ ಪಟ್ಟಣದವರು ಅವರು.

ಪಿರಿಯಾ ಪಟ್ಟಣ ತಾಲ್ಲೂಕಿನ ಬಿಜೆಪಿಯ ದಲಿತ ಮೋರ್ಚಾದ ಅಧ್ಯಕ್ಷರಾದ ಸಿಪಿ ಮಂಜುನಾಥ್ ಅವರೇ ಈ ಮೇಲಿನ ಅಮೂಲ್ಯ ಮಾಹಿತಿಯನ್ನು ಬಹಿರಂಗಪಡಿಸಿದ್ದಾರೆ.

ಆರ್.ರಾಮಕೃಷ್ಣ

ನಡೆದದ್ದು ಇಷ್ಟು. ಏಪ್ರಿಲ್ 13ರಂದು ಸಮಾರಂಭವೊಂದರ ಸಿದ್ಧತೆಗಾಗಿ ಬಿಜೆಪಿ ಪದಾಧಿಕಾರಿಗಳು ಸೇರಿದ್ದಾಗ ಮಂಜುನಾಥರವರು ನಾಳೆ ಅಂಬೇಡ್ಕರ್ ಜಯಂತಿಯಲ್ಲವೇ ಪಕ್ಷದ ಕಛೇರಿಯಲ್ಲಿ ಅದನ್ನು ಆಚರಿಸೋಣ ಎಂದು ಪ್ರಸ್ತಾಪಿಸಿದ್ದಾರೆ. ಆಗ ಸಿಕ್ಕ ಉತ್ತರವೇ ಈ ಮೇಲಿನ ಅಮೂಲ್ಯ ಆಣಿ ಮುತ್ತುಗಳು.

ಇದು ಇಲ್ಲಿಗೆ ನಿಂತಿಲ್ಲ. ಈ ಬಗೆಗೆ ಸಭೆಯಲ್ಲಿ ಮಂಜುನಾಥ್ ಪ್ರಸ್ತಾಪಿಸಲು ಯತ್ನಿಸಿದರೆ ಅವರಿಗೆ ಮಾತನಾಡಲು ಅವಕಾಶ ಕೊಡದೆ ಮಾತಿಗೆ ಅಡ್ಡಿ ಮಾಡಿದ್ದಾರೆ. ಬಿಜೆಪಿಯ ತಾಲ್ಲೂಕು ಅಧ್ಯಕ್ಷಯ ಸಣ್ಣ ಮೊಗೆಗೌಡ ಕೂಡ ಈ ಬಗ್ಗೆ ಆಕ್ಷೇಪ ಎತ್ತಿದ್ದಾರೆ. ಅವರಿಗೆ ಸಿಕ್ಕ ಉತ್ತರ ಏನು ಗೊತ್ತೇ? "ಅಂಬೇಡ್ಕರ್ ಮತ್ತು ಜಾತಿಯ ಬಗ್ಗೆ ಮಾತನಾಡುವುದನ್ನು ಮುಂದುವರಿಸಿದರೆ ನಿಮ್ಮನ್ನು ತಡೆಯುತ್ತೇವೆ"

ಇಷ್ಟೆಲ್ಲಾ ಮಾಹಿತಿ ಕೊಟ್ಟವರು ಯಾರು. ಸ್ವತಃ ಮಂಜುನಾಥರೇ.


ಆಹಾ! ಏನು ಪ್ರಜಾಪ್ರಭುತ್ವ. ಏನು ಸಾಮಾಜಿಕ ನ್ಯಾಯ. ಜೈ ಹಿಂದೂ ರಾಷ್ಟ್ರ. ಜೈ ಬಿಜೆಪಿ.

★

ಗುಬ್ಬಿ ಬಿಜೆಪಿ ಮುಖಂಡ ವಿಜಯಕುಮಾರನ ಕಂಡಿರಾ....?

ವೈದೇಹಿ ಏನಾದಳೋ............ ವೈದೇಹಿ ಏನಾದಳೋ... ಅಂತ ಶ್ರೀರಾಮಚಂದ್ರ ಸೀತೆಯನ್ನು ಹುಡುಕುವ ರಾಮಾಯಣದ ಪ್ರಸಂಗ ನಮಗೆಲ್ಲಾ ತಿಳಿದದ್ದೆ. ಶ್ರೀರಾಮನ ಹೆಸರು ಹೇಳುವ ಬಿಜೆಪಿ ಪಕ್ಷದ ಗುಬ್ಬಿ ತಾಲ್ಲೂಕಿನ ಮಾಜಿ ಅಧ್ಯಕ್ಷರಾದ 'ಬಿ.ಜಯಕುಮಾರನ ಕಂಡಿರಾ?.... ನೀವು ಕಂಡಿರಾ' ಅಂತ ನಾವೀಗ ಹುಡುಕಬೇಕಾಗಿದೆ.

ನಾವು ಮಾತ್ರ ಅಲ್ಲ, ತುಮಕೂರು ಜಿಲ್ಲೆಯ ಪೊಲೀಸರೂ ಹುಡುಕುತ್ತಿದ್ದಾರೆ. ಯಾಕೆ ಅಂತೀರಾ? ಕಾರಣವಿದೆ. ಗುಬ್ಬಿ ಕ್ಷೇತ್ರದಿಂದ ನಾಮಪತ್ರ ಸಲ್ಲಿಸೋದಕ್ಕೆ ಶುಭ ಸಮಯ ಯಾವುದಪ್ಪ ಅಂತ ಕೇಳಿದರೆ ಅದು ಏಪ್ರಿಲ್ 16, ಬುಧವಾರ ಮದ್ಯಾಹ್ನ ಅಂದುಬಿಟ್ಟರು ಜ್ಯೋತಿಷಿಗಳು. ಸರಿ ವಿಜಯಕುಮಾರ್ ತಮ್ಮ ಪಟಾಲಂ ಕಟ್ಟಿಕೊಂಡು ನಾಮಪತ್ರ ಸಲ್ಲಿಸೋಕೆ ಅಂತ ಕಚೇರಿಗೆ ಬಂದರು.



ಕೃಪೆ: ಪ್ರಜಾವಾಣಿ

ಚುನಾವಣಾಧಿಕಾರಿ ಸುಮ್ಮನೆ ಬಾಯಿ ಮುಚ್ಚಿಕೊಂಡು ನಾಮಪತ್ರ ತಗೋಬೇಕು ತಾನೆ. ಅವರು ಇದು ಊಟದ ಸಮಯ ನಂತರ ಬನ್ನಿ ಅಂದರು. ಎಂಎಲ್‌ಎ ಆಗಬೇಕು. ಮಂತ್ರಿ ಆಗಬೇಕು ಅಂತ ಹೊರಟಿರೋರಿಗೆ ಹೀಗೆಲ್ಲಾ ಹೇಳಬಹುದಾ!? ಅದೂ ಬಿಜೆಪಿ ಮುಖಂಡರಿಗೆ. ಆಗಲೇ ವಿಜಯ ಕುಮಾರ್‌ಗೆ ಪಿತ್ತ ನೆತ್ತಿಗೇರಿತ್ತು. 'ಗುಳಿಕ ಕಾಲ' ಮುಗಿದು ಹೋಗಲ್ವೆ ಪಾಪ.

ಅದಾದ ಮೇಲೂ ಅಧಿಕಾರಿಯದು ಅದೇ ಗಾಂಚಾಲಿ! ನಿಯಮದ ಪ್ರಕಾರ ಅಭ್ಯರ್ಥಿ ಜೊತೆಗೆ 5 ಜನ ಮಾತ್ರ ಬನ್ನಿ ಅಂತ. ಬಾವಿ ಮಂತ್ರಿಗಳು ಅದನ್ನೆಲ್ಲಾ ಕೇಳ್ತಾರೆಯೇ? ಬಿಸಿ ಬಿಸಿ ಮಾತುಕತೆ. ಬಾವಿ ಮಂತ್ರಿಗಳೂ ಅಧಿಕಾರಿ ತಿಮ್ಮರೆಡ್ಡಿಗೆ ಚೆನ್ನಾಗಿ ಕೊಟ್ಟರು ಗೂಸಾ.

ಪೊಲೀಸ್ ಮಾಮಂದಿರು ಈಗ ವಿಜಯಕುಮಾರರನ್ನು ಹುಡುಕುತ್ತಾ ಇದ್ದಾರೆ. ಅವರು ಅಬ್ಬೆಸ್ ಆಗಿದ್ದಾರೆ. ನೀವು ಕಂಡೀರಾ..?

★

ದಡ್ಡ ನಿಷ್ಠಾವಂತರು

ನಿಷ್ಠಾವಂತ ಕಾರ್ಯಕರ್ತರಿಗೆ ಟಿಕೆಟ್ ಕೊಡದೇ ಹೋದರೆ ನಿಷ್ಠಾವಂತರ, ಶಿಸ್ತುಬದ್ಧ ಪಕ್ಷದ ಕಾರ್ಯಕರ್ತರು ಏನು ಮಾಡುತ್ತಾರೆ ಗೊತ್ತೆ. ಪಕ್ಷದ ಮುಖಂಡರನ್ನೇ ಕೂಡಿ ಹಾಕುತ್ತಾರೆ ಕೊಠಡಿಯಲ್ಲಿ. ಯಾವ ಪಕ್ಷದಲ್ಲಿ ಅಂತಿರಾ? ಶಿಸ್ತುಬದ್ಧ ಪಕ್ಷ ಅಂದರೆ ಇನ್ಯಾವುದಿದೆ ಸ್ವಾಮಿ ದೇಶದಲ್ಲಿ? ಹೌದು. ಅದು ಭಾರತೀಯ ಜನತಾ ಪಕ್ಷದ್ದೇ ಅಲ್ಲವೇ? ದೇಶಪ್ರೇಮ, ಶಿಸ್ತು ಎಲ್ಲವನ್ನೂ ಅವರೇ ಅಲ್ಲವೇ ಗುತ್ತಿಗೆಗೆ ತೆಗೆದುಕೊಂಡಿರುವವರು.

ಇರಲಿ ವಿಷಯ ಏನೂಂದ್ರೆ, ಏಪ್ರಿಲ್ 14, 2008ರಂದು ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಡಿ.ಎಸ್.ವೀರಯ್ಯ ಅವರನ್ನು ಅವರ ಪಕ್ಷದ ಕಛೇರಿಯಲ್ಲಿಯೇ ಕೂಡಿ ಹಾಕಿ ಪ್ರತಿಭಟಿಸಿದ್ದಾರೆ ನಿಷ್ಠಾವಂತ ಕಾರ್ಯಕರ್ತರು. ಕೋಲಾರದಲ್ಲಿ ನಿಷ್ಠಾವಂತ ಕಾರ್ಯಕರ್ತರಿಗೆ ಟಿಕೆಟ್ ಕೊಡಲಿಲ್ಲವಂತೆ. ಬಿಜೆಪಿ ಮುಖಂಡರೇನೋ ನಿಷ್ಠಾವಂತರಿಗೆ ಟಿಕೆಟ್ ಕೊಡಲು ಸಿದ್ಧರಿದ್ದರು.

ಆದರೆ ಎಲ್ಲ ನಿಷ್ಠಾವಂತರ ಹತ್ತಿರ 50 ಲಕ್ಷ ರೂಪಾಯಿ ಠೇವಣಿ ಇರಬೇಕಲ್ಲ ಪಕ್ಷದಲ್ಲಿ ಇಡೋದಕ್ಕೆ. ಅಥವಾ ಕನಿಷ್ಠ 20 ಲಕ್ಷವಾದರೂ ಬೇಕಲ್ಲ. ಬರೇ ದೇಶಪ್ರೇಮ, ಶಿಸ್ತು, ನಿಷ್ಠಾವಂತಿಕೆ ಇದ್ದರೆ ಚುನಾವಣೆ ನಡೆಯುತ್ತೇ? ಅಯ್ಯೋ ಪಾಪ. ದಡ್ಡ ಕಾರ್ಯಕರ್ತರು. ದಡ್ಡ ನಿಷ್ಠಾವಂತರು.

★

ನಿಷ್ಠಾವಂತರ ಇನ್ನೊಂದು ಬಂಡಾಯ

ಕಾರವಾರದ ಬಿಜೆಪಿ ಸಂಸದ ಅನಂತಕುಮಾರ ಹೆಗಡೆ, ಬಿಜೆಪಿ ಉತ್ತರಕನ್ನಡ ಜಿಲ್ಲಾ ಅಧ್ಯಕ್ಷ ವಿನೋದ್ ಪ್ರಭು ಅವರ ಬಂಡಾಯದ ಸರದಿ. ಕಾರಣ ಅದೇ ನಿಷ್ಠಾವಂತಿಕೆ. ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಮೊಮ್ಮಗ ಶಶಿಭೂಷಣ ಎಂಬುವವರನ್ನು ಬಿಜೆಪಿ ಸಿದ್ದಾಪುರದಿಂದ ಎಳೆದು ತಂದು ಕುಮಟಾದಲ್ಲಿ ನಿಲ್ಲಿಸಿದೆಯಂತೆ. ಅದಕ್ಕಂತೆ ಬಂಡಾಯ. ಇಂಥ ಬಂಡಾಯಕ್ಕೆ ಕೊನೆಯೂ ಕಾಣುತ್ತಿಲ್ಲ. ಮೊದಲೂ ಕಾಣುತ್ತಿಲ್ಲ. ಬಿಜೆಪಿಯಲ್ಲಿ ಅಬ್ಬಬ್ಬ ಶಿಸ್ತೋ ಶಿಸ್ತು.

ಜನವಿರೋಧಿ ಆರ್ಥಿಕ ನೀತಿಗಳನ್ನು ಹಿಮ್ಮೆಟ್ಟಿಸೋಣ



ಇಲ್ಲ, ನಿಮ್ಮ ಮಠಕ್ಕ ಬರಲಿಕ್ಕಾಗಲ್ಲ, ಟೈಮಿಲ್ಲ ಅಂತಲ್ಲ, ನಿಮ್ಮ ಮಠದ ಸನ್ಮಾನ ನನಗ ಬೇಕಿಲ್ಲ. ನಾನು ಸೌಹರ್ದತೆಯಲ್ಲಿ ನಂಬಿಕೆ ಇಟ್ಟ ಮನಶ್ಯಾ. ನೀವು ಅದರ ವಿರುದ್ಧ ಇದೀರಿ....." ಯಾವ ಅಳುಕಿಲ್ಲದೆ ನೇರವಾಗಿ ಹೇಳಿದರು.

ಅರಿಯುವುದು ಬಹಳವಿತ್ತು...

ಹಸಿವಿನಿಂದ ಸೊರಗಿದೊಡಲ ಕಣ್ಣಲಡಗಿ ನಿಂತ ಭಾಷೆಯನ್ನು ಓದಲಿಲ್ಲ, ಯಾಕೆ ಒಣ ಧಿಮಾಕು

- ಶಾಂತರಸ

ಏಪ್ರಿಲ್ 13ರ ಸಂಜೆ ನಾಲ್ಕರ ಹೊತ್ತಲ್ಲಿ ಶಾಂತರಸರ ಮೊಬೈಲ್‌ನಿಂದ ಕರೆಯಿತ್ತು. ಅವರ ಮಗ ಮಾತಾಡಿದರು. ಅಪ್ಪ ಸೀರಿಯಸ್....." ಅಂತ. ನಾವು ಕೂಡಲೇ ಒಡನಾಡಿಗಳಿಗೆಲ್ಲ ಸುದ್ದಿ ಕೊಟ್ಟು ದಾವಖಾನೆಯತ್ತ ಧಾವಿಸಿದೆವು. ಕಣ್ಣ ಕನ್ನಡಿಗೆ ತೆಳು ನೀರಿನ ಪೊರೆ ಕಟ್ಟಿತು. ಇತ್ತೀಚಿನ ವರ್ಷಗಳಲ್ಲಿ ಶಾಂತರಸ ಮತ್ತು ನಮ್ಮ ನಡುವೆ ಕಳ್ಳು, ಬಳ್ಳಿಯ ಸಂಬಂಧ ಹೆಣೆದುಕೊಂಡಿತ್ತು. ಸೈದ್ಧಾಂತಿಕ ಸಂಬಂಧವು ರಕ್ತಕ್ಕಿಂತಲೂ ಗಟ್ಟಿಯೆಂಬಂತೆ...

ನಾನು ಕೊಯಮತ್ತೂರಿಗೆ ಹೋಗುವ ಹಿಂದಿನ ದಿನ, ಮಾರ್ಚ್ 25 ಇರಬೇಕು. ದೀರ್ಘ ಸಮಯ ಶಾಂತರಸರೊಂದಿಗೆ ಮಾತಾಡಿದ್ದೆ. ವಚನ ಸಾಹಿತ್ಯದ ಕುರಿತು ಬರೆದ ತಮ್ಮ ಪುಸ್ತಕ "ಉಲಿವ ಮರ" ತುಂಬ ಪ್ರೀತಿಯಿಂದ ಕೊಟ್ಟರು. ಆಯಾಸ ಪಡುತ್ತಲೇ ಏನೆಲ್ಲ ಮಾತಾಡಿದರು. ನನಗಾಗ ಖಂಡಿತ ಅನಿಸತೊಡಗಿತು. ಸಾವು ಇವರ ಜೀವಕಾಯದ ಸುತ್ತ ಠಳಾಯಿಸುತ್ತಿದೆ ಎಂದು. ಎಲುಬಿನ ಗೂಡಿಗೆ ಅಂಟಿಕೊಂಡ ರೇಷ್ಮೆಯಂಥ ಹೊಳೆವ ಚರ್ಮ, ಕಾಂತಿ ಕುಂದದ ಕಣ್ದಿಟ್ಟಿ. ತೇಜಸ್ಸಿನ ಮುಖ. ನಮ್ಮ ನಡುವೆ ಎಷ್ಟೋ ಮಾತುಗಳು ಹಾಗೇ ಉಳಿದುಬಿಡುವವಲ್ಲ... ನಾನು ಥಟ್ಟನೆ ಕೇಳಿದೆ, "ರಜಾಕಾರ ಚಳುವಳಿ ಸಂದರ್ಭದಲ್ಲಿ ಕಮ್ಯೂನಿಸ್ಟರ ಪಾತ್ರ ಏನಿತ್ತು ಸರ್?" ಅಷ್ಟೇ ಬೇಗನೆ ಅವರ ಬಿಳಿ ಹುಬ್ಬುಗಳು ಗಂಭೀರವಾದವು. ಆಂಧ್ರದ ತೆಲಂಗಾಣ ಚಳುವಳಿ ಬಲ್ಲವರಾಗಿದ್ದರು. ನಿಜಾಮಶಾಹಿಯ ಸರ್ವಾಧಿಕಾರದ ವಿರುದ್ಧ ದನಿಯೂ ಎತ್ತಿದ್ದರು.

"ಆಂಧ್ರದಲ್ಲಿ ಕಮ್ಯೂನಿಸ್ಟರು ರೈತ ಕೂಲಿಕಾರ್ಮಿಕರನ್ನು ಸಂಘಟಿಸುತ್ತಿದ್ದರು. ಜಮೀನ್ದಾರರ ಕ್ರೌರ್ಯದ ವಿರುದ್ಧ ಕಮ್ಯೂನಿಸ್ಟರ ನೇತೃತ್ವದಲ್ಲಿ ಸಾವಿರಾರು ಹಳ್ಳಿಗಳು ಸೆಟೆದು ನಿಂತಿದ್ದವು. ಅಂತೆಯೇ ನಿಜಾಮಶಾಹಿಯ ವಿರುದ್ಧವೂ, 1947 ಮತ್ತು 48ರ ಸಂದರ್ಭದಲ್ಲಿ ಕೆಲವು ತಿಂಗಳು ಪುಂಡಾಟಿಕೆ ಮತ್ತು ದಬ್ಬಾಳಿಕೆ ನಡೆಸಿದ ರಜಾಕಾರ ವಿರುದ್ಧವೂ ಕಮ್ಯೂನಿಸ್ಟರು ಸೆಣಸಿದ್ದಾರೆ......" ಶಾಂತರಸರ ಕೊನೆಯ ವಾಕ್ಯದ ಎಳೆ ಹಿಡಿದು ಕೇಳಿದೆ.

"ಸರ್ ಮತ್ತ, ಕಮ್ಯೂನಿಸ್ಟರು ರಜಾಕಾರರಿಗೆ ಬೆಂಬಲಿಸಿದ್ದರು. ಅಂತ ಅನೇಕ ಪುಸ್ತಕಗಳಲ್ಲಿ ಓದ್ದೀವಿ. ಇದು ಸುಳ್ಳ...?"

"ಸುಳ್ಳೆ. ಸಾಮ್ರಾಜ್ಯಶಾಹಿಯ ವಿರುದ್ಧ ರಾಜಿರಹಿತ ಹೋರಾಟ ಮಾಡುವ ಕಮ್ಯೂನಿಸ್ಟರು 'ರಜಾಕಾರರನ್ನಾಗಲಿ, ನೈಜಾಮಶಾಹಿಯನ್ನಾಗಲಿ ಬೆಂಬಲಿಸಿದ್ದರು ಎಂದು ಹೇಗೆ ಹೇಳಲು ಸಾಧ್ಯ....? ಇತಿಹಾಸ ತಿರುಚುವ ಕುತಂತ್ರಗಳು ಬಾಳ ನಡೆದಿವೆ..." ಮತ್ತೆ ಆತ್ಮೀಯವಾಗಿ ಏನೆಲ್ಲ ಮಾತಾಡಿದೆವು. ಒಂದ್ನಾಲ್ಕು ದಿನಗಳಲ್ಲಿ ಆರೋಗ್ಯ ಸರಿಯಾಗಿ ಎದೆ ತುಂಬಿ ಮಾತಾಡುವ ಬಯಕೆ ವ್ಯಕ್ತಿಸಿದರು. ನಮ್ಮ ಸಂಘಟನಾತ್ಮಕ ಕೆಲಸಕ್ಕೆ ನಿರ್ಮಲ ಮೆಚ್ಚುಗೆ ಪ್ರಕಟಿಸುತ, "ಇಪ್ಪತ್ತು ವರ್ಷದ ಹಿಂದ ನೀವೆಲ್ಲ ಸಿಗಬೇಕಿತ್ತಮ್ಮ... ನಿಮ್ಮೊಂದಿಗೆ ನಾನೂ ಓಡಾಡಿ ಈ ಕೋಮುವಾದಿಗಳನ್ನು ಹಣಿತ್ತಿದ್ದೇವು...."

ಹೌದು. ಈ ಮಾತು ಕಳೆದ ಐದಾರು ವರ್ಷಗಳಲ್ಲಿ ಎಷ್ಟೋ ಬಾರಿ ಹೇಳಿದ್ದಾರೆ. ಸಂಘಟನೆಯ ಕಾರ್ಯಕ್ರಮಗಳ ವಿವರ ಪಡೆದು ಖುಷಿಪಟ್ಟಿದ್ದಾರೆ. ಐಕ್ಯರಂಗ ಪತ್ರಿಕೆಯು ಇನ್ನಷ್ಟು ವಿಶಾಲ ವ್ಯಾಪ್ತಿ ಮತ್ತು ಆಳ ಪಡೆದು "ಜನಶಕ್ತಿ"ಯಾದಾಗ ಶಾಂತರಸರ ಕಣ್ಣಲ್ಲಿ ಆದಮ್ಯ ಚೈತನ್ಯದ ಬೆಳಕಿತ್ತು. "ತಗೊಳ್ಳಮ್ಮ ಮೊದಲ ದೇಣಿಗೆ ನಂದೇ. 'ಜನಶಕ್ತಿ' ಸಮೂಹ ಶಕ್ತಿಯಾಗಿ ಬೆಳೀಲಿ...." ಹರಸಿದರು.

ಯಾಕೆ ನಮಗೆ ಶಾಂತರಸರು ಮತ್ತೆ ಮತ್ತೆ ಪ್ರಿಯರಾದರು? ಒಂದೊಂದೇ ಘಟನೆಗಳು ಬಂದು ಸರಿದವು.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಶಾಂತರಸರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಿದ ದಿನಗಳವು. ಸಮ್ಮೇಳನದ ಮೆರವಣಿಗೆಯಲ್ಲಿ 71 ಜನ ಮಹಿಳೆಯರ ತಲೆಯ ಮೇಲೆ ಕೊಡ ಹೊರಿಸಿ ಕುಂಭ ಮೆರವಣಿಗೆ ಮಾಡಲಿರುವ ಸುದ್ದಿ ಪ್ರಸ್ತಾಪಿಸಿ, 'ಸರ್, ಇದು ಸರಿಯಲ್ಲ. ಜನವಾದಿ ವಿರೋಧಿಸ್ತದೆ'... ನಾನಂದೆ. ಶಾಂತರಸರ ಕೈಗೆ ಥಟ್ಟನೆ ಮೊಬೈಲ್ ಬಂತು. ಬೀದರಿಗೆ ರಿಂಗಣಿಸಿದರು. "ನಮ್ಮ ಹೆಣ್ಮಕ್ಕಳು ಪ್ರದರ್ಶನ ಬೊಂಬಿಗಳಲ್ಲ. ಮೊದಲ ಕೈಬಿಡ್ರಿ, ಇಲ್ಲಾಂದ್ರ ನಾನೇ ವಿರೋಧಿಸಿ ಹೇಳಿಕಿ ಕೊಡಬೇಕಾಗ್ತದ..." ಆದೇಶಿಸಿದರು. ಆ ಕಾರ್ಯಕ್ರಮ ತಡೆದರು.

ಸಮೂಹ ಸೃಷ್ಟಿ ಮತ್ತು ಸಾಮೂಹಿಕ ನಾಯಕತ್ವದಲ್ಲಿ ಅಚಲ ನಂಬಿಕೆ ಇರುವ ಶಾಂತರಸರೊಂದಿಗೆ ಅದೊಂದು ದಿನ ಏನೆಲ್ಲ ಚರ್ಚಿಸುತ್ತ ಕುಳಿತಿದ್ದೆವು. ಕೋಮುವಾದ ಪ್ರತಿಪಾದಿಸುವ ಮಠವೊಂದರಿಂದ ಫೋನು ಬಂದಿತು. ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಈ ಹೆಮ್ಮೆಯ ಸಂದರ್ಭದಲ್ಲಿ ತಾವು ನಮ್ಮ ಮಠಕ್ಕ ಬಂದು, ಸನ್ಮಾನ ಸ್ವೀಕರಿಸಬೇಕು..." ಆ ಕಡೆಯಿಂದ ಕರೆಯೋಲೆಯಿತ್ತು. ಇದ್ದಕ್ಕಿದ್ದಂತೆ ಶಾಂತರಸರ ಹುಬ್ಬುಗಳು ಗಂಟಿಕ್ಕಿದವು. ಅದೆಲ್ಲಿತ್ತೋ ಬೆಂಕಿಯ ಕಿಡಿ, ಕಣ್ಣ ನಡುವಿಂದ ಸಿಡಿಯಿತು. ಗಂಟಲಿನ ಆಳದ ದನಿಗೆ ಕತ್ತಿಯ ಹರಿತವಿತ್ತು. ಇಲ್ಲ. ನಿಮ್ಮ ಮಠಕ್ಕ ಬರಲಿಕ್ಕಾಗಲ್ಲ, ಟೈಮಿಲ್ಲ ಅಂತಲ್ಲ. ನಿಮ್ಮ ಮಠದ ಸನ್ಮಾನ ನನಗ ಬೇಕಿಲ್ಲ. ನಾನು ಸೌಹರ್ದತೆಯಲ್ಲಿ ನಂಬಿಕೆ ಇಟ್ಟ ಮನಶ್ಯಾ. ನೀವು ಅದರ ವಿರುದ್ಧ ಇದೀರಿ....." ಯಾವ ಅಳುಕಿಲ್ಲದೆ ನೇರವಾಗಿ ಹೇಳಿದರು. ಮುಲಾಜಿಲ್ಲದೆ ನಿಷ್ಠುರವಾಗಿ ಗುಡುಗಿದರು.

ಶಾಂತರಸರಿಗೆ ಥಟ್ಟನೆ ಪ್ರತಿಭಟಿಸುವ ತಾಖತ್ತಿತ್ತು. ತುಂಬ ವರ್ಷಗಳ ಹಿಂದೆ ಕುಷ್ಟಗಿಯ ಅಂಗನವಾಡಿ ಕಾರ್ಯಕರ್ತೆ ಶರಣವ್ವಳ ಮೇಲೆ ಬಲಾತ್ಕಾರ ನಡೆದು ಕೊಲೆಯಾದಾಗ ಶಾಂತರಸರು ತಮ್ಮ ಪತ್ನಿ ಲಕ್ಷ್ಮಿಯವರೊಡಗೂಡಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತ್ಯಕ್ಷರಾಗಿ "ಲಬೋ ಲಬೋ ಲಬೋ" ಎಂದು ಹೊಯ್ಕೊಳ್ಳತೊಡಗಿದರು. ಅದು ಅವರ ಪ್ರತಿಭಟನೆಯ ಸ್ವರೂಪವಾಗಿತ್ತು. "ಆರು ಇಲ್ಲದವರೆಂದು ಮೌನಗೊಂಡಿರಬೇಡ..... ಕೂಡಲ ಸಂಗನ ಎದುರು ದಂದಣದತ್ತಣವಾದರೂ ಅನ್ನು" ಬಸವಣ್ಣದ ವಚನ ನೆನಪಾಗಲೇಬೇಕು.

ಕೋಮುವಾದಿಗಳ ಬೆಂಕಿ ಹಚ್ಚುವ ದುಷ್ಟತನವನ್ನು ವಿರೋಧಿಸಿ ಹೇಳಿಕೆ ಕೊಡುವಾಗೆಲ್ಲ ಶಾಂತರಸರ ಹೆಸರು ಯಾವ ಸಂದರ್ಭದಲ್ಲೂ ಬಿಡದೆ ಸೇರಿಸಬೇಕೆಂದು ಫರಮಾನು ಹೊರಡಿಸಿದ್ದರು.

ಭಾಲ್ಕಿಯ ಮಠದ ದೊಡ್ಡಪ್ಪನವರನ್ನು ಜೀವ ಭಾವ ಭಕ್ತಿಯ ತಂತುವಾಗಿಸಿ ಕೊಂಡಿದ್ದರು. ಯಾಕೆ? ಎಂದು ಕೇಳಿದೆವು. "ಭಾಲ್ಕಿಯ ಪಟ್ಟದ್ದೇವರು ದಲಿತ ಮಕ್ಕಳನ್ನು ಮಠಕ್ಕೆ ತಂದು ಶಿಕ್ಷಣ ಕೊಟ್ಟರು. ಹೊರಗೆ ಉರ್ದು ಬೋರ್ಡ್ ಹಾಕಿ ಒಳಗೆ ಕನ್ನಡ ಕಲಿಸಿ ಉಳಿಸಿದರು. ಮುಷ್ಟಿನಿಧಿ ಸಂಗ್ರಹಿಸಿ ಕನ್ನಡ ಶಾಲೆ ಬದುಕಿಸಿದರು...." ಈಗ ಅದೇ ಮಠದ ಒಳಗೆ ಸಂಘ ಪರಿವಾರಿಗಳ ಕರಿ ನೆರಳು ಸೋಕುವಾಗ "ವಚನ ಪರಂಪರೆಯ ಮಠ ನಿಮ್ಮದು. ಕೋಮುವಾದಿಗಳು ಅಲ್ಲಿ ಹಣಿಕೆ ಬಾರದು..." ಎಂದು ಮಠದ ಸ್ವಾಮಿಗೆ ಖಡಾಖಂಡಿತವಾಗಿ ಹೇಳಿದರು.

...... ನಾವು ಆಸ್ಪತ್ರೆ ತಲುಪಿದಾಗ, ಶಾಂತರಸರನ್ನು ಅಪ್ಪನಂತೆ ಆರೈಕೆ ಮಾಡಿದ ಸೊಸೆ ಶಿವಗೀತಾ, ಗಜಲ್ ಪರಂಪರೆ ಕೊಂಡಿಯಂತಿರುವ ಮುಕ್ತಾಯಕ್ಕ, ಛಲದಿಂದ ಬದುಕು ಜೈಸುವ ಸಾಹಿತ್ಯ ಬರೆವ ಭಾರತೀ, ಅಪ್ಪನಂತೆ ನೇರ ನಡೆಯ ಬಸವ ಪ್ರಭು ಮೊಮ್ಮಕ್ಕಳು, ಶ್ವೇತಾ, ಶುಕ್ರ ಕಣ್ಣಾಲಿ ತುಂಬಿ ನಿಂತಿದ್ದರು. ಸಿಡಿಲಿನ ಕೊಂಡಿಯೊಂದು ಕಳಚುವ ಹೊತ್ತಾಗಿತ್ತು. ನಾವು ನೋಡ, ನೋಡುತ್ತಲೇ ಕಳಚಿಯೇಬಿಟ್ಟಿತು. ನಮ್ಮ ಪ್ರೀತಿಯ ಮಾಸ್ತರ್ ಪಿ.ರಾಮಚಂದ್ರರಾವ್ ಸತ್ತಾಗ ಆಳದ ಅಳುವೊಂದು ವೇದನೆಯಾಗಿ ಸಿಡಿದಿತ್ತು. ಈಗ ಅಂಥದೇ ದು:ಖವೊಂದು ಎದೆ ಭಾರಗೊಳಿಸಿತು....

ರಾತ್ರಿಯಿಡೀ ಭಜನೆ. "ಮಸ್ತ್ ಮೆಹೆಫಿಲ್ ಮಾಡೋಣ ಕನ್ನಡ ಗಜಲ್ ಗಾಯನ ನಡಸೋಣ".. ನಗುತ ಹೇಳಿದ ಶಾಂತರಸ ಕಣ್ಮುಚ್ಚಿ ಮಲಗಿದ್ದರು. ಸತ್ತ ಮೇಲೂ ಪ್ರಿಯರಾದರು ಶಾಂತರಸ. ಯಾಕೆ ಗೊತ್ತೇನು? "ತನ್ನ ಶವದೊಂದಿಗೆ ಯಾವುದೇ ಧಾರ್ಮಿಕ ಆಚರಣೆ ಮಾಡಬಾರದು. ಸತ್ತ ಮೇಲೆ ನೇರ ಮಣ್ಣಿಗೆ ಕಳಿಸಿ ಸಾಕು...." ಎಂದಿದ್ದರು. ಮಗ ಬಸವಪ್ರಭು ಹೇಳಿದ, "ಅಪ್ಪ ಅನಂತತೆಯನ್ನ ಪ್ರೀತಿಸಿದ, ಮಿತಿಯ ಧಾರ್ಮಿಕ ಲಾಂಛನ ಆಚರಣೆಗಳಲ್ಲ..."

ಅಂತಿಮ ಸಂಸ್ಕಾರದ ಮೆರವಣಿಗೆ ಗಜಲ್ ಕ್ಯಾಸೆಟ್ಟು ತಿರುಗುತ್ತಿತ್ತು.
ಮುಗಿಯ ಬಂದಿದೆ ಎಣ್ಣೆ ದೀಪದಲಿ
ಮಾಡುವುದು ಬಹಳವಿತ್ತು.
ಜೀವನದ ಯಾತನೆಯ ಮರ್ಮವನು
ಅರಿಯುವುದು ಬಹಳವಿತ್ತು.



ಹುತಾತ್ಮ ಸ್ಮರಣೆ

1942ರಲ್ಲಿ ಸ್ವಾತಂತ್ರ್ಯ ಯೋಧರಾದ ಮೈಲಾರ ಮಹದೇವಪ್ಪ, ವೀರಯ್ಯ ಹಿರೇಮಠ ಮತ್ತು ತರ್ಕಪ್ಪ ಮಡಿವಾಳರವರು ಬ್ರಿಟೀಷರ ಗುಂಡಿಗೆ ಬಲಿಯಾಗಿ ಹುತಾತ್ಮರಾದ ದಿನ ಏಪ್ರಿಲ್ 1ರಂದು ಹಾವೇರಿಯಲ್ಲಿ ಎಸ್‌ಎಫ್‌ಐ ಈ ಸಲ ಹಮ್ಮಿಕೊಂಡಿದ್ದ ಪಾದಯಾತ್ರೆಯಲ್ಲಿ ತರಲಾದ 'ಹುತಾತ್ಮ ಜ್ಯೋತಿ'ಗಳನ್ನು ಮೈಲಾರ ಮಹದೇವಪ್ಪ ಮತ್ತು ಅವರ ಸಂಗಾತಿಗಳ ಸಮಾಧಿಯ ಬಳಿಯಲ್ಲಿ ಅವರ ಒಡನಾಡಿ ಪಂಚಾಕ್ಷರಿ ವಳಸಂಗದ ಅವರು ಸ್ವೀಕರಿಸುತ್ತಿರುವುದು. ಎಸ್.ಎಫ್.ಐ.ನ ನಾರಾಯಣ ಕಾಳೆ, ಬಸವರಾಜ ಪೂಜಾರ್, ಜ್ಯೋತಿ ಪುಟ್ಟರೆಡ್ಡಿ, ಬಸವರಾಜ ಬಾರ್ಕಿ, ರಾಮು ವರ್ದಿ, ಬೀರಪ್ಪ ಸೊರಣಗಿ ಪಾದಯಾತ್ರೆಯ ನೇತೃತ್ವ ವಹಿಸಿದ್ದರು. ಸಿಪಿಎಂನ ರುದ್ರಪ್ಪ ಜಾಬಿನ್, ಸಾಹಿತಿ ಸತೀಶ್ ಕುಲಕರ್ಣಿ, ಶಿವಯೋಗಿ ಮರಡೂರ ಮತ್ತು ಹುತಾತ್ಮ ಮೈಲಾರ ಮಹದೇವಪ್ಪನವರ ಮಕ್ಕಳು, ಮೊಮ್ಮಕ್ಕಳು ಉಪಸ್ಥಿತರಿದ್ದರು.

ಸೂಫಿ ಅನುಭಾವದ ಕಥೆಗಳ ಅದ್ಭುತ ಲೋಕ



ಪ್ರಕಾಶಕರು: ಸುರಾ ಪ್ರಕಾಶನ, ಬೆಂಗಳೂರು

ನಮ್ಮ ಫಿಲಂಗಳ ಜನಪ್ರಿಯ ಕವ್ವಾಲಿಗಳು, ಎಲ್ಲೆಲ್ಲೂ ಕೇಳಿರುವ ಜೂಲೇ ಜೂಲೇ ಲಾಲ್'..ದಮಾ ದಮ್ ಮಸ್ತ್ ಕಲಂದರ್', ಜುನೂನ್ ರಾಕ್ ಬ್ಯಾಂಡ್, ಕರ್ನಾಟಕದಲ್ಲಿ ಮನೆಮಾತಾಗಿರುವ್. ಗುಲ್ಬರ್ಗದ ಬಂದೇ ನವಾಜರ ಉರುಸ್, ಶಿಶುನಾಳ ಶರೀಫ, ಬಾಬಾ ಬುಡನ್ ಗಿರಿ - ಇವುಗಳಲ್ಲಿ ಏನಾದರೂ ಸಾಮಾನ್ಯ ಅಂಶ ಇದೆ ಎಂದರೆ ನೀವು ನಕ್ಕು ಬಿಡಬಹುದು. ಇವೆಲ್ಲಾ ಬೇರೆ ಬೇರೆ ರೂಪಗಳಲ್ಲಿ ಇಂದಿಗೂ ಜೀವಂತವಾಗಿರುವ ಸೂಫಿಪಂಥದ ಪ್ರತೀಕಗಳು.? ಕವ್ವಾಲಿಗಳು ಮೂಲತಃ ಸೂಫಿ ದರ್ಶನಗಳ ಸಮೂಹ ಗಾಯನದ ರೂಪವಾಗಿದ್ದು ನಮ್ಮ ಫಿಲಂಗಳಲ್ಲಿ ರೂಪಾಂತರ ಹೊಂದಿದವು. '..ಮಸ್ತ್ ಕಲಂದರ್' ಪ್ರಸಿದ್ಧ ಸೂಫಿ ಹಾಡು. ಬಂದೇ ನವಾಜ್, ಮತ್ತು ಬಾಬಾ ಬುಡನ್ ಕರ್ನಾಟಕದ ಜನಪ್ರಿಯ ಸೂಫಿ ಸಂತರು. ಜುನೂನ್ ಸೂಫಿ ಮತ್ತು ರಾಕ್ ಸಂಗೀತದ ಪರಂಪರೆಗಳ ಸೃಜನಾತ್ಮಕ ಸಂಕರ ಮಾಡಿ ಜನಪ್ರಿಯವಾದ ಪಾಕಿಸ್ತಾನದ ಬ್ಯಾಂಡ್.

ಸಾರ್ವತ್ರಿಕತೆ

ಸೂಫಿಪಂಥ ಜಗತ್ತಿನಲ್ಲೇ ವಿಶಿಷ್ಟವಾದದ್ದು. ಇದು ಒಂದು ದಾರ್ಶನಿಕ ಪಂಥ. ಜನಪದ ಸಂಸ್ಕೃತಿ. ಜೀವನ ವಿಧಾನ. ಸಾಹಿತ್ಯ-ಸಂಗೀತ ಪರಂಪರೆ ಎಲ್ಲವೂ. ಇರಾಕ್ ನಿಂದ ಇಂಡೋನೇಶ್ಯಾದವರೆಗೆ ಹರಡಿ, ಸಾವಿರ ವರ್ಷಗಳಿಗಿಂತಲೂ ಹೆಚ್ಚು ಜೀವಂತವಾಗಿ ಇರುವಂತಹುದು. ಇಸ್ಲಾಮ್ ನ ಒಂದು ಕವಲಾಗಿ ಹುಟ್ಟಿದ್ದು ಎನ್ನಲಾಗಿದ್ದರೂ, ಏಶ್ಯಾದ ಹಲವು ಧಾರ್ಮಿಕ ದಾರ್ಶನಿಕ ಪಂಥ, ಸಂಸ್ಕೃತಿಗಳ ಜತೆ ಕೊಡು-ಕೊಳ್ಳು ಸಂಬಂಧದಿಂದ ಸಂಕರಗಳಿಂದ ಸಮೃದ್ಧವಾದದ್ದು. ಭಾರತ ಮತ್ತು ಕರ್ನಾಟಕದಲ್ಲಿ ಸೂಫಿ ಹಾಡುಗಳು ಮತ್ತು ಸಂಗೀತ ಜನಸಾಮಾನ್ಯರ ಜೀವನದ ಬಾಗ. ಸೂಫಿ ಕಥೆಗಳು ಆ ಪಂಥದ ಅನುಭಾವ ಎರಕ ಹೊಯ್ದವು. ಕೆಲವು ಪ್ರಸಿದ್ಧ ಸೂಫಿ ಸಂತರು ಹೇಳಿದವು. ಕೆಲವು ಜನಪದ ಕಥೆಗಳಂತೆ ಸಮೂಹ ಸೃಷ್ಟಿ. ಕಾಲ, ದೇಶ ಇದ್ದರೂ ಅದನ್ನೂ ಮೀರಿ ಸಾರ್ವಕಾಲಿಕತೆ, ಸಾರ್ವತ್ರಿಕತೆ ಪಡೆದವು.

ಇಂತಹ ಸೂಫಿ ಕಥೆಗಳ ಸಂಗ್ರಹವನ್ನು ಪ್ರೊ.ಬಿ.ಗಂಗಾಧರಮೂರ್ತಿಯವರು ಅನುವಾದಿಸಿ ತಂದಿದ್ದಾರೆ. ಹಿಂದೆ ಹಲವು ಅರಬಿ ಕಥೆಗಳ ಸಂಕಲನ ಬಂದಿದ್ದರೂ ಸೂಫಿ ಕಥೆಗಳ ಪ್ರಾತಿನಿಧಿಕ ಸಂಕಲನ ಬಹುಶಃ ಇದೇ ಮೊದಲು. ಇದರಲ್ಲಿ ನೂರು ದೊಡ್ಡ ಸಣ್ಣ (1-3 ಪುಟಗಳವರೆಗೆ) ಕಥೆಗಳು ಇವೆ. ಇವಲ್ಲಿ ಹೆಚ್ಚಿನವು ಇದ್ರಿಸ್ ಶಾ ಅವರ ಇಂಗ್ಲಿಷ್ ಪುಸ್ತಕದಿಂದ ಅನುವಾದ ಮಾಡಿದವು. ಇನ್ನೂ ಕೆಲವು ಇಂಟರನೆಟ್ ಸೇರಿದಂತೆ ಇತರ ಮೂಲಗಳಿಂದ ಆಯ್ದವು. ಈ ಕಥೆಗಳು ಕೊಡುವ ಅನುಭವ ಮತ್ತು ಗಂಗಾಧರಮೂರ್ತಿಯವರ ಅನುವಾದದ ಕುರಿತು, ಪುಸ್ತಕಕ್ಕೆ ಅರ್ಥಪೂರ್ಣ ಮುನ್ನುಡಿಯಲ್ಲಿ ಡಾ..ರಹಮತ್ ತರೀಕೆರೆ ಅವರ ಈ ಮಾತುಗಳು ಅತ್ಯಂತ ಸೂಕ್ತವಾಗಿವೆ.

ಬಹುಸ್ತರ

'ಇಲ್ಲಿನ ಕಥೆಗಳಲ್ಲಿರುವ ಜಾಣ್ಮೆ, ಹಾಸ್ಯ, ಬೆಡಗು, ನಿಗೂಢತೆ, ಚುರುಕುತನಗಳಿಗೆ ಮನೋರಂಜನೆಯ ಉದ್ದೇಶವಿಲ್ಲ. ದೊಡ್ಡ ದಾರ್ಶನಿಕ ಸತ್ಯಗಳನ್ನು ಧಾರಣೆ ಮಾಡುವ ಉದ್ದೇಶವಿದೆ. ಸೂಫಿ ಅನುಭಾವದ ಜಗತ್ತಿನಲ್ಲಿ ಸೂಫಿ ಕಥೆಗಳಿಗೆ ಅವುಗಳದ್ದೇ ಆದ ಒಂದು ಅನುಭಾವಿಕ ಅರ್ಥವಿದೆ. ಅವು ಒಂದರ್ಥದಲ್ಲಿ ಗುಪ್ತಜ್ಞಾನದ ರೂಪಕಗಳು - ನಮ್ಮ ಬೆಡಗಿನ ವಚನಗಳಂತೆ. ಇಲ್ಲಿನ 'ಜಲಾಶಯ' ಕಥೆಯು ಅಲ್ಲಮನ ಬೆಡಗಿನ ವಚನದಂತಿದೆ. ..ಆದರೆ ಎಲ್ಲಾ ಕಥೆಗಳ ಮೂಲಾರ್ಥ ಯಾವುದು ಎಂದು ಖಚಿತವಾಗಿ ಹೇಳಲಾಗದು..ಹೀಗಾಗಿ ಇವನ್ನು ಮೂಲಾರ್ಥದ ಶೋಧಕ್ಕಾಗಿಯೋ, ಅನ್ಯ ಸಂಸ್ಕೃತಿಯೆಂಬ ಕುತೂಹಲದಲ್ಲೋ ಓದಬೇಕಿಲ್ಲ. ಈ ಯಾವ ಅನುಭಾವಿಕ ಭಾರ ಮತ್ತು ಸಾಂಸ್ಕೃತಿಕ ಪರಕೀಯತೆಯಿಲ್ಲದೆ ಕೂಡಾ ಕೇವಲ ಖುಷಿ ಕೊಡುವ ಸ್ತರವನ್ನೂ ಇವು ಹೊಂದಿವೆ...ಹೀಗೆ ಏಕಕಾಲಕ್ಕೆ ಬಹುಸ್ತರಗಳನ್ನು ಸಾಧಿಸುವುದು ಜ್ಞಾನ, ಭಾಷೆ, ಸಾಹಿತ್ಯಕ್ಕೆ ಸೂಫಿ ಅನುಭಾವವು ಕೊಟ್ಟಿರುವ ಕೊಡುಗೆ ದೊಡ್ಡದು...ಮೂರ್ತಿಯವರು ಎಲ್ಲೂ ತಡೆಯಿರದಂತೆ ಓದುವ ರೀತಿಯಲ್ಲಿ ಅವುಗಳ ಬಹುಸ್ತರೀಯತೆಯ ಸೂಕ್ಷ್ಮವು ಹಾಳಾಗದಂತೆ ಸಹಜವಾಗಿ ಅನುವಾದಿಸಿದ್ದಾರೆ. ಇದೊಂದು ಅಪ್ಪವಾದ ಸೃಜನಶೀಲ ಅನುವಾದ..?

ಸಕಾಲಿಕ

ಈ ಪುಸ್ತಕದ ಪ್ರಕಟಣೆ ಅತ್ಯಂತ ಪ್ರಸ್ತುತ ಮತ್ತು ಸಕಾಲಿಕ. ನಮ್ಮ ಸಮಾಜದ ಎಲ್ಲಾ ವಿದ್ಯಮಾನಗಳನ್ನು ಹಿಂದೂ-ಮುಸ್ಲಿಮ್ ಎಂಬ ಹಳದಿ ಕಣ್ಣಿಂದ ನೋಡಿ-ತೋರಿಸಿ, ಅದರ ಬಹುತ್ವ ಮತ್ತು ಸೆಕ್ಯುಲರ್ ಮೂಲ ಸತ್ವವನ್ನು ನಾಶಮಾಡುವ ಪ್ರವೃತ್ತಿ ಬಲವಾಗುತ್ತಿದೆ. ಸೂಫಿ ಕಥೆಗಳ ಅದ್ಭುತ ಲೋಕವನ್ನು ಪರಿಚಯಿಸುವ-ನೆನಪಿಸುವ ಮೂಲಕ, ಈ ಮೂಲ ಸತ್ವ ಉಳಿಸಿಕೊಳ್ಳುವ ಪ್ರಯತ್ನಕ್ಕೆ ಕೈಜೋಡಿಸಿದಂತಾಗಿದೆ.

-ವಸಂತ

ಅಲ್ಲಾನ ನೂರನೆಯ ಹೆಸರು

ಭಾರತ ದೇಶದಲ್ಲಿ ವಾಸಿಸುತ್ತಿದ್ದ ಒಬ್ಬ ಫಕೀರ ಮತ್ತು ಮಹಾನ್ ಸಾಧಕನೆನಿಸಿಕೊಂಡಿದ್ದ ಒಬ್ಬ ಸೂಫಿಯ ನಡುವಿನ ಒಂದು ಪ್ರಸಂಗ ಇದು. ಒಂದು ದಿನ ಒಬ್ಬ ಫಕೀರನು ಸೂಫಿಯೊಬ್ಬನ ಬಳಿಗೆ ಬಂದು, 'ಅಲ್ಲಾನ ನೂರನೆಯ ಹೆಸರಿಗೆ ವಿಶೇಷ ಮಹತ್ವವಿದೆ. ಆ ಹೆಸರನ್ನು ಬಲ್ಲವರು ಬದುಕಿನ ಗತಿಯನ್ನೇ ಏಕೆ, ಚರಿತ್ರೆಯ ಗತಿಯನ್ನೇ ಬದಲಾಯಿಸು ವಂತಹ ಪವಾಡಸದೃಶ ಕಾರ್ಯಗಳನ್ನು ಮಾಡಬಲ್ಲರು ಎನ್ನುತ್ತಾರೆ. ಆ ಗುಣಾತಿಶಯದ ಹೆಸರನ್ನು ನನಗೆ ತಿಳಿಸಿಕೊಡಬೇಕು' ಎಂದು ಕೇಳಿಕೊಂಡ.

ಸೂಫಿಯು ಅವನನ್ನು ಕೂರಿಸಿಕೊಂಡು ಹೀಗೆ ಹೇಳಿದ: 'ಇದನ್ನು ತಿಳಿದುಕೊಳ್ಳುವ ಅರ್ಹತೆ ನಿನಗಿದೆಯೇ ಎಂಬುದು ಮೊದಲು ನಿರ್ಣಯ ವಾಗಬೇಕು. ಪರಂಪರೆಯಿಂದಲೂ ಸೂಫಿಗಳಲ್ಲಿರುವ ಸಂಪ್ರದಾಯದಂತೆ ನಿನ್ನನ್ನು ನಾನು ಪರೀಕ್ಷಿಸಬೇಕಿದೆ. ಆ ಅರ್ಹತೆಯನ್ನು ನೀನು ಸಾಬೀತು ಪಡಿಸಬೇಕು. ಬೆಳಗಿನಿಂದ ಸಂಜೆಯವರೆಗೆ ನೀನು ಈ ನಗರದ ಪ್ರವೇಶ ದ್ವಾರದ ಬಳಿ ಹಾಜರಿರಬೇಕು. ಅಲ್ಲಿ ನಡೆಯುವ ಸಮಸ್ತ ವಿದ್ಯಮಾನಗಳನ್ನೂ ಗಮನವಿಟ್ಟು ವೀಕ್ಷಿಸಬೇಕು. ಅವುಗಳಲ್ಲಿ ಯಾವುದು ನಿನಗೆ ಮುಖ್ಯವೆಂದು ತೋರುವುದೋ ಅದನ್ನು ನನಗೆ ವರದಿ ಮಾಡಬೇಕು'.

ಫಕೀರನು ಅದರಂತೆಯೇ ಮುತುವರ್ಜಿವಹಿಸಿ ಇಡೀ ದಿನವನ್ನು ಅಲ್ಲಿ ಕಳೆದ. ಸೂರ್ಯ ಮುಳುಗಿದ ಬಳಿಕ ಸೂಫಿಯಲ್ಲಿಗೆ ಬಂದು ವರದಿ ಒಪ್ಪಿಸಿದ.

ನೀವು ಹೇಳಿದಂತೆಯೇ ನಾನು ನಗರದ ಪ್ರವೇಶದ್ವಾರದ ಬಳಿ ಬೆಳಿಗ್ಗೆಯಿಂದ ಸಂಜೆಯವರೆಗೂ ಒಂದುಕಡೆ ಕುಳಿತು ಎಲ್ಲವನ್ನೂ ಗಮನವಿಟ್ಟು ವೀಕ್ಷಿಸಿದೆ. ಹಲವು ಸಂಗತಿಗಳು ನಡೆದವು. ಆದರೆ ಒಬ್ಬ ಮುದುಕನಿಗೆ ಸಂಬಂಧಿಸಿದ ಒಂದು ಘಟನೆಯು ನನ್ನ ತೀವ್ರ ಗಮನವನ್ನು ಸೆಳೆಯಿತು. ಅದರಿಂದ ನಾನು ವಿಚಲಿತನಾದೆ. ಬೆನ್ನಿನ ಮೇಲೆ ಕಟ್ಟಿಗೆಯ ದೊಡ್ಡ ಹೊರೆಯನ್ನು ಹೊತ್ತುಕೊಂಡ ಆ ಮುದುಕನು ನಗರವನ್ನು ಪ್ರವೇಶಿಸಲು ಅಲ್ಲಿಗೆ ಬಂದ. ಮಾರಾಟಕ್ಕೆ ಕೊಂಡೊಯ್ಯುತ್ತಿದ್ದ ಆ ಕಟ್ಟಿಗೆ-ಹೊರೆಯ ಬೆಲೆಗೆ ತಗಲುವ ಸುಂಕ ಕೊಡಬೇಕೆಂದು ದ್ವಾರಪಾಲಕನು ಪೀಡಿಸಿದ. ದಟ್ಟ ದಾರಿದ್ರ್ಯದಲ್ಲಿ ಮುಳುಗಿದ್ದ ಆ ಮುದುಕನು ಕಟ್ಟಿಗೆಯು ಮಾರಾಟವಾದ ನಂತರ ಸುಂಕ ಕೊಡುವುದಾಗಿ ಹೇಳಿದ. ಆ ಅಸಹಾಯಕ ವೃದ್ಧನ ನೆರವಿಗೆ ಯಾರೊಬ್ಬರೂ ಇಲ್ಲದ್ದನ್ನು ತಿಳಿದ ದ್ವಾರಪಾಲಕನು ಹೊರೆಯನ್ನು ಅಲ್ಲಿಯೇ ಇಳಿಸುವಂತೆ ಗದರಿದ. ಮುದುಕ ಮೌನವಾಗಿ ದೈನ್ಯದಲ್ಲಿ ನಿಂತುಕೊಂಡ. ದ್ವಾರಪಾಲಕನು ದೌರ್ಜನ್ಯದಿಂದ ಅದನ್ನು ವಶಪಡಿಸಿಕೊಂಡು ತನಗಾಗಿ ಇಟ್ಟುಕೊಂಡ. ಒಂದೆರಡು ಏಟುಹಾಕಿ ಮುದುಕನನ್ನು ಪಕ್ಕಕ್ಕೆ ತಳ್ಳಿದ. ಮುದುಕನು ದುಃಖಿತನಾಗಿ ಅಲ್ಲಿಂದ ಹೊರಟುಹೋದ.'

'ಇದನ್ನು ನೋಡಿದಾಗ ನಿನಗೇನನ್ನಿಸಿತು'? ಸೂಫಿಯು ಕೇಳಿದ.

'ಅಲ್ಲಾನ ನೂರನೆಯ ಆ ಮಹಾನ್ ಹೆಸರನ್ನು ತಿಳಿದುಕೊಳ್ಳಲೇಬೇಕು ಎನ್ನುವ ಅಭಿಲಾಶೆ ಈ ಘಟನೆಯನ್ನು ಕಂಡಮೇಲೆ ಮತ್ತಷ್ಟು ಹೆಚ್ಚಾಯಿತು. ಅದು ಗೊತ್ತಿದ್ದರೆ ನತದೃಷ್ಟನಾದ ಆ ಅನಾಥ ವೃದ್ಧನಿಗೆ ಆ ದುಸ್ಥಿತಿಯು ಬರದಂತೆ ನೋಡಿಕೊಳ್ಳಬಹುದಿತ್ತು' ಎಂದ ಫಕೀರ.

ಅದನ್ನು ಕೇಳಿದ ಸೂಫಿಯು, 'ನನಗೆ ಆ ಹೆಸರನ್ನು ತಿಳಿಸಿಕೊಟ್ಟವರು ನನ್ನ ಗುರುಗಳು. ಸಂಕಷ್ಟದಲ್ಲಿರುವವನನ್ನು ನೋಡಿದಾಗ ಅಂತಃಪ್ರೇರಣೆಯಿಂದ ನಾವು ಪ್ರತಿಕ್ರಿಯಿಸುವುದು ಭಾವನಾತ್ಮಕ ವಾಗಿರುತ್ತದೋ ಅಥವಾ ಕ್ರಿಯಾತ್ಮಕ ವಾಗಿರುತ್ತದೋ ಎಂಬುದರ ಮೇಲೆ ನಮ್ಮ ಅರ್ಹತೆಯು ನಿರ್ಧಾರವಾಗುತ್ತದೆ. ಅನುಭವಕ್ಕೆ ಬಂದ ಘಟನೆಗಳಿಗೆ ನಾವು ಹೇಗೆ ಸ್ಪಂದಿಸುತ್ತೇವೆ ಎಂಬ ನಿರ್ಣಾಯಕ ಸನ್ನಿವೇಶಗಳ ಮೂಲಕ ನಮ್ಮ ನಿಜವಾದ ವಿಚಾರ ಮತ್ತು ನಡಾವಳಿಗಳು ವ್ಯಕ್ತವಾಗುತ್ತವೆ. ಈ ಆಧಾರದ ಮೇಲೆಯೇ ನನ್ನ ಗುರುಗಳು ನನ್ನ ಅರ್ಹತೆಯನ್ನು ನಿರ್ಣಯಿಸಿದ್ದು. ಅಲ್ಲಾನ ಆ ಹೆಸರನ್ನು ಹೇಳುತ್ತೇನೆ ಕೇಳು: 'ನತದೃಷ್ಟರಾದವರಿಗೆ ಸದಾ ನೆರವಾಗು' ಎಂಬುದೇ ಅವನ ನೂರನೆಯ ಹೆಸರು. ಜಗತ್ತಿನ ಗತಿಯನ್ನು ಬದಲಾಯಿಸುವ ಶಕ್ತಿ ಈ ಹೆಸರಿಗೆ ಮಾತ್ರವೇ ಇದೆ' ಎಂದ.

'ಇಂಥ ಜ್ಞಾನವನ್ನು ನೀಡಿದ ನಿಮ್ಮ ಗುರುಗಳು ಯಾರು' ಫಕೀರ ಕೇಳಿದ.

ಸೂಫಿಯು ನಗುತ್ತಾ, 'ನೀನು ಈ ದಿನ ನಗರದ ಮಹಾದ್ವಾರದ ಬಳಿ ನೋಡಿದ ಆ ಕಟ್ಟಿಗೆ ಮಾರುವ ಮುದುಕನೇ ನನ್ನ ಗುರು' ಎಂದು ನುಡಿದ.

ಅನಾಮಿಕ ಸೂಫಿ

ಚುನಾವಣೆ ಸ್ವಾರಸ್ಯಕರ ಸಂಗತಿ ಬರೆದು ಕಳಿಸಿ

ಚುನಾವಣೆಗಳು ಘೋಷಿತವಾಗಿವೆ. ಹಣಹಣಿಗೆ ಕಣ ಸಿದ್ದವಾಗಿದೆ. ಹಿಂದಿನ ಚುನಾವಣೆಗಳಂತಲ್ಲ ಈ ಚುನಾವಣೆ.

ಇಲ್ಲಿ ಹೇಗಾದರೂ ಅಧಿಕಾರಕ್ಕೆ ಬರಬೇಕು. ಬರಲೇಬೇಕು, ಇದೇ ಬಂಡವಾಳಶಾಹಿ ಪಕ್ಷಗಳ ಮಂತ್ರ. ಅದಕ್ಕಾಗಿ ಹಣ, ಆಮಿಷ, ಜಾತಿ, ಮತಧರ್ಮ ಹಿಡಿದು ಜನರತ್ತ ಬರುತ್ತಿರುವವರೇ ಅಧಿಕ. ಜನರ ನಿತ್ಯದ ನೋವು, ಅನುದಿನದ ಸಂಕಟಗಳಿಗೆ ಪರಿಹಾರ ಸೂಚಿಸುವವರೆಲ್ಲಿ? ಗೆದ್ದರೆ ವಿಧಾನಸಭೆಯನ್ನು ಹೋರಾಟದ ಒಂದು ವೇದಿಕೆ ಮಾಡಿಕೊಳ್ಳುವವರೆಷ್ಟು? ನಿಜ, ಇಂತಹ ಜನಪರ ಹೋರಾಟದ ಶಕ್ತಿಗಳನ್ನು ಬೆಂಬಲಿಸಬೇಕು.

ಇಂದಿನ ಚುನಾವಣೆಯಲ್ಲಿ ಎದುರಿಸಬೇಕಿರುವುದು ಮಹಾದೈತ್ಯನನ್ನು ಕೋಮುವಾದದ ಕರಾಳ ಶಕ್ತಿಯನ್ನು. ಈ ಹೋರಾಟ ಜಿಲ್ಲೆ ಜಿಲ್ಲೆಗಳಲ್ಲಿಯೂ ಒಂದೊಂದು ಬಗೆ. ಒಂದೊಂದು ವೈವಿಧ್ಯತೆ, ಹಲವು ಸ್ವಾರಸ್ಯಕರ ಸಂಗತಿಗಳು. ಸಂಸದೀಯ ಪ್ರಜಾಸತ್ತೆಯ ಶಕ್ತಿ, ಮಿತಿಗಳು ಇಂತಹ ವಿಶ್ಲೇಷಣೆ, ಸಂಗತಿಗಳನ್ನು ದುಡಿವ ದುಡಿವ ಜನರ ಪ್ರಾಣಮಿತ್ರ ತೆರೆದಿಡಲಿದೆ. ಪ್ರತಿ ಸಂಚಿಕೆಯಲ್ಲಿ ನಿಮ್ಮೆದುರು ಅನಾವರಣ. ಅದಕ್ಕಾಗಿ ನೀವು ಕಂಡುಂಡ ಸಂಗತಿಗಳನ್ನು ಈ ಕೂಡಲೇ ಬರೆದು ಕಳಿಸಿ ಅದಕ್ಕಾಗಿ ನಮ್ಮನ್ನು ಸಂಪರ್ಕಿಸಿ -ಸಂ.

ಅಂಬೇಡ್ಕರ್

ಅಂಬೇಡ್ಕರ್ ಆ ಹೊತ್ತು ಆ ಹಿಂದು ಧರ್ಮ
ತ್ಯಜಿಸಿದ್ದು ಗೊತ್ತಲ್ಲ ಏನಿದರ ಮರ್ಮ
ಹಿಂದೂಗಳು ಒಂದೆಂಬ ಈ ಜನರೆ ಮತ್ತೆ
ತೊಟ್ಟು ನೀರೂ ಕೊಡದೆ ದೂಡಿದರೂ ಗೊತ್ತೆ?

ನಾಟಕದ ಸಾರ

ಚುನಾವಣೆ ಕಾಲಕ್ಕೆ ಅಲ್ಲಲ್ಲಿ ಟೆಂಟ್...
ಟೆಂಟನೊಳು ನಿತ್ಯವೂ ನಾಟಕವು ...ಂಟು
ಧರ್ಮ ದೇವರೇ ನೋಡಿ ನಾಟಕ... ಸಾರ
ಅಭಿನಯದಿ ಪ್ರವೀಣ ಸಂಘ ಪರಿ... ರ
...

ಹೆಣ್ಣು ತಾಯಿಯಾಗಿ ಬೇಕು, ಹೆಂಡತಿಯಾಗಿ ಬೇಕು. ಮಗಳಾಗಿ?

ಭಾಗ 1

ಕನ್ನಡಿ



ಕೆ.ಎಸ್.ವಿಮಲ

ಸುಡು, ಸುಡು ಬಿಸಿಲಿನ ಒಂದು ಮಧ್ಯಾಹ್ನ. ಬಂದ ಕರೆಯನ್ನು ನಿರಾಸಕ್ತಿಯಿಂದಲೇ ತೆಗೆದೆ. ಅತ್ತ ಕಡೆಯಿಂದ ಮಂಡ್ಯ ಜಿಲ್ಲೆಯ ಮಹಿಳಾ ವೈದ್ಯರೊಬ್ಬರು ಆತಂಕ, ಕಳಕಳಿಯಿಂದ ಕೇಳುತ್ತಿದ್ದಾರೆ. ಮೇಡಂ ಎರಡು ಜೀವಗಳನ್ನು ಉಳಿಸಬೇಕಿದೆ. ನನ್ನಿಂದಾದ ಎಲ್ಲ ಪ್ರಯತ್ನ ಮಾಡಿದೆ. ಆದರೆ ಅದೆಲ್ಲವೂ ನಿಷ್ಫಲವಾಗಿದೆ. ಏನು ಎಂದರೆ ಗರ್ಭಿಣಿ ಮಹಿಳೆಯೊಬ್ಬಳು ಪರೀಕ್ಷೆಗೆ ಬಂದಿದ್ದಾಳೆ. ಅವಳದು ಒಂದೇ ಹಠ. ಮಗು ಹೆಣ್ಣೋ ಗಂಡೋ ನೋಡಿ ಹೇಳಲೇಬೇಕು. ಅಷ್ಟೇ ಅಲ್ಲ ಹೆಣ್ಣಾದರೆ ಗರ್ಭಪಾತ ಮಾಡಲೇಬೇಕು. ಗರ್ಭಪಾತ ಮಾಡದಿದ್ದರೆ ಅವಳು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಬೆದರಿಕೆ ಹಾಕುತ್ತಿದ್ದಾಳೆ!

'ನರಕ' ಬೇಡ

ತನ್ನ ಕರುಳ ಕುಡಿಯನ್ನು ಕೈಯ್ಯಾರೆ ಹೊಸಕಿ ಹಾಕಲು ಕೇಳುವ, ಅಂತಹ ಒಂದು ಕೆಲಸ ಸಾಧ್ಯವಿಲ್ಲ ಎಂದರೆ ತನ್ನ ಜೀವಕ್ಕೆ ತಾನೇ ಎರವಾಗಲೂ ಸಿದ್ಧಳಾಗಿದ್ದಾಳೆ ಆಕೆ. ಯಾಕೆ? ಯಾಕೆಂದರೆ ಅವಳು ಹೆರುವ ಮಗುವಿನ ಲಿಂಗ ನಿರ್ಧಾರದಲ್ಲಿ ಅವಳದೇನೂ ಪಾತ್ರವಿರದಿದ್ದರೂ ಹೆಣ್ಣು ಹೆತ್ತಳೆಂದರೆ ಅವಳ ಬದುಕಿಡೀ ನರಕವೆಂಬುದನ್ನು ನೆನೆಸಿಕೊಂಡೇ ಆಕೆ ಇಂತಹ ಒಂದು ತೀರ್ಮಾನಕ್ಕೆ ಬಂದಿದ್ದಾಳೆ. ತನ್ನಿಂದಾದ ಎಲ್ಲ ಪ್ರಯತ್ನ ಮಾಡಿದ ವೈದ್ಯೆ ಸಹಾಯಕ್ಕಾಗಿ ಸಂಪರ್ಕಿಸಿದ್ದಾಳೆ. ಅವರ ಜೊತೆ ಮಾತನಾಡುತ್ತಿದ್ದಂತೆಯೇ ವೈದ್ಯರ ಪರಿಚಯವಾದ ಕ್ಷಣ ನೆನಪಾಯಿತು. ಮಂಡ್ಯದಲ್ಲಿ "ಭ್ರೂಣ" ನಾಟಕ, ಮತ್ತು ಮಹಿಳೆಯರ ಮೇಲಿನ ವಿವಿಧ ದೌರ್ಜನ್ಯಗಳ ಕುರಿತಂತೆ ವಾರವಿಡೀ ನಡೆಸಿದ ವಿವಿಧ ಕಾರ್ಯಕ್ರಮಗಳ ಸಮಾರೋಪ ವಿಚಾರ ಸಂಕಿರಣ. ಪರಿಚಯವಾದ ಈ ವೈದ್ಯೆ ನನ್ನೊಡನೆ ಬಹಳ ಹೊತ್ತು ವಾದಿಸಿದ್ದರು. ಸ್ತ್ರಿ ಭ್ರೂಣಹತ್ಯೆ ವ್ಯಾಪಕವಾಗಿ ಏನೂ ನಡೆಯುತ್ತಿಲ್ಲ. ಅದು ಅಷ್ಟು ದೊಡ್ಡ ಸಮಸ್ಯೆಯಲ್ಲ ಇತ್ಯಾದಿ. "ಭ್ರೂಣ" ನಾಟಕ ನೋಡಿದ ನಂತರ ಅಲ್ಲಿ ಕರಾರುವಾಕ್ಕಾಗಿ ಸಿಕ್ಕ ಮಾಹಿತಿಗಳು ಮನಮಿಡಿದ ದೃಶ್ಯಗಳು ಅವರ ಒಳಮನಸ್ಸಿಗೆ ಸ್ವಲ್ಪ ತಾಗಿದವೇನೊ ಎನ್ನುವಂತೆ ನಂತರದ ಪ್ರತಿಕ್ರಿಯೆ ಇತ್ತು. ಇದರ ಮುಂದುವರಿದ ಭಾಗವೆನ್ನುವಂತೆ ಅವರದೇ ಕ್ಲಿನಿಕ್‌ಗೆ ಬಂದ ಪ್ರಕರಣ ಅವರನ್ನು ತಬ್ಬಿಬ್ಬಾಗಿಸಿತ್ತು. ಹಾಗೆಂದೇ ನಮಗೆ ಕರೆ.

ತಣ್ಣನೆಯ ಕ್ರೌರ್ಯ

ಇಂತಹ ಸಂದರ್ಭಗಳಲ್ಲೆಲ್ಲ ಎದುರಾಗುವ ಪ್ರಶ್ನೆ ಯಾಕೆ-ಹೆಣ್ಣೆಂದರೆ ಈ ಸಮಾಜಕ್ಕೆ ಹೆಣ್ಣೆದರೆ ಇಷ್ಟು ನಿಕೃಷ್ಟ? ಈ ಭಾವನೆಗೆ ಪುಷ್ಟಿ ಕೊಡುವಂತೆ ಕಳೆದ ಕೆಲವು ತಿಂಗಳುಗಳ ಹಿಂದೆ ಮಂಡ್ಯ ಜಿಲ್ಲೆಯಲ್ಲಿಯೇ ನಡೆದ ಮತ್ತೊಂದು ಘಟನೆ ಸ್ಕ್ಯಾನಿಂಗ್ ಯಂತ್ರದ ದೋಷವೋ ಪರೀಕ್ಷಿಸಿದ ದೋಷವೋ ಒಟ್ಟಿನಲ್ಲಿ ಹೆಣ್ಣೆಂದು ಗರ್ಭಪಾತ ಮಾಡಿದ ಕೂಸು ಗಂಡು. ಇಡೀ ರಾಜ್ಯದ ತುಂಬ ದೊಡ್ಡ ಸುದ್ದಿ. ಗಲಭೆ, ಧರಣಿ, ಹೋರಾಟ ಕ್ರಮ..... ಏನೆಲ್ಲ. ಇದೇ ಕೂಸು ಹೆಣ್ಣಾಗಿದ್ದಲ್ಲಿ ಯಾರಿಗೂ ಗೊತ್ತೇ ಆಗದ ಹಾಗೆ ಈ ಜಗತ್ತಿಗೆ ಕಣ್ಣು ಬಿಡುವ ಮೊದಲೇ ಮಣ್ಣುಪಾಲಾಗಿಬಿಡುತ್ತಿತ್ತು. ಇದೆಂತಹ ತಣ್ಣನೆಯ ಕ್ರೌರ್ಯ?

ಇಂತಹ ಪಾಶವೀ ಕೃತ್ಯಗಳ ಫಲವಾಗಿಯೇ ಪಂಜಾಬ್, ಹರ್ಯಾಣದಂತಹ ರಾಜ್ಯಗಳಲ್ಲಿ ಕಳೆದ 15 ರಿಂದ 20 ವರ್ಷಗಳಿಂದ ಕೆಲವು ಹಳ್ಳಿಗಳಲ್ಲಿ ದಿಬ್ಬಣಗಳೇ ಎದ್ದಿಲ್ಲವೆಂದೂ, ಆಕಸ್ಮಾತ್ ಯಾವುದಾದರೂ ಹಳ್ಳಿಯಲ್ಲಿ ಮದುವೆಯ ವಯಸ್ಸಿನ ಹೆಣ್ಣುಮಗಳಿದ್ದು ಅವಳ ಮದುವೆ ಪರ ಊರಿನವರೊಂದಿಗೆ ನಡೆಯುವ ಪ್ರಸ್ತಾಪ ಬಂದರೂ ಸಾಕು ಕೊಲೆಗಳೇ ನಡೆದು ಹೋಗಿ ಬಿಡುವ ಸಂದರ್ಭಗಳು ಉಂಟಾಗಿವೆ ಎಂದು ಸರ್ಕಾರದ ಸಮೀಕ್ಷೆಗಳು ತಿಳಿಸಿವೆ. ಅಷ್ಟೇ ಸಾಲದೆಂಬಂತೆ ಮಹಾಭಾರತದ ದ್ರೌಪತಿಯ ಕಥೆ ಅದೇ ರಾಜ್ಯಗಳಲ್ಲಿ ಅಕ್ಷರಶಃ ನಡೆಯುತ್ತಿದೆ. ನಮ್ಮ ಕುಟುಂಬದಲ್ಲಿ ಹೆಣ್ಣು ಹುಟ್ಟುವುದು ಬೇಡವೆಂದು ಕೊಂದ ಜನರಿಗೆ ಹೆಣ್ಣಿಲ್ಲದೆ ಬದುಕಲು ಸಾಧ್ಯವಾಗದ ಕಾರಣಕ್ಕೆ ಇತರ ರಾಜ್ಯಗಳ ಬಡ ಕುಟುಂಬಗಳಿಂದ ಹೆಣ್ಣುಮಕ್ಕಳನ್ನು ಹಣಕ್ಕೆ ಕೊಂಡುಕೊಳ್ಳುವ ಮತ್ತು ಕುಟುಂಬದಲ್ಲಿರುವ ಎಲ್ಲ ಗಂಡಸರ (ಅಲ್ಲಿ ಈಗಲೂ ಅವಿಭಕ್ತ ಕುಟುಂಬಗಳೇ ಹೆಚ್ಚು) ಕಾಮತೃಷೆ ತೀರಿಸುವ ಏಕೈಕ ಪ್ರಾಣಿಯಾಗಿ ಅವಳು ಬದುಕುವ ಸ್ಥಿತಿ ನಿರ್ಮಿಸಲಾಗಿದೆ. ಹೀಗೆ ಕೊಂಡವರನ್ನು bought wives (ಕೊಂಡು ತಂದ ಹೆಂಡತಿ) ಎಂದು ಕರೆಯುತ್ತಾರೆ. ಇಂತಹ ಅಮಾನವೀಯ ಪರಿಸ್ಥಿತಿ ಈಗಾಗಲೇ ನಿರ್ಮಾಣವಾಗಿದ್ದರೂ ಕೂಡ ಹೆಣ್ಣು ಮಗು ಬೇಡವೆಂಬ ಭಾವನೆಯೇ ಈಗಲೂ ಕಂಡುಬರುತ್ತಿದೆ. ಹಾಗೆಂದೇ 0ರಿಂದ 6ರ ವಯೋಮಾನದ ಮಕ್ಕಳ ಪರಿಮಾಣ ನೋಡಿದರೆ ಹೆಣ್ಣು ಶಿಶುಗಳ ಸಂಖ್ಯೆ ಗಾಬರಿ ಹುಟ್ಟಿಸುವಷ್ಟು ಕುಸಿಯುತ್ತಿದೆ.

ವಿಷಮ ಅನುಪಾತ

100 ಗಂಡು ಮಕ್ಕಳಿಗೆ ರಾಷ್ಟ್ರೀಯ ಸರಾಸರಿ 921 ಹೆಣ್ಣು ಮಕ್ಕಳು. ಪಂಜಾಬ್ ಹರ್ಯಾಣಗಳಲ್ಲಿ



ಇದು ಕೆಲವು ಕಡೆ 700ರ ಆಸುಪಾಸಿಗೂ ತಲುಪಿದೆ. ಎಂದರೆ ಪರಿಸ್ಥಿತಿಯ ಗಂಭೀರತೆ ಎಷ್ಟಿದೆ ಎಂಬುದು ಅರ್ಥವಾದೀತು. ಹಾಗಾದರೆ ಈ ನೆಲದಲ್ಲಿ ಇಂತಹುದನ್ನು ನಿಯಂತ್ರಿಸಬಹುದಾದ ಕಾನೂನು ಇಲ್ಲವೇ? ಖಂಡಿತಾ ಇದೆ. ಆದರೆ ಅದರ ಪರಿಣಾಮಕಾರೀ ಜಾರಿ ಇನ್ನೂ ಕೈಗೆಟುಕದ ಕುಸುಮ. ಆದರೂ ಎಟುಕಲಾರದ್ದನ್ನು ಎಟುಕಿಸಿಕೊಳ್ಳಲು ನಿರಂತರ ಪ್ರಯತ್ನ, ಹೋರಾಟ ನಡೆಯಲೇಬೇಕು. ಅಂತಹ ಒಂದು ಹೋರಾಟಕ್ಕೆ ಪೂರಕ ಮಾಹಿತಿ ಇಲ್ಲದೆ ಅದನ್ನು ಬಳಸುವ ಮನಸ್ಸು, ಬದ್ಧತೆ ಮಾನಸಿಕ ಸಿದ್ಧತೆ ಮಾತ್ರವೇ ಒಂದಿಷ್ಟು ಬದಲಾವಣೆ ತಂದಿತು.

ಜನಗಣತಿಯಲ್ಲಿ ಕಂಡುಬಂದ ಹೆಣ್ಣು, ಗಂಡು ಶಿಶುಗಳ ಪರಿಣಾಮದಲ್ಲಿನ ವಿಪರೀತಗಳನ್ನು ಗಮನಿಸಿದ ಮತ್ತು ಅದು ಸೃಷ್ಟಿಸಬಹುದಾದ ಸಾಮಾಜಿಕ ಅಸಮತೋಲನವನ್ನು ಗುರುತಿಸಿ ಹಲವಾರು ಸಂಘಟನೆಗಳು ಧ್ವನಿ ಎತ್ತಿದವು. ಅದರ ಪರಿಣಾಮವಾಗಿ ಸಂಸತ್ತಿನಲ್ಲಿ ಇದು ಚರ್ಚಿಸಲ್ಪಟ್ಟು ಪ್ರಸವಪೂರ್ವ ಪರೀಕ್ಷಣ ವಿಧಾನ (ನಿಯಂತ್ರಣ ಮತ್ತು ದುರುಪಯೋಗ ತಡೆ) ಮಸೂದೆ 1991 ಪ್ರಸ್ತಾಪಿತವಾಯಿತು. ಚರ್ಚೆಯ ನಂತರ ನಿರ್ದಿಷ್ಟತೆಗಾಗಿ ಜಂಟಿ ಸಮಿತಿಗೆ ಒಪ್ಪಿಸಲ್ಪಟ್ಟಿತು. 1991 ಡಿಸೆಂಬರ್‌ನಲ್ಲಿ ಆ ಸಮಿತಿಯ ಶಿಫಾರಸುಗಳ ಆಧಾರದಲ್ಲಿ ಸಂಸತ್ತಿನಲ್ಲಿ ಮಸೂದೆಯಾಗಿ ಮಂಡಿಸಲ್ಪಟ್ಟಿತು.


ಇದಕ್ಕೆ ಮುಖ್ಯ ಕಾರಣ ಗರ್ಭದಲ್ಲಿರುವ ಭ್ರೂಣ ಯಾವುದೇ ರೀತಿಯ ಅಂಗವಿಕಲತೆ ಮತ್ತಿತರ ತೊಂದರೆಗಳಿಗೆ ಒಳಗಾಗಿರುವುದೇ ಎಂಬುದನ್ನು ಪರೀಕ್ಷಿಸಲು ಸಾಧ್ಯವಾಗಬಹುದಾಗಿದ್ದ ವೈಜ್ಞಾನಿಕ ಸಾಧನೆಗಳಾದ ಆಮ್ನಿಯೋ ಸಿಂಥೆಸಿಸ್‌ನಂತಹ ವಿಧಾನಗಳ ಮೂಲಕ ಭ್ರೂಣದ ಲಿಂಗ ಪತ್ತೆ ಹಚ್ಚುವ ಕೆಲಸ ಅವ್ಯಾಹತವಾಗಿ ನಡೆದಿದ್ದು ಆಗಲೇ ಗಮನಕ್ಕೆ ಬಂದಿತ್ತು. ಎಲ್ಲೋ ಒಂದು ಕಡೆ ವೈಜ್ಞಾನಿಕ ಮುನ್ನಡೆ ಕೂಡ ಮಹಿಳಾ ವಿರೋಧಿಯಾಗಿ ಪರಿಣಮಿಸಿದ್ದೊಂದು ವಿಪರ್ಯಾಸ.

ಈ ಮಸೂದೆ ನಂತರ 1994ರಲ್ಲಿ ತಿದ್ದುಪಡಿಗೆ ಒಳಗಾಗಿ ಗರ್ಭಪೂರ್ವ ಮತ್ತು ಪ್ರಸವ ಪೂರ್ವ ಲಿಂಗ ಪರೀಕ್ಷಾ ವಿಧಾನ ನಿಷೇಧ ಕಾನೂನು 1994 ಎಂದು ಹೆಸರಿಸಲಾಯಿತು. ಇದಕ್ಕೂ ಒಂದು ನಿರ್ದಿಷ್ಟ ಕಾರಣವಿದೆ. ವಿಜ್ಞಾನ ಮನುಷ್ಯರ ಬದುಕಿಗೆ ಒಳಿತಾಗಲೆಂದು ಮುನ್ನಡೆಯುತ್ತಿರುವಾಗಲೇ ಅದರ ದುರುಪಯೋಗದ ಪ್ರಯತ್ನ ಕೂಡ ತೆರೆಯ ಮರೆಯಲ್ಲಿ ನಡೆಯುತ್ತಲೇ ಇತ್ತು. ಗಂಡು ಮಗುವಿನ ವ್ಯಾಮೋಹ ಆಳವಾಗಿ ಬೇರೂರಿದ ವ್ಯವಸ್ಥೆಯಲ್ಲಿ ಮೋಕ್ಷಪ್ರಾಪ್ತಿಗಾಗಿ ಗಂಡನ್ನೇ ಪಡೆಯುವ ನಿರೀಕ್ಷೆ ಇಂದಿಗೂ ಇದೆ. ಈ ಭಾವನೆಗಳ ದುರ್ಬಳಕೆಗೆ "ಕಲಿತ" ಸಮುದಾಯ ತನ್ನದೇ ಕೊಡುಗೆ ನೀಡುತ್ತ ಬಂದ ಪರಿಣಾಮ, ಆಗುವ ಮಗುವಿನ ಲಿಂಗ ನಿರ್ಧಾರಕ್ಕೂ ವೈಜ್ಞಾನಿಕ ಮುನ್ನಡೆಯನ್ನು ಬಳಸಲು ಪ್ರಾರಂಭವಾಯಿತು. ಎಂದರೆ ತಮಗೆ ಹುಟ್ಟಬೇಕಾದ ಮಗುವಿನ ಲಿಂಗವನ್ನು ಕೂಡುವ ಮೊದಲೇ ನಿರ್ಧರಿಸಿಕೊಳ್ಳುವ ಪ್ರಯತ್ನ. ಇದನ್ನು ನಿಯಂತ್ರಿಸಲೆಂದೇ 1992ರ ಕಾನೂನಿಗೆ 1994ರಲ್ಲಿ ತಿದ್ದುಪಡಿ ತಂದು ಪಿ.ಸಿ. ಆ್ಯಂಡ್ ಪಿ.ಎನ್.ಡಿಟಿ (ಪ್ರೊಹಿಬಿಷನ್ ಆಫ್ ಸೆಕ್ಸ್ ಸೆಲೆಕ್ಷನ್) ಕಾನೂನು 1994 ಜಾರಿಗೆ ಬಂತು ○

ಸ್ತ್ರೀಶಕ್ತಿ ಮಹಿಳಾ ಸ್ವಸಹಾಯ ಗುಂಪುಗಳ ತಾಲ್ಲೂಕು ಒಕ್ಕೂಟ ಉದ್ಘಾಟನೆ

ಮಹಿಳೆಯರು ಸ್ವಾವಲಂಬಿಯಾಗಿ ಬದುಕಬೇಕಾದರೆ ಮಹಿಳಾ ಸಬಲೀಕರಣವಾಗಬೇಕೆಂದು ಸ್ತ್ರೀ ಶಕ್ತಿ ಮಹಿಳಾ ಸ್ವಸಹಾಯ ಗುಂಪುಗಳ ರಾಜ್ಯ ಸಂಚಾಲಕರಾದ ಸಿ.ಕುಮಾರಿಯವರು ಹೇಳಿದರು.

ಹಗರಿಬೊಮ್ಮನಹಳ್ಳಿಯ ತಾಲ್ಲೂಕು ಸರ್ಕಾರಿ ನೌಕರರ ಭವನದಲ್ಲಿ ದಿನಾಂಕ 31.03.2008ರಂದು ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ನಡೆದ ಸ್ತ್ರೀಶಕ್ತಿ ಮಹಿಳಾ ಸ್ವಸಹಾಯ ಗುಂಪುಗಳ ತಾಲ್ಲೂಕು ಒಕ್ಕೂಟದ ಉದ್ಘಾಟನೆ ಮಾಡಿ ಅವರು ಮಾತನಾಡಿದರು.



ಈ ನಿಟ್ಟಿನಲ್ಲಿ ಮಹಿಳೆಯರು ರಚಿಸಿಕೊಂಡ ಸ್ತ್ರೀ ಶಕ್ತಿ ಮಹಿಳಾ ಸ್ವಸಹಾಯ ಗುಂಪುಗಳಿಗೆ ಸರ್ಕಾರ ಸಮರ್ಪಕವಾಗಿ ಸ್ಥಳೀಯ ಗ್ರಾಮ ಪಂಚಾಯ್ತಿ, ನಗರಸಭೆ, ಪುರಸಭೆ ಹಾಗೂ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯ್ತಿಗಳು ಸುತ್ತುನಿಧಿ, ಸಬ್ಸಿಡಿ ಸಾಲ ವಿತರಣೆ ವಿಚಾರದಲ್ಲಿ ಪಾರದರ್ಶಕವಾಗಿಲ್ಲ ಹಾಗೂ ಎಲ್ಲಾ ಗುಂಪುಗಳಿಗೂ ಸಿಗುತ್ತಿಲ್ಲ. ಗುಂಪುಗಳು ತಯಾರಿಸಿದ ಆದಾಯದಾಯಕ ಉತ್ಪನ್ನಗಳಿಗೆ ಸರಿಯಾದ ಮಾರುಕಟ್ಟೆ ವ್ಯವಸ್ಥೆಯೂ ಇಲ್ಲದೆ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ. ಸುಮಾರು ಶೇ.70 ಗುಂಪುಗಳಿಗೆ ಬ್ಯಾಂಕ್ ಸಾಲ ದೊರಕುತ್ತಿಲ್ಲ ಎಂದು ಅವರು ಹೇಳಿದರು.

ಸ್ವತಂತ್ರವಾಗಿರುವ ಸಣ್ಣ [illegible] ಸಂಸ್ಥೆ ಉದ್ದಿಮೆಗಳನ್ನು ಖಾಸಗಿಯವರಿಗೆ ಒಪ್ಪಿಸಿದ ರೀತಿಯಲ್ಲಿಯೇ ಇವುಗಳನ್ನು ಕೂಡ ಖಾಸಗಿಯವರ ತೆಕ್ಕೆಗೆ ನೀಡಿ ಅವರಿಂದ ಹಣ ಸಂಗ್ರಹಿಸುವ ದುಷ್ಟ ಆಲೋಚನೆಗೆ ಕೇಂದ್ರ ಸರ್ಕಾರದ ಹಣಕಾಸು ಸಚಿವಾಲಯ ಮುಂದಾಗಿದೆ ಎಂದು ಹೇಳಿದರು.

ಜನವಾದಿ ಮಹಿಳಾ ಸಂಘದ ರಾಜ್ಯ ಮುಖಂಡರಾದ ಕಾಂ.ಬಿ.ಮಾಳಮ್ಮನವರು ಪ್ರಾಸ್ತಾವಿಕವಾಗಿ ಮಾತನಾಡಿ ಸಣ್ಣ ಉಳಿತಾಯ ಅಭಿವೃದ್ಧಿ ಮತ್ತು ನಿಯಂತ್ರಣ ಮಸೂದೆ 2007 ಎಂಬ ಮಸೂದೆಯನ್ನು ಲೋಕಸಭೆಯ ಮುಂದೆ ಚರ್ಚೆಗೆ ಇಡುವ ಮೂಲಕ ಕೇಂದ್ರ ಸರ್ಕಾರ ಈ ಕೆಲಸಕ್ಕೆ ಕೈ ಹಾಕಿದೆ. ಆದ್ದರಿಂದ ಈ ಮಸೂದೆ ಸ್ತ್ರೀ ಶಕ್ತಿ ಮಹಿಳಾ ಸ್ವಸಹಾಯ ಗುಂಪುಗಳ ಹಾಗೂ ಸಣ್ಣ ಉಳಿತಾಯಕ್ಕೆ ಮರಣ ಶಾಸನದಂತಿದ್ದು ಇದನ್ನು ಕಾಯ್ದೆಯಾಗದಂತೆ ನಾವೆಲ್ಲಾ ತಡೆಹಿಡಿಯಬೇಕಿದೆ [illegible].

[illegible] ಮಹಿಳಾ ಸಂಘಟನೆಯ ಜಿಲ್ಲಾ [illegible].ಜೆ.ಚಂದ್ರಕುಮಾರಿಯವರು [illegible] ನೀತಿಗಳನ್ನು ಅನುಸರಿಸುತ್ತಾ ಶ್ರೀಮಂತರ ಪರವಾಗಿ ಆಡಳಿತ ಮಾಡುತ್ತಿವೆ. ಇಂತಹ ಜನವಿರೋಧಿ ಸರ್ಕಾರಗಳನ್ನು ಕಿತ್ತೊಗೆಯುವಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸಬೇಕಾಗಿದೆ. ಮಹಿಳೆಯರು ಶ್ರಿಮಂತ, ಮತ್ತು ಶ್ರೀಮಂತರ ಪರವಾಗಿರುವ ಪಕ್ಷಗಳ ಯಾವುದೇ ಆಮಿಷ, ಒತ್ತಡಗಳಿಗೊಳಗಾಗದೆ, ಬಡವರು, ಮಹಿಳೆಯರು ರೈತ ಕೂಲಿಕಾರ್ಮಿಕರ ಪರವಾಗಿರುವ ಜಾತ್ಯಾತೀತ ಪಕ್ಷಗಳಿಗೆ ಮತ ಹಾಕಿ, ಜನಪರ ಸರ್ಕಾರವನ್ನು ಆಯ್ಕೆ ಮಾಡಿ ತರಬೇಕೆಂದರು.

ಜನವಾದಿ ಮಹಿಳಾ ಸಂಘಟನೆಯ ತಾಲ್ಲೂಕು ಅದ್ಯಕ್ಷರಾದ ಪಿ.ಚಾಂದ್‌ಬಿ.ಬಿ.ಯಂಕಮ್ಮ, ರಾಜೇಶ್ವರಿ ಮಾತನಾಡಿದರು.

ಈ ಸಂದರ್ಭಧಲ್ಲಿ 31 ಜನರನ್ನೊಳಗೊಂಡ ಸ್ತ್ರೀಶಕ್ತಿ ಮಹಿಳಾ ಸ್ವಸಹಾಯ ಗುಂಪುಗಳ ತಾಲ್ಲೂಕು ಸಂಚಾಲನ ಸಮಿತಿ ರಚಿಸಲಾಯಿತು.

ತಾಲ್ಲೂಕು ಸಂಚಾಲನ ಸಮಿತಿ

ಸಂಚಾಲಕರು : ಜಿ.ಸರೋಜ

ಸಹ ಸಂಚಾಲಕರು : ಬಿ.ಲಕ್ಷ್ಮಿ, ಜೆ.ಎಂ.ಪಾರ್ವತಿ ಹೆಚ್ ರಾಜೇಶ್ವರಿ


ಇನ್ನುಳಿದಂತೆ ಸಮಿತಿ ಸದಸ್ಯರಿದ್ದಾರೆ

ಚಂಡಮಾರುತಗಳು ಮತ್ತು ವಿಪತ್ತು ನಿರ್ವಹಣಾ ವ್ಯವಸ್ಥೆ

ಹವಾಮಾನದಿಂದಾಗುವ ನೈಸರ್ಗಿಕ ವಿಪತ್ತುಗಳಲ್ಲಿ ಸಾಮಾನ್ಯವಾಗಿ ವಿನಾಶ ಮತ್ತು ಬೇಗುದಿಗಳಿಗೆ ಕಾರಣವಾಗುವವೆಂದರೆ ಬಿರುಗಾಳಿ, ಚಂಡಮಾರುತ, ತೀವ್ರ ಬಿರುಗಾಳಿ, ಪ್ರವಾಹ, ಬರ, ಬಿಸಿ ಅಲೆ ಮತ್ತು ಥಂಡಿ ಅಲೆಗಳು, ಬೆಂಕಿ ಅನಾಹುತ, ಮಿಡತೆಗಳ ಹಾವಳಿ, ಇತ್ಯಾದಿ. ಅನೇಕ ನೈಸರ್ಗಿಕ ಪಿಡುಗುಗಳು ಮನುಷ್ಯನ ಕೈಗಾರಿಕಾ ಚಟುವಟಿಕೆಗಳಿಂದಲೇ ಉಂಟಾಗುತ್ತವಲ್ಲದೆ ಅಂತಹ ಪಿಡುಗುಗಳನ್ನು ಪರಿಹರಿಸಲು ತಕ್ಷಣವೇ ಸಾಧ್ಯವಿಲ್ಲವಾದರೂ ಅವುಗಳ ಆಘಾತವನ್ನು ತಗ್ಗಿಸಲು ಸಾಧ್ಯವಿದೆ. ಹಾಗೆ ಶಮನಗೊಳಿಸಲು ಸರ್ಕಾರಗಳು ಕ್ರಮಕೈಗೊಳ್ಳದ್ದರಿಂದಲೇ ಅಪಾರ ಸಾವು-ನೋವುಗಳು, ಆಸ್ತಿ-ಪಾಸ್ತಿ ನಷ್ಟ ಸಂಭವಿಸುವುದು.



ನಮ್ಮ ದೇಶದಲ್ಲಿ ಅತಿ ಹೆಚ್ಚಿಗೆ ಹಾನಿ ಉಂಟು ಮಾಡುತ್ತಿರುವ ನೈಸರ್ಗಿಕ ಪಿಡುಗುಗಳಲ್ಲಿ ಚಂಡಮಾರುತವೂ ಕೂಡ ಒಂದು. ಚಂಡಮಾರುತಗಳು ಸಾಮಾನ್ಯವಾಗಿ ಹಿಂದೂ ಮಹಾ ಸಾಗರದಲ್ಲಿ ಹುಟ್ಟುವ ಉಷ್ಣವಲಯದ ಸುಂಟರಗಾಳಿಗಳು. ಬಂಗಾಳಕೊಲ್ಲಿಯ ಚಂಡಮಾರುತವು ಪಶ್ಚಿಮಾಭಿಮುಖವಾಗಿ ಮತ್ತು



ವಾಯುವ್ಯಾಭಿಮುಖವಾಗಿ ಪೂರ್ವತೀರವನ್ನು ತಾಕಿದರೆ, ಅರಬ್ಬೀ ಸಮುದ್ರದ ಬಿರುಗಾಳಿಯು ಪಶ್ಚಿಮಾಭಿ ಮುಖವಾಗಿ ಇಲ್ಲವೇ ವಾಯುವ್ಯಾಭಿ ಮುಖವಾಗಿ ಸಮುದ್ರ ದಾಟಿ ಅರೇಬಿಯನ್ ತೀರ ತಲುಪುವುದು. ಬಂಗಾಳಕೊಲ್ಲಿಯಲ್ಲಿ ಅರಬ್ಬೀ ಸಮುದ್ರಕ್ಕಿಂತ ಹೆಚ್ಚು ಬಿರುಗಾಳಿ ಬರುವುದಲ್ಲದೆ ಮೇ, ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಹೆಚ್ಚೆಚ್ಚು ಕಾಣಬರುತ್ತದೆ. ಪ್ರತಿ ವರ್ಷವೂ 5-6 ಬಿರುಗಾಳಿಗಳು ಉಂಟಾಗುವುವು. ಆ ಪೈಕಿ ಕನಿಷ್ಟ ಮೂರು ತೀವ್ರ ಚಂಡಮಾರುತಗಳಾಗಿ ರಭಸವಾದ ಮಳೆ, ತೀವ್ರವಾದ ಬಿರುಗಾಳಿ (ಘಂಟೆಗೆ ನಲವತ್ತು ಕಿಲೋಮೀಟರ್ ಗಿಂತಲೂ ಹೆಚ್ಚಿನ ವೇಗದಲ್ಲಿ ಬೀಸುವ)ಗಳಾಗಿ ಸಮುದ್ರ ತೀರ ಪ್ರದೇಶಕ್ಕೆ ಹಾನಿ ಮಾಡುತ್ತವೆ. ತೀರವನ್ನು ಬಿರುಗಾಳಿ ಪ್ರವೇಶಿಸಿದಾಗ ಉಬ್ಬರದಲೆಗಳು 50ಅಡಿ ಎತ್ತರ ತಲುಪಬಲ್ಲವು. ದೂಡಲ್ಪಟ್ಟ ನೀರಿನ ಅಲೆ ಕೆಲವೊಮ್ಮೆ ಘಂಟೆಗೆ 60 ಕಿ.ಮೀ ಗೂ ಹೆಚ್ಚಿನ ವೇಗದಲ್ಲಿ ತೀರವನ್ನು ತಾಕುವುದು. ಅಲ್ಲದೆ ಘಂಟೆಗೆ ಸುಮಾರು 225 ಕಿಲೋಮೀಟರ್ ವೇಗದಲ್ಲಿ ಬೀಸುವ ಬಿರುಗಾಳಿಗೆ 'ಸೂಪರ್ ಸೈಕ್ಲೋನ್' ಎಂದು ಕರೆಯಲಾಗುತ್ತದೆ. ಕೇಂದ್ರದಲ್ಲಿ ನೀರು ಒಗ್ಗೂಡುವುದು. ಬಿರುಗಾಳಿಯ ಮುನ್ನುಗ್ಗುವಿಕೆ ಮತ್ತು ಆಕಾಶಕಾಯಗಳಿಂದಾದ ಉಬ್ಬರ ಒಟ್ಟಾದಾಗ ಅಪಾಯ ಇನ್ನೂ ಹೆಚ್ಚು. ಒಳನಾಡಿಗೆ ಸಾಗರ ಜಲ ಪ್ರವೇಶಿಸಿದಾಗ ವ್ಯಾಪಕವಾಗಿ ತಗ್ಗು ಪ್ರದೇಶಗಳು ಕೊಚ್ಚಿ ಹೋಗುತ್ತವೆ ಅಥವಾ ಮುಳುಗಿಹೋಗುತ್ತವೆ.

ವಿಪತ್ತು ನಿರ್ವಹಣೆ

ಬಿರುಗಾಳಿಗಳು ನಿಯತವಾಗಿ ಉಂಟಾಗುವ ರಾಜ್ಯಗಳ ತೀರಪ್ರದೇಶದಲ್ಲಿ ಅರಣ್ಯ ನಿರ್ಮಾಣ ಕೈಗೊಳ್ಳುವುದು, ಜಲಾಶಯ, ಕಾಲುವೆ, ಒಡ್ಡು, ಬಿರುಗಾಳಿ ತಡೆಯುವ ಸೂರು, ಸಾಕಷ್ಟು ಚರಂಡಿ ವ್ಯವಸ್ಥೆ, ಶೀಘ್ರವಾಗಿ ಸ್ಥಳಾಂತರಗೊಳ್ಳಲು ವಿಶಾಲವಾದ ರಸ್ತೆ ಹೆದ್ದಾರಿಗಳು ಇತ್ಯಾದಿ ದೀರ್ಘಾವಧಿ, ಶಾಶ್ವತ ರಕ್ಷಣಾ ಕ್ರಮಗಳ ಅಗತ್ಯವಿದೆ. ಬಿರುಗಾಳಿಯ ಪರಿಣಾಮ ಗಳನ್ನು ಊಹಿಸಿ 'ಕಾರ್ಯಾಚರಣೆಯ ಶಿಷ್ಟಕ್ರಮಗಳು' ಅರ್ಥಾತ್ ಸ್ಟಾಂಡರ್ಡ್ ಆಪರೇಟಿಂಗ್ ಪ್ರೋಸೀಜರ್ ಮತ್ತು ಆಪತ್ಕಾಲ ಯೋಜನೆಗಳೆಲ್ಲವನ್ನು ನಿರ್ವಹಿಸಬೇಕಾಗುವುದು. ಪಿಡುಗು ನಿರ್ವಹಣೆಯಲ್ಲಿ ಸ್ಥಳಾಂತರ, ರಕ್ಷಣೆ, ಪರಿಹಾರ, ಸಾಗಣೆ, ವಸತಿ, ಪ್ರಥಮಚಿಕಿತ್ಸೆ, ಆಹಾರ, ಕುಡಿಯುವ ನೀರು ಮತ್ತು ಮಾರ್ಗದರ್ಶನ ಪೂರೈಕೆಯೆಲ್ಲವೂ ಒಳಗೊಂಡಿವೆ. ಪಿಡುಗಿನ ನಂತರದ ಕ್ರಮಗಳು ಪುನರ್ವಸತಿ, ವೈದ್ಯಕೀಯ ನೆರವು, ಸಾಂಕ್ರಾಮಿಕ ರೋಗಗಳ ತಡೆಗಟ್ಟುವಿಕೆ ಮತ್ತು ಕಸಕಡ್ಡಿಯನ್ನು ವಿಲೇ ಮಾಡುವುದು ಇತ್ಯಾದಿಗಳಾಗಿವೆ.

ಬಿರುಗಾಳಿಯ ಮುನ್ಸೂಚನಾ ವ್ಯವಸ್ಥೆ

ಜಗತ್ತಿನ ಅತ್ಯಂತ ಪ್ರಾಚೀನವಾದ ಮುನ್ಸೂಚಕ (ಬಿರುಗಾಳಿ)ವು ಭಾರತದಲ್ಲಿದೆ. 1865ರಷ್ಟು ಮೊದಲೇ ಕಲ್ಕತ್ತೆಯ ಬಂದರಿನಲ್ಲಿ ಬಿರುಗಾಳಿ ಮುನ್ನೆಚ್ಚರಿಕೆ ವ್ಯವಸ್ಥೆಯನ್ನು ಸ್ಥಾಪಿಸಲಾಯಿತು. ಸಾಗರದಲ್ಲಾಗುವ ಯಾವುದೇ ಬಿರುಗಾಳಿಯೂ ಉಪಗ್ರಹ ಚಿತ್ರಣದ ಕಣ್ಣು ತಪ್ಪಿಸಲಾರದು; ಇದರ ಮೇಲೆ ಸದಾ ಕಾವಲು ಇರುತ್ತದೆ. ಉಪಗ್ರಹಗಳಿಂದ ಬಿರುಗಾಳಿ ಭೂಪ್ರದೇಶವನ್ನು ತಲುಪುವ ಸ್ಥಾನ ಮತ್ತು ವೇಳೆಯನ್ನು ಖಚಿತವಾಗಿ ಬೆರಳು ಮಾಡಿ ತೋರಿಸುವುದು ಎಲ್ಲ ಸಂದರ್ಭದಲ್ಲೂ ಸಾಧ್ಯವಾಗದು. ತೀರವನ್ನು ದಾಟುವ ಕೊಂಚ ಮೊದಲು ಬಿರುಗಾಳಿಗಳು ಅಡ್ಡಾದಿಡ್ಡಿ ವರ್ತಿಸುವುವು. ಇದನ್ನು ರಾಡಾರ್ ಪರದೆಯ ಮೇಲೆ ವೀಕ್ಷಿಸಲು ಸಾಧ್ಯ. ಆದರೆ ಅತ್ಯಾಧುನಿಕ ಬಿರುಗಾಳಿ ಮುನ್ಸೂಚನಾ ವ್ಯವಸ್ಥೆಯನ್ನು ಇನ್ನೂ ಬಲಪಡಿಸದ ಕಾರಣ ಹಾಗೂ ಮುನ್ಸೂಚನೆಯಂತೆ ಚಂಡಮಾರುತ ಸಮಯದಲ್ಲಿ ಜನರನ್ನು ಸ್ಥಳಾಂತರ ಗೊಳಿಸಲು ಕ್ರಮವಹಿಸದ ಕಾರಣ ಇತ್ತೀಚೆಗೆ



ಒರಿಸ್ಸಾದಲ್ಲಿ ಘಟಿಸಿದಂತೆ ಹೆಚ್ಚಿನ ನಷ್ಟ, ಸಾವು ನೋವುಗಳು ಉಂಟಾಗುತ್ತಿವೆ. ಅಲ್ಲದೆ, ಹೆಚ್ಚಾಗಿ ಕಪ್ಪುಜನಾಂಗ ವಾಸಿಸುವ ನ್ಯೂ ಆರ್ಲಾನ್ಸ್ ನಗರದಲ್ಲಿ ಅಮೇರಿಕಾ ಸರ್ಕಾರವು ಬಿರುಗಾಳಿಯನ್ನು ತಡೆಗಟ್ಟಲು ಮುಂಚಿತವಾಗಿ ಯಾವುದೇ ಒಡ್ಡುಗಳನ್ನು ತೀರಪ್ರದೇಶಗಳಲ್ಲಿ ನಿರ್ಮಿಸದ್ದರಿಂದ ಕಳೆದ ವರ್ಷ ಅಪಾರ ಸಾವುನೋವುಗಳುಂಟಾಗಿದ್ದವು.

ಕೃಪೆ: ಹವಾಮಾನ ರೀತಿ-ನೀತಿ

ನಕಲಿ ಔಷಧಿಗಳನ್ನು ತಡೆಹಿಡಿಯಲು ಮಸೂದೆಯೋ? ಅಥವಾ ಬಹುರಾಷ್ಟ್ರೀಯ ಕಂಪನಿಗಳು ಹಾಕಿದ ಗಾಳವೋ?

ಭಾರತದಲ್ಲಿ ಔಷಧಿಗಳ ವಿಷಯದಲ್ಲಿ ಪರಿಸ್ಥಿತಿ 90ರ ದಶಕದವರೆಗೆ ಖಂಡಿತ ಈಗಿನಂತೆ ಇರಲಿಲ್ಲ. ಅಂದರೆ ಭಾರತದಲ್ಲಿ ಬಹುತೇಕ ಅಗತ್ಯ ಔಷಧಿಗಳು ತಯಾರಾಗುತ್ತಿದ್ದವು. ಔಷಧಿ ಬೆಲೆಗಳು ಹಿಡಿತದಲ್ಲಿದ್ದವು ಹಾಗೂ ಭಾರತೀಯ ಕಂಪನಿಗಳು ಬಹುರಾಷ್ಟ್ರೀಯ ಕಂಪನಿಗಳ ಪೈಪೋಟಿ ಎದುರಿಸಲು ಸಾಧ್ಯವಾಗಿ, ಬೇರೆ ದೇಶಗಳಿಗೆ ಔಷಧಿಗಳನ್ನು ರಫ್ತು ಮಾಡುವಂತಾಗಿತ್ತು. ಭಾರತ ಔಷಧಿ ಕ್ಷೇತ್ರದಲ್ಲಿ ಹೆಚ್ಚಿನ ವಿಷಯಗಳಲ್ಲಿ ಸ್ವಾವಲಂಬನೆ ಸಾಧಿಸಿತ್ತು. 2003ರಲ್ಲಿ ಭಾರತದಲ್ಲಿ ನಕಲೀ ಔಷಧಿಗಳ ಹಾವಳಿ ವರದಿಯಾಗಿತ್ತು. ಆಗ ಸರ್ಕಾರ ಔಷಧಿ ನಿಯಂತ್ರಣ ವಿಷಯಗಳ ಅಧ್ಯಯನ ಮಾಡಿ, ನಕಲೀ ಔಷಧಿಗಳನ್ನು ಹೇಗೆ ತಡೆಗಟ್ಟಬಹುದಾಗಿ ತಿಳಿಸಲು ಒಂದು ಸಮಿತಿಯನ್ನು ರಚಿಸಿತು. ಅದರ ಅಧ್ಯಕ್ಷರಾಗಿ ಸಿ.ಎಸ್.ಐ. ಆರ್. ನ ನಿರ್ದೇಶಕರಾದ ಡಾ:ಆರ್.ಎ. ಮಾಶಲ್‌ಕರ್ ಅವರನ್ನು ನೇಮಿಸಲಾಗಿತ್ತು. ಈ ಸಮಿತಿ ಕೆಳಗಿನವುಗಳನ್ನು ಸೂಚಿಸಿ ಸರ್ಕಾರಕ್ಕೆ ವರದಿ ನೀಡಿತ್ತು.

-ಕೇಂದ್ರೀಯ ಔಷಧಿ ಪ್ರಾಧಿಕಾರ ರಚನೆಯಾಗಿ ನೇರವಾಗಿ ಆರೋಗ್ಯ ಹಾಗೂ ಕುಟುಂಬ ಕಲ್ಯಾಣದ ಮಂತ್ರಾಲಯದ ನಿರ್ದೇಶನ ಮಾಡುವುದು.

- ಕೇಂದ್ರೀಯ ಔಷಧಿ ಪರವಾನಗಿ ಕೆಲಸ (ಡ್ರಗ್ ಲೈಸೆನ್ಸ್) ಪದ್ಧತಿ ಜಾರಿಗೆ ತರುವುದು.

ಈ ಬದಲಾವಣೆಗಳನ್ನು ತರಲು, ಸರ್ಕಾರ ಔಷಧಿ ಹಾಗೂ ಸೌಂದರ್ಯವರ್ಧಕ ಕಾನೂನಿಗೆ ಕೆಲವು ತಿದ್ದುಪಡಿ ತರಬೇಕಾಗುತ್ತದೆ. ಈ ತಿದ್ದುಪಡಿ ತರಲು ಸರ್ಕಾರ ಸಂಸತ್ತಿನಲ್ಲಿ ಒಂದು ಮಸೂದೆಯನ್ನು ಮಂಡಿಸಲು ತಯಾರಾಗಿದೆ. ಈ ಮಸೂದೆ ಜಾರಿಗೆ ಬಂದರೆ ಕಂಡು ಬರುವ ಬದಲಾವಣೆಗಳು ಹೀಗಿವೆ:

1. ಈ ಪ್ರಾಧಿಕಾರ ಕಲಂ(ಸಿ), ಸೆಕ್ಷನ್ 10ರ ನಿಯಮದಂತೆ ಔಷಧಿ ಪರವಾನಗಿ ನೀಡುತ್ತದೆ.
2. ಯಾವುದೇ ಪರವಾನಗಿಯನ್ನು ತಡೆಹಿಡಿಯಬಹುದಾಗಿದೆ.
3. ಔಷಧಿ ಹಾಗೂ ಸೌಂದರ್ಯವರ್ಧಕಗಳ ಪ್ರಯೋಗಕ್ಕೆ ಪರವಾನಗಿ ನೀಡುತ್ತದೆ.
4. ಔಷಧಿ ಹಾಗೂ ಸೌಂದರ್ಯವರ್ಧಕಗಳ ತಯಾರಿಕೆ, ಮಾರಾಟವನ್ನು ನಿಯಂತ್ರಿಸುತ್ತದೆ.
5. ಔಷಧಿ ಹಾಗೂ ಸೌಂದರ್ಯವರ್ಧಕಗಳ ಆಮದನ್ನು ನಿಯಂತ್ರಿಸುತ್ತದೆ.
6. ಭಾರತದ ಔಷಧಿ ನಿಯಂತ್ರಕರನ್ನು ಹಾಗೂ ಇತರೇ ಸಿಬ್ಬಂದಿಗಳನ್ನು ನೇಮಿಸುತ್ತದೆ; ಹಾಗೂ ಅವರ ಮೇಲ್ವಿಚಾರಣೆಯನ್ನು ಮಾಡುತ್ತದೆ.



ಡಾ. ಪ್ರಕಾಶ್ ಸಿ. ರಾವ್

ಈ ಮಸೂದೆ ಜಾರಿಗೆ ಬಂದರೆ ಔಷಧಿ ಕ್ಷೇತ್ರದಲ್ಲಿ ಅನೇಕ ಅಹಿತಕರ ಬದಲಾವಣೆಗಳಾಗುತ್ತವೆ. ಅದೇನೆಂದರೆ ಈಗ ಎಲ್ಲ ರಾಜ್ಯಗಳಲ್ಲೂ ಔಷಧಿ ನಿಯಂತ್ರಕರಿದ್ದಾರೆ. ಅವರೇ ಈಗ ಔಷಧಿ ಹಾಗೂ ಸೌಂದರ್ಯವರ್ಧಕಗಳನ್ನು ತಯಾರಿಸಲು ಪರವಾನಿಗಿ ನೀಡುತ್ತಿದ್ದಾರೆ. ಆದರೆ ಈ ಮಸೂದೆ ಜಾರಿಗೆ ಬಂದರೆ ರಾಜ್ಯ ನಿಯಂತ್ರಕರ ಬದಲು ಕೇಂದ್ರ ಪ್ರಾಧಿಕಾರ ಔಷಧಿ ಪರವಾನಗೀ ನೀಡಬೇಕಾಗುತ್ತದೆ. ಈಗಲೇ ರಾಜ್ಯ ನಿಯಂತ್ರಣಾಧಿಕಾರಿಗಳಿಗೆ ಕೆಲಸದ ಒತ್ತಡದಿಂದ ಸಮಸ್ಯೆಗಳಾಗುತ್ತಿದ್ದು, ದೇಶದ ಎಲ್ಲ ಔಷಧಿ ನಿಯಂತ್ರಕರ ಕೆಲಸ ಕೇಂದ್ರ ಪ್ರಾಧಿಕಾರಕ್ಕೆ ವರ್ಗಾವಣೆಯಾದರೆ ಅವರಿಗೆ ಔಷಧಿ ಪರವಾನಗಿ ಕೆಲಸದಲ್ಲಿ ಸಮಸ್ಯೆಯಾಗುವುದು ಖಂಡಿತ. ಇದರಿಂದಾಗಿ ಔಷಧಿ ಕಂಪನಿಗಳಿಗೆ ಔಷಧಿ ಪರವಾನಗಿ ಪಡೆಯಲು ಸಮಸ್ಯೆಯಾಗುತ್ತದೆ ಹಾಗೂ ಉದ್ಯಮ ಮುಚ್ಚುವ ಸಂಭವವೂ ಹೆಚ್ಚಾಗುತ್ತದೆ. ಔಷಧಿ ಕಂಪನಿಗಳಲ್ಲಿ ದುಡಿಯುತ್ತಿರುವ ಸಾವಿರಾರು ಕೆಲಸಗಾರರು ಕೆಲಸ ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ.

ಇಲ್ಲಿಯವರೆಗೆ ರಾಷ್ಟ್ರೀಯ ಆರೋಗ್ಯ ನೀತಿಯಡಿ ರಾಜ್ಯ ಸರ್ಕಾರ, ಸ್ಥಳೀಯ ಕಂಪನಿಗಳಿಂದ ಜನೆಂತ್ ಔಷಧಿಗಳನ್ನು ಪಡೆಯುತ್ತಿದ್ದೇವೆ. ಆದರೆ ಹೊಸ ನೀತಿ ಬಂದರೆ, ಕೇಂದ್ರದಿಂದ ಔಷಧಿಗಳನ್ನು ಪಡೆಯಲು ಸಮಸ್ಯೆಯಾಗುತ್ತದೆ. ಇದರ ಪರಿಣಾಮ ಆರೋಗ್ಯ ಕಾರ್ಯಕ್ರಮಗಳ ಮೇಲೆ ಬೀಳುತ್ತದೆ. ಆಗ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಔಷಧಿಗಳನ್ನು ಸರ್ಕಾರಕ್ಕೆ ಮಾರಾಟ ಮಾಡಲು ಮುಂದೆ ಬರುತ್ತಿವೆ. ಈ ಕಾರಣದಿಂದಾಗಿ ಬಹುರಾಷ್ಟ್ರೀಯ ಕಂಪನಿಗಳು ಈ ಮಸೂದೆಯನ್ನು ಬೆಂಬಲಿಸುತ್ತಿವೆ.

ಕೇಂದ್ರೀಯ ಪ್ರಾಧಿಕಾರ

ಈ ಮಸೂದೆಯಲ್ಲಿ ಕೇಂದ್ರೀಯ ಔಷಧಿ ಪ್ರಾಧಿಕಾರ ರಚಿಸುವ ಪ್ರಸ್ತಾವನೆ ಇದೆ. ಈ ಪ್ರಾಧಿಕಾರಕ್ಕೆ ಒಬ್ಬ ಅಧ್ಯಕ್ಷ ಐದು ಸದಸ್ಯರು ಇರುತ್ತಾರೆ. ಇವರಲ್ಲಿ ಮೂರು ಜನರನ್ನು ಕೇಂದ್ರ ಸರ್ಕಾರ ನೇಮಿಸುತ್ತದೆ. ನಂತರ ವಿಶೇಷ ಜ್ಞಾನ ಹಾಗೂ 15 ವರ್ಷ ಔಷಧಿ ಉದ್ಯಮದಲ್ಲಿ ಅನುಭವವಿದ್ದ ವ್ಯಕ್ತಿಯನ್ನು ಗುರುತಿಸಲಾಗುವುದು. ಈ ಅಧ್ಯಕ್ಷ ಸ್ಥಾನಕ್ಕೆ ಬಹುರಾಷ್ಟ್ರೀಯ ಕಂಪನಿಯ ವ್ಯಕ್ತಿ ನೇಮಕಗೊಳ್ಳುವ ಸಾಧ್ಯತೆ ಹೆಚ್ಚು. ಇವರ ಕೆಳಗೆ ಔಷಧಿ ನಿಯಂತ್ರಣಾಧಿಕಾರಿ ಇರುವುದರಿಂದ ಬಹುರಾಷ್ಟ್ರೀಯ ಕಂಪನಿಯ ಪರವಾಗಿ ಕೆಲಸ ಮಾಡುವ ಸಾಧ್ಯತೆ ಇರುತ್ತದೆ.

ಕಳಂಕಿತ ಮಾಶಲ್‌ಕರ್

ಈ ಮಸೂದೆಗೆ ಆಧಾರ ಡಾ: ಮಾಶಲ್‌ಕರ್ ರವರ ವರದಿ. ಹಿಂದೆ ಅವರನ್ನು ಸರ್ಕಾರದ ಪೇಟೆಂಟ್ ಸಮಿತಿಯ ಮುಖ್ಯಸ್ಥನಾಗಿ ನೇಮಕ ಮಾಡಲಾಗಿತ್ತು. ಅಂತರರಾಷ್ಟ್ರೀಯಮಟ್ಟದಲ್ಲಿ ಪೇಟೆಂಟ್ ಚರ್ಚೆ ನಡೆದಾಗ ಅವರು ಭಾರತದ ಪರವಾಗಿ ಮಾತನಾಡಿ ದೇಶದ ಹಿತಾಸಕ್ತಿ ಕಾಪಾಡಬೇಕಿತ್ತು. ಅವರು ಮಾಡಿದ ವರದಿ, ಬಹುರಾಷ್ಟ್ರೀಯ ಔಷಧಿ ಕಂಪನಿಯ ವರದಿಯ ಆಧಾರದ ಮೇಲಿತ್ತು. ಅವರ ವರದಿಯ ಮೇಲೆ ಅನೇಕ ವಿರೋಧಗಳು ವ್ಯಕ್ತವಾದವು ಹಾಗೂ ಅವರು ತಮ್ಮ ವರದಿಯನ್ನು ಹಿಂತೆಗೆದುಕೊಂಡಿದ್ದರು. ಈ ವಿಷಯದಲ್ಲಿ ಅವರಿಗೆ ವೈಯಕ್ತಿಕವಾಗಿ ಹಿನ್ನೆಡೆಯಾಗಿತ್ತು. ಈಗ ಔಷಧಿ ನಿಯಂತ್ರಣದ ಸುಧಾರಣೆ ಬಗ್ಗೆ ವರದಿ ಕೇಳಿದಾಗಲೂ ಅವರು ಬಹುರಾಷ್ಟ್ರೀಯ ಕಂಪನಿಗೆ ಸಹಾಯಕವಾಗುವಂತಹ ನೀತಿಯನ್ನು ಪಟ್ಟಿ ಮಾಡಿದ್ದಾರೆ. ಈ ನೀತಿ ಆಧಾರಿತ ಮಸೂದೆಯೂ ಕಳಂಕ ರಹಿತವಾಗಿರಲು ಸಾಧ್ಯವಿಲ್ಲ.

ನಕಲಿ ಔಷಧಿಗಳ ಸಮಸ್ಯೆ ಭಾರತ ಎದುರಿಸುತ್ತಿರುವ ಗಂಭೀರ ಸಮಸ್ಯೆ. ಈಗ ನಮ್ಮಲ್ಲಿರುವ ಎಲ್ಲ ಕಾನೂನಿನ ಸೌಕರ್ಯಗಳಿದ್ದಾಗ್ಯೂ ಸರ್ಕಾರಕ್ಕೆ ನಕಲಿ ಔಷಧಿಗಳ ಸಮಸ್ಯೆಯನ್ನು ಸರಿಪಡಿಸಲಾಗಿಲ್ಲ. ಈಗ ಈ ಮಸೂದೆಯನ್ನು ತರುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಆದರೆ ಡಾ: ಮಾಶಾಲ್‌ಕರ್ ರವರ ವರದಿಯಲ್ಲಿ ಹಾಗೂ ಮಸೂದೆಯಲ್ಲಿ ನಕಲೀ ಔಷಧಿಗಳನ್ನು ನಿರ್ಮೂಲ ಮಾಡುವ ಯಾವ ಕ್ರಮಗಳನ್ನು ಸೂಚಿಸಲಾಗಿಲ್ಲ. ಡಾ: ಮಾಶಾಲ್‌ಕರ್ ವರದಿಯ ಆಧಾರ ಮೇಲೆ ತರಾತುರಿಯಲ್ಲಿ ತಯಾರಿಸಲಾಗಿದೆ. ಮಸೂದೆ ಕಾಯ್ದೆಯಾದಲ್ಲಿ ಔಷಧಿ ಪರಿಸ್ಥಿತಿ ಇನ್ನೂ ಹದಗೆಡುವ ಸಾಧ್ಯತೆ ಇರುತ್ತದೆ.

ಜಗದಗಲ

ಶರತ್‌ಚಂದ್ರ

ನೇಪಾಳ – ಮಾವೋವಾದಿಗಳಿಗೆ 'ಪ್ರಚಂಡ' ಜಯ

ನೇಪಾಳದ ಬಹುಪಾಲು ಸಂವೈಧಾನಿಕ ಸಭೆಗೆ ಚುನಾವಣೆ ಫಲಿತಾಂಶ ಬಂದಿದ್ದು, ಮಾವೋವಾದಿಗಳು 'ಪ್ರಚಂಡ' ಜಯಗಳಿಸಿ ಬಹುಮತ ಪಡೆಯುವ ಹಾದಿಯಲ್ಲಿದ್ದಾರೆ. ನೇರ ಆಯ್ಕೆಯ 240 ಸೀಟುಗಳಲ್ಲಿ ಘೋಷಿತ 225 ಫಲಿತಾಂಶಗಳಲ್ಲಿ 119 ಸ್ಥಾನಗಳಿಸಿದ್ದಾರೆ. ಕಳೆದ ಪಾರ್ಲಿಮೆಂಟಿನಲ್ಲಿ ಪ್ರಬಲ ಪಕ್ಷಗಳಾಗಿದ್ದ ನೇಪಾಳೀ ಕಾ'ಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷ (ಯು.ಎಂ.ಎಲ್.) 2 ಮತ್ತು 3 ನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದಾರೆ. ಈ ಎರಡೂ ಪಕ್ಷಗಳಿಗೆ ತಲಾ 40 ಸೀಟುಗಳು ಬರಬಹುದು. ಮಾಧೇಶಿ ಜನಾಧಿಕಾರ ಫೋರಂ ನಂತಹ ಮಾಧೇಶಿ ಪಕ್ಷಗಳು ನಿರೀಕ್ಷೆಗಿಂತ ಹೆಚ್ಚಿನ ಸೀಟು ಗಳಿಸಿವೆ. ಈ ಪಕ್ಷಗಳೂ ಸುಮಾರು 40 ಸೀಟು ಪಡೆಯುವ ನಿರೀಕ್ಷೆ ಇದೆ. ಹಲವು ದಶಕಗಳ ಅಧಿಕಾರ ಹಿಡಿದಿದ್ದ ರಾಜ ಪ್ರಭುತ್ವವನ್ನು ಸಮರ್ಥಿಸುವ ಎಲ್ಲಾ ಪಕ್ಷಗಳು ಹೇಳ ಹೆಸರಿಲ್ಲದಂತೆ ನೆಲಕಚ್ಚಿರುವುದು ಫಲಿತಾಂಶದ ಇನ್ನೊಂದು ವಿಶೇಷ. ಅನುಪಾತ ಪದ್ಧತಿಯ ಪ್ರಕಾರ ಚುನಾಯಿತ ಎಲ್ಲಾ ಸೀಟುಗಳ ಫಲಿತಾಂಶದ ನಂತರ, ಮಾವೋವಾದಿಗಳಿಗೆ ಸಂವೈಧಾನಿಕ ಸಭೆಯಲ್ಲಿ ಬಹುಮತ ಬರದಿರಬಹುದು. ಆದರೆ ಮಾವೋವಾದಿಗಳು ಅತಿ ದೊಡ್ಡ ಶಕ್ತಿಯಾಗಿ ಹೊಮ್ಮಿದ್ದಾರೆ. ಸಂವಿಧಾನ ರಚನೆಯ ಪ್ರಮುಖ ವಿಷಯಗಳಲ್ಲಿ ನಿರ್ಣಾಯಕ ಧ್ವನಿ ಅವರದ್ದು ಆಗಿರುತ್ತದೆ ಎಂಬ ಬಗ್ಗೆ ಸಂಶಯವಿಲ್ಲ. ತಾತ್ಕಾಲಿಕ ಸರ್ಕಾರದ ನಾಯಕತ್ವ ಮತ್ತು ಪ್ರಧಾನಿ ಪಟ್ಟ ಸಹ ಬಹು ಮಟ್ಟಿಗೆ ಅವರ ಪಾಲಿಗೆ ಸಿಗುತ್ತದೆ.

ಫಲಿತಾಂಶದ ಪರಿಣಾಗಳು ಹಲವು. ಈಗ




ಚುನಾಯಿತ ಸಂವೈಧಾನಿಕ ಸಭೆ ನೇಪಾಳದ ಎಲ್ಲಾ ವೈವಿಧ್ಯತೆ ಪ್ರತಿನಿಧಿಸುವಂತಹುದು. ನೇಪಾಳದಲ್ಲಿ ಪ್ರಜಾಪ್ರಭುತ್ವ ಮತ್ತು ಮೂಲಭೂತ ಬದಲಾವಣೆ ತರುವ ಜನತೆಯ ರಾಜಕೀಯ ಇಚ್ಛಾಶಕ್ತಿ ಗೆದ್ದಿದೆ. ರಾಜಸತ್ತೆ ಮುಗಿದು ನೇಪಾಳ ಒಂದು ರಿಪಬ್ಲಿಕ್ ಆಗುವುದು ಖಚಿತವಾಗಿದೆ. ಮಾವೋವಾದಿಗಳು ದೂರದ ಮೂರನೇ ಸ್ಥಾನದಲ್ಲಿರುತ್ತಾರೆ ಎಂಬ ಭಾರತ' ಸರ್ಕಾರ ಮತ್ತು ಹಲವು 'ಪರಿಣತರ' ಲೆಕ್ಕಾಚಾರ ತಲೆಕೆಳಗಾಗಿದೆ. ಮಾವೋವಾದಿಗಳ ವಿಜಯ ಮತ್ತು ಅವರ ನಾಯಕತ್ವದ ನಿಜಸ್ಥಿತಿಯನ್ನು ಭಾರತ' ಮತ್ತು ಹಲವು ವಿದೇಶಿ ಸರ್ಕಾರಗಳು ಒಪ್ಪಿಕೊಳ್ಳಬೇಕು. ಮಾವೋವಾದಿಗಳು ಎಲ್ಲರನ್ನೂ ಒಳಗೊಳ್ಳುವ ಬಹುಪಕ್ಷೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಚೌಕಟ್ಟಿನ ಒಳಗೆ ಮೂಲಭೂತ ಬದಲಾವಣೆಯನ್ನು ತರುವ ಜನರ ಆಶೋತ್ತರಗಳನ್ನು ಈಡೇರಿಸುವ ಪ್ರಯತ್ನ ಮಾಡಬೇಕು. ಸೋತಿರುವ ನೇಪಾಳೀ ಕಾ'ಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷ (ಯು.ಎಂ.ಎಲ್.) ರಾಜಕೀಯ ಮುತ್ಸದಿತನ ತೋರಿಸಿ ಜನರ ತೀರ್ಪು ಜಾರಿಗೆ ತರಬೇಕು. ಕೊನೆಯದಾಗಿ ಅಮೆರಿಕ ಸಹ ನೇಪಾಳಿ ಜನತೆಯ ತೀರ್ಪಿಗೆ ತಲೆಬಾಗಿ ಮಾವೋವಾದಿಗಳಿಗೆ ಕಟ್ಟಿರುವ "ಭಯೋತ್ಪಾದಕ ಸಂಘಟನೆ" ಪಟ್ಟಿಯನ್ನು ಕಿತ್ತು ಹಾಕಬೇಕು. ಮಾಜಿ ಅಧ್ಯಕ್ಷ ಜಿಮ್ಮಿ ಕಾರ್ಟರ್ ಅಮೆರಿಕ ಸರ್ಕಾರಕ್ಕೆ ಈ ಸಲಹೆಯನ್ನು ಆಗಲೇ ಕೊಟ್ಟಿದ್ದಾರೆ. ಆದರೆ ಅಮೆರಿಕನ್ ಸರ್ಕಾರ ಈ ವರೆಗೆ "ಭಯೋತ್ಪಾದಕ' ಪಟ್ಟಿಯಿಂದ ಯಾವುದೇ ಸಂಘಟನೆಯನ್ನು ಬಿಟ್ಟಿರುವ ಉದಾಹರಣೆಗಳಿಲ್ಲ. ಸೇರಿಸುತ್ತಾ ಬಂದಿರುವುದೇ.

ಇಟಲಿಯಲ್ಲಿ ಬಲಪಂಥೀಯರಿಗೆ ಜಯ - ಅಪಾಯಕಾರಿ ತಿರುವು

ಇಟಲಿಯಲ್ಲಿ ಚುನಾವಣೆಯ ಫಲಿತಾಂಶ ಆ ದೇಶದ ಮತ್ತು ಜಗತ್ತಿನ ಭವಿಷ್ಯಕ್ಕೆ ಅಪಾಯಕಾರಿ ತಿರುವು ಕೊಟ್ಟಿದೆ. ಇಟಲಿಯ ಅತ್ಯಂತ ಶ್ರೀಮಂತ ವ್ಯಕ್ತಿ ಸಿಲ್ವಿಯೊ ಬೆರ್ಲುಸ್ಕೊನಿ ಮತ್ತು ಫ್ಯಾಸಿಸಮ್ಮನ್ನು ಮುಕ್ತವಾಗಿ ಸಮರ್ಥಿಸುವ ಅಲಾಯನ್ಸ್ ಪಕ್ಷದ ಸಂಕರದಿಂದ ಹುಟ್ಟಿದ ಬಲಪಂಥೀಯ ಪಕ್ಷಕ್ಕೆ ಇಟಲಿಯ ಇತ್ತೀಚಿನ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಜಯ ಸಿಕ್ಕಿದೆ. ಬೆರ್ಲುಸ್ಕೊನಿ ಮೂರನೇ ಬಾರಿ ಪ್ರಧಾನಿಯಾಗಲಿದ್ದು, ಆತನ ಹಿಂದಿನ ಆಳ್ವಿಕೆಗಳೆಲ್ಲಾ ಹಗರಣಗಳ ಸರಮಾಲೆಯೇ. ತಮ್ಮ ಕಂಪನಿಗಳ ಪರವಾಗಿ ಬಹಿರಂಗವಾಗಿ ಅಧಿಕಾರ ದುರ್ಬಳಕೆ ಮಾಡಿದ, ಕ್ರಿಮಿನಲ್ ಕೇಸ್ ಗಳಿಂದ ತಪ್ಪಿಸಿಕೊಳ್ಳಲು ನ್ಯಾಯಾಂಗ ವ್ಯವಸ್ಥೆಯನ್ನೇ ಬುಡಮೇಲು ಮಾಡಿದ, ಅಧಿಕಾರದಲ್ಲಿ ಇದ್ದಾಗ ಮತ್ತು ಅಧಿಕಾರದಿಂದ ಇಳಿದ ಮೇಲೂ' (ಆತ ಮತ್ತು ಆತನ ಕಂಪನಿಗಳಿಗೆ) ಕಾನೂನು ಕ್ರಮದಿಂದ ವಿನಾಯಿತಿಗೆ ಕಾನೂನು ಮಾಡಿದ ಪ್ರಚಂಡ ಆತ. ಅಲಾಯನ್ಸ್ ಪಕ್ಷ ಜಗತ್ತಿನ ಅತ್ಯಂತ ಅಪಾಯಕಾರಿ ಫ್ಯಾಸಿಸ್ಟ್ ಪಕ್ಷದ ವಾರಸುದಾರ. ಸಾಲದ್ದಕ್ಕೆ ನಾರ್ತನ್ ್ ಲೀಗ್ ಜತೆ ಕೂಟ. ಶ್ರೀಮಂತ ಉತ್ತರ ಇಟಲಿ ಬಡ ಇಟಲಿಯಿಂದ ಪ್ರತ್ಯೇಕವಾಗಬೇಕೆಂಬ ಒತ್ತಾಯ ಮಾಡುತ್ತದೆ ನಾರ್ತನ್ ್ ಲೀಗ್.

ಈ ಆಳುವ ಕೂಟ ಎಷ್ಟು ಅಪಾಯಕಾರಿ ಎಂದು ಫಲಿತಾಂಶ ಪ್ರಕಟವಾಗುತ್ತಲೇ ಗೊತ್ತಾಗಿದೆ. ವಲಸೆಗಾರರೇ ಇಟಲಿಯ ಸಮಸ್ಯೆಗಳ ಮೂಲ ಮತ್ತು ಕೇಡಿನ ಸಾಮ್ರಾಜ್ಯ. ಪೂರ್ವ ಯುರೋಪಿನಿಂದ ಇಟಲಿಗೆ ಬಂದ ಬಡ ವಲಸೆಗಾರರನ್ನು ಬಲ ಪಂಥೀಯ ಪಕ್ಷಗಳು ಬಲಿಪಶುಗಳಾಗಿಸಿವೆ. ಜನತೆ ಮತ್ತು ಈ 'ಕೇಡಿನ ಸಾಮ್ರಾಜ್ಯ'ದ ವಲಸೆಗಾರರನ್ನು ಪ್ರತ್ಯೇಕಿಸಲು ಇಟಲಿಯ ಸೈನ್ಯವನ್ನು ಬಳಸಲಾಗುವುದು ಎಂಬ ಹೇಳಿಕೆ ಅವರ ಬೆಂಬಲಿಗರ ಕಳವಳಕ್ಕೂ ಕಾರಣವಾಗಿದೆ. ಹಿಂದಿನ ಮಧ್ಯಮ ಮತ್ತು ಎಡ ಪಕ್ಷಗಳ ಕೂಟದ ಸರ್ಕಾರದಿಂದ ಯಾವುದೇ ಸಮಸ್ಯೆಗೆ ನಿರ್ಣಾಯಕವಾಗಿ ಪರಿಹಾರ ಕೊಡಲು ಸಾಧ್ಯವಾಗದ್ದು ಮತ್ತು ಸತತ ಅಸ್ಥಿರತೆ ಈ ಬಲಪಂಥೀಯ ವಿಜಯಕ್ಕೆ ಕಾರಣವಾಗಿದೆ. ಇದು ಇಟಲಿಗೆ ಮಾತ್ರವಲ್ಲ, ಜಗತ್ತಿನ ಭವಿಷ್ಯತ್ತಿಗೆ ಅಪಾಯಕಾರಿ.



ಮೈತ್ರಿ ಎಕ್ಸ್‌ಪ್ರೆಸ್

ಹಲವು ದಶಕಗಳ ನಂತರ ಕಲ್ಕತ್ತ ಮತ್ತು ಢಾಕ್ಕಾ ನಡುವೆ ರೈಲು ಪ್ರಯಾಣ ಸೇವೆ ಆರಂಭವಾಗಿದೆ. ಬಂಗಾಲಿ ನವ ವರ್ಷವಾದ ಎಪ್ರಿಲ್ 14 ರಂದು 'ಮೈತ್ರಿ ಎಕ್ಸ್ ಪ್ರೆಸ್' ಎಂದು ಹೆಸರಾದ ಈ ರೈಲು ಲಲ್ಲೂ ಪ್ರಸಾದ್ ಮತ್ತು ರಾಜ್ಯಪಾಲ ಗಾಂಧಿಯವರ ಸಮ್ಮುಖದಲ್ಲಿ ಆರಂಭವಾಯಿತು. 'ಮೈತ್ರಿ ಎಕ್ಸ್ ಪ್ರೆಸ್' ಕಲ್ಕತ್ತ ಮತ್ತು ಢಾಕ್ಕಾ ನಡುವೆ ಪ್ರಯಾಣಕ್ಕೆ 14 ಗಂಟೆ ತೆಗೆದುಕೊಳ್ಳುತ್ತದೆ.

ಮೆಕ್ಸಿಕನ್ ಪಾರ್ಲಿಮೆಂಟು ಸ್ತಬ್ಧ

ಮೆಕ್ಸಿಕೊದ ಪಾರ್ಲಿಮೆಂಟು ಸದನದೊಳಗೆ ಎಡ ಪಕ್ಷಗಳ ಕ್ರಮದಿಂದ ಸ್ತಬ್ಧವಾಯಿತು. ದೇಶದ ಸಾರ್ವಜನಿಕ ಕ್ಷೇತ್ರದ ಪ್ರಮುಖ ತೈಲ ಕಂಪನಿ ಪೆಮೆಕ್ಸ್‌ನ್ನು, ಖಾಸಗಿ ಮತ್ತು ವಿದೇಶಿ ಬಂಡವಾಳ ಒಡೆತನ ವಹಿಸಿಕೊಳ್ಳಲು ಅವಕಾಶ ಮಾಡಿ ಕೊಡುವ ಸರ್ಕಾರಿ ಮಸೂದೆಯನ್ನು ಅವರು ವಿರೋಧಿಸುತ್ತಿದ್ದರು. 1938 ರಲ್ಲಿ ರಾಷ್ಟ್ರೀಕರಿಸಲಾದ ಪೆಮೆಕ್ಸ್ ನ್ನು ಹಿಂಬಾಗಿಲಿಂದ ಖಾಸಗೀಕರಿಸುವ ಪ್ರಯತ್ನ ಇದು ಎಂದು ಎಡ ಪಕ್ಷಗಳು ಆಪಾದಿಸಿವೆ. ಸದನದ ಹೊರಗೂ ಈ ಮಸೂದೆಯ ವಿರುದ್ಧ ಭಾರೀ ಪ್ರತಿಭಟನೆ ನಡೆದಿದೆ.

ವೆನೆಜುವೆಲಾದಲ್ಲಿ ಸಿಮೆಂಟು– ಉಕ್ಕು ರಾಷ್ಟ್ರೀಕರಣ

ವೆನೆಜುವೆಲಾ ಸರ್ಕಾರ ಪ್ರಮುಖ ಸಿಮೆಂಟು ಮತ್ತು ಉಕ್ಕು ಕಾರ್ಖಾನೆಗಳನ್ನು ರಾಷ್ಟ್ರೀಕರಿಸಲು ನಿರ್ಧರಿಸಿದೆ. ಕಾರ್ಮಿಕರಿಗೆ ಸಂಬಂಧಿಸಿದ ಮತ್ತು ಇತರ ಕಾನೂನುಗಳನ್ನು ಈ ವಿದೇಶಿ ಕಂಪನಿಗಳ ಬಹುಪಾಲು ಒಡೆತನದಲ್ಲಿರುವ ಕಂಪನಿಗಳು ಲೆಕ್ಕಿಸುತ್ತಿಲ್ಲ ಎಂದು ಸರ್ಕಾರ ಹೇಳಿದೆ. 1998 ರಲ್ಲಿ ಖಾಸಗೀಕರಿಸಲಾದ ಈ ಕಾರ್ಖಾನೆಗಳಲ್ಲಿ ಸರ್ಕಾರದ ಒಡೆತನವನ್ನು ಶೇ.20 ರಿಂದ ಏರಿಸಿ ಶೇ.60 ಮಾಡಲಾಗಿದೆ. ವಿದೇಶಿ ಕಂಪನಿಗಳು ಅಲ್ಪ ಸಂಖ್ಯಾತ ಪಾಲು ಮುಂದುವರೆಸಬಹುದು ಎಂದು ಸರ್ಕಾರ ಹೇಳಿದೆ. ಉಕ್ಕು ಕಾರ್ಖಾನೆಯ ಒಡೆತನ ಇಟಲಿ ಮತ್ತು ಸಿಮೆಂಟು ಫ್ರಾನ್ಸ್ - ಸ್ವಿಸ್ ಒಡೆತನದಲ್ಲಿವೆ.

ಸ್ಪೈನ್‌ನಲ್ಲಿ ಮಹಿಳಾ ಬಹು ಸಂಖ್ಯಾತ ಮಂತ್ರಿಮಂಡಲ

ಸ್ಪೈನ್‌ನಲ್ಲಿ (ಜಗತ್ತಿನಲ್ಲೇ ಬಹುಶಃ) ಮೊದಲ ಬಾರಿ ಮಹಿಳೆಯರು ಬಹುಮತದಲ್ಲಿರುವ ಮಂತ್ರಿಮಂಡಲ ರಚಿಸಲಾಗಿದೆ. 17 ಸದಸ್ಯರಿರುವ ಮಂತ್ರಿಮಂಡಲದಲ್ಲಿ 9 ಜನ ಮಹಿಳೆಯರು. ಮರು ಆಯ್ಕೆಯಾದ ಸೋಶಲಿಸ್ಟ್ ಪ್ರಧಾನಿ ಜುಪಟೆರೋ ಈ ವಿಕ್ರಮ ಸಾಧಿಸಿದ್ದಾರೆ. ಉಪಪ್ರಧಾನಿ, ರಕ್ಷಣಾ, ಶಿಕ್ಷಣ, ಸಾರ್ವಜನಿಕ ಕಾಮಗಾರಿ ಮುಂತಾದ ಪ್ರಮುಖ ಖಾತೆಗಳನ್ನು ಮಹಿಳೆಯರು ಹೊಂದಿದ್ದಾರೆ.

ಜಿಂಬಾಬ್ವೆ ಬಿಕ್ಕಟ್ಟು ಮುಂದುವರಿಕೆ

ಜಿಂಬಾಬ್ವೆ ರಾಜಕೀಯ ಬಿಕ್ಕಟ್ಟು ಹಾಗೇ ಮುಂದುವರೆದಿದೆ. ಹೈ ಕೋರ್ಟು ಚುನಾವಣಾ ಕಮಿಶನ್ ಫಲಿತಾಂಶವನ್ನು ತಕ್ಷಣವೇ ಪ್ರಕಟಿಸಬೇಕೆಂಬ ಆಜ್ಞೆ ಹೊರಡಿಸಲು ನಿರಾಕರಿಸಿದೆ. ಚುನಾವಣಾ ಕಮಿಶನ್ ಅದಕ್ಕೆ ಬೇಕಾದ ಸಮಯ ತೆಗೆದು ಕೊಳ್ಳಬಹುದೆಂದು ಅಭಿಪ್ರಾಯ ಪಟ್ಟಿದೆ. ಈ ನಡುವೆ ವಿರೋಧ ಪಕ್ಷವಾದ ಎಂ.ಡಿ.ಸಿ. ಇದನ್ನು ಪ್ರತಿಭಟಿಸಲು ಸಾರ್ವತ್ರಿಕ ಮುಷ್ಕರಕ್ಕೆ ಕರೆ ಕೊಟ್ಟಿದೆ.

ನೋಟ



ಡಾ. ಜಿ. ಭಾಸ್ಕರ ಮಯ್ಯ

ವಿಜ್ಞಾನ ಮತ್ತು ಖಾಸಗೀಕರಣದ ವಸ್ತುಸ್ಥಿತಿ

ಇಪ್ಪತ್ತೊಂದನೆಯ ಶತಮಾನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಪರಿಸ್ಥಿತಿ ಭಾರತದಲ್ಲಿ ಅತ್ಯಂತ ವಿಲಕ್ಷಣವಾಗಿದೆ.

ದೇಶದಲ್ಲಿ ಅಶಿಕ್ಷಿತ ಜನರು ಮಾತ್ರವಲ್ಲ, ಓದುಬರಹ ಕಲಿತ ಸಮುದಾಯಗಳೂ ಕೂಡಾ ವಿಜ್ಞಾನವಿರೋಧಿ ಮೂಢನಂಬಿಕೆಯ ಹೊಂಡದಲ್ಲಿ ಎಮ್ಮೆಗಳ ಹಾಗೆ ಹೊರಳಾಡುತ್ತಿವೆ. ದೇಶದ ಆರ್ಥಿಕ ವಿಕಾಸಕ್ಕಿಂತಲೂ ಹೆಚ್ಚು ವೇಗವಾಗಿ ಮೂಢನಂಬಿಕೆಗಳು ವಿಕಾಸ ಹೊಂದುತ್ತಿವೆ; ಹರಡುತ್ತಿವೆ. ಸಂಚಾರ ಮಾಧ್ಯಮಗಳಿಂದಾಗಿ ಈ ಕ್ಷುದ್ರ ನಂಬಿಕೆಗಳು ಅತ್ಯಂತ ವ್ಯಾಪಕವಾಗಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆದು ಬರುತ್ತಾ ಇವೆ. ಭಾರತೀಯ ಜೀವನದ ಪ್ರತಿಯೊಂದು ಸ್ತರದಲ್ಲೂ ಕರ್ಮಕಾಂಡದ ಜಾಲ ಹೆಣೆಯಲ್ಪಟ್ಟಿದೆ. ಅದರೊಳಗೆ ಸಿಲುಕಿದ ನಿಯತಿವಾದಿ(ಹಣೆಬರಹ.... ಇತ್ಯಾದಿ), ಭಾಗ್ಯವಾದಿ(ಅದೃಷ್ಟ.... ಇತ್ಯಾದಿ) ಮಾನಸಿಕತೆ ಎಂದಾದರೂ ಆಧುನಿಕ ತಂತ್ರಜ್ಞಾನ ಮತ್ತು ವಿಜ್ಞಾನದಲ್ಲಿ ಪ್ರಾವೀಣ್ಯವನ್ನು ಸಂಪಾದಿಸಲು ಸಾಧ್ಯವೆ? ಈ ಅನುಮಾನಕ್ಕೆ ಸ್ಪಷ್ಟ ಸಾಕ್ಷ್ಯವೆಂದರೆ ವಿಶ್ವಸ್ತರದಲ್ಲಿ ಆಧುನಿಕ ಭಾರತೀಯ ವಿಜ್ಞಾನದ ಕೊಡುಗೆಗಳನ್ನು ಲಕ್ಷಿಸಿದರೆ ಸಾಕು. ಅದು ನಗಣ್ಯವೇ ಸರಿ.

1924ರಲ್ಲಿ ಎಸ್. ಎನ್. ಬೋಸ್ ಅವರ ಸಿದ್ಧಾಂತ ಭೌತ ಪ್ರಾಥಮಿಕ ಕಣಗಳನ್ನು 'ಬೋಸೋನ್' ಎಂದು ಕರೆಯುತ್ತಾರೆ. ಮತ್ತು 1933ರಲ್ಲಿ ಸಿ.ವಿ. ರಾಮನ್ ಅವರ ಸಂಶೋಧನೆಯಂತಹ ಕೆಲವೇ ಬೆರಳೆಣಿಕೆಯ ಶೋಧನೆಗಳನ್ನು ಬಿಟ್ಟರೆ ಭೌತವಿಜ್ಞಾನದ ಕ್ಷೇತ್ರದಲ್ಲಿ ಮೈಲಿಗಲ್ಲು ಎನ್ನುವಂತಹ ಯಾವ ಸಂಶೋಧನೆಯೂ ಭಾರತದಲ್ಲಿ ಆಗಲಿಲ್ಲ.

ತಂತ್ರಜ್ಞಾನದ ಕ್ಷೇತ್ರವನ್ನು ಗಮನಿಸಿದರೆ ನಾಲ್ಕು ಚಕ್ರದ ವಾಹನಗಳು, ದ್ವಿಚಕ್ರ ವಾಹನಗಳು, ವಾಶಿಂಗ್‌ಮಿಶನ್, ಮಿಕ್ಸಿ - ಮುಂತಾದ ಎಲ್ಲವೂ ವಿದೇಶೀ ತಂತ್ರಜ್ಞಾನದಿಂದ ಬಂದವುಗಳಾಗಿವೆ. ನಮ್ಮ ಆಧುನಿಕ ವಿಜ್ಞಾನದ ಕೊಡುಗೆ 'ಸೊನ್ನೆ'!

ರಾಷ್ಟ್ರ ಮತ್ತು ರಾಜ್ಯದ ಸೇವೆಯಲ್ಲಿ ನಿರತವಾದ ವಿಜ್ಞಾನ

ದೇಶದಲ್ಲಿ ವೈಜ್ಞಾನಿಕ ಸಂಶೋಧನೆಗಾಗಿ 200ಕ್ಕಿಂತ ಅಧಿಕ ರಾಷ್ಟ್ರೀಯ ಪ್ರಯೋಗಶಾಲೆಗಳಿವೆ. ಔದ್ಯೋಗಿಕ (Industrial) ಸಂಶೋಧನೆಯಲ್ಲಿ 1300ಕ್ಕಿಂತ ಹೆಚ್ಚು ಸಂಸ್ಥೆಗಳು ಕೆಲಸ ಮಡುತ್ತಿವೆ. 1993-94ರಲ್ಲಿ ಒಟ್ಟು 57 ಶತಕೋಟಿ ರೂಪಾಯಿಗಳನ್ನು ಸಂಶೋಧನೆಗಾಗಿ ಖರ್ಚುಮಾಡಲಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ 2003-04ರ ಬಜೆಟ್ 47 ಶತಕೋಟಿ ರೂಪಾಯಿಗಳು. ಭಾರತದಲ್ಲಿ ಸಂಶೋಧನೆಗೆ ಖರ್ಚುಮಾಡಿದ ಈ ಹಣ ಒಟ್ಟು ದೇಶೀಯ ಉತ್ಪಾದನೆಗೆ ಹೋಲಿಸಿದರೆ ವಿಕಾಸ ಹೊಂದಿದ ದೇಶಗಳಿಗಿಂತ ಕಡಿಮೆಯಿರಬಹುದು; ಆದರೆ ಒಂದು ವಿಕಾಸಶೀಲ ದೇಶಕ್ಕೆ ಇದು ಎಷ್ಟರ ಮಟ್ಟಿಗೆ ಯೋಗ್ಯವೆಂಬುದು ನಿಜಕ್ಕೂ ಯೋಚಿಸಬೇಕಾದ ವಿಚಾರ. ಈ ಸಂಗತಿ ತನ್ನ ಸ್ಥೂಲ ರೂಪದಲ್ಲಿ ಭಾರತೀಯ 'ವಿಜ್ಞಾನದ ನಿಜ ಸ್ವರೂಪವನ್ನು ಹೊರಗೆಡಹುವುದಿಲ್ಲ. ಲೆಕ್ಕಾಚಾರದ ತಳಕ್ಕಿಳಿದು ನೋಡಿದರೆ ಭಾರತದಲ್ಲಿ ಸಂಶೋಧನೆಗೆ ಖರ್ಚಾಗುವ ಒಟ್ಟು ಹಣದ 40 ಶೇ. ಕೇವಲ ಮೂರು ಕ್ಷೇತ್ರ ಪರಮಾಣು ಇಂಧನ, ಅಂತರಿಕ್ಷ ಮತ್ತು ರಕ್ಷಣೆಗೆ ಮೀಸಲಾಗಿದೆ.

ವಾಸ್ತವದಲ್ಲಿ ನೆಹ್ರೂಜಿಯವರ ಕಾಲದಲ್ಲಿ ಭಾರತೀಯ ವಿಜ್ಞಾನವನ್ನು ಭಾರತೀಯ ರಾಷ್ಟ್ರ-ರಾಜ್ಯ ನಿರ್ಮಾಣದ ಅಭಿನ್ನ ಅಂಗದ ರೂಪದಲ್ಲಿ ವಿಕಾಸಪಡಿಸಲಾಗಿತ್ತು.

ಆದರೆ, ಭಾರತದ ನೌಕರಶಾಹಿಯು ವಿಜ್ಞಾನವನ್ನು ತನ್ನ ಸ್ವಾರ್ಥಕುಂಡದಲ್ಲೇ ಅಮುಕಿ ಹಾಕಿದೆ. ಸರ್ಕಾರಿ ಸಂಶೋಧನಾಲಯಗಳಲ್ಲಿ ಕೆಲಸಮಾಡುವ ಅಧಿಕಾರಿಗಳು ಸಂಬಳಕ್ಕಾಗಿ ಕೆಲಸಮಾಡುವವರು. ಇದರಿಂದಾಗಿ ಭಾರತೀಯ ಸಂಶೋಧನಾಲಯಗಳ ಆಂತರಿಕ ಕ್ರಿಯಾ ಕಲಾಪಗಳು ಎಷ್ಟೋ ಬಾರಿ ಭಯಾನಕವಾಗಿ ವಿಜ್ಞಾನ ವಿರೋಧಿಗಳಾಗಿವೆ. ಭ್ರಷ್ಟಾಚಾರದ ಕೆಸರು ಹೊಂಡದಲ್ಲಿ ಮುಳುಗಿವೆ. ಯಾವ ವಿಜ್ಞಾನಿ ಪ್ರಭುತ್ವದ ಹತ್ತಿರ ಬರಲು ಸಮರ್ಥನಾಗುತ್ತಾನೊ ಆತ ಸಾಕಷ್ಟು ಜಮೀನು ಜಹಗೀರು ಮಾಡಿಕೊಳ್ಳುವಲ್ಲಿ ಸಫಲನಾಗುತ್ತಾನೆ. ಈ ಜನಗಳೇ ಸರ್ಕಾರಿ ಖರ್ಚು, ಪ್ರಯೋಗಶಾಲೆಯ ಉಪಕರಣಗಳು ಮತ್ತು ವಿದೇಶ ಪ್ರಯಾಣದ ಮೇಲೆ ನಿಯಂತ್ರಣ ಹೊಂದಿ ದವರಾಗಿರುತ್ತಾರೆ.

ಸುಪ್ರಸಿದ್ಧ ಭೌತವಿಜ್ಞಾನಿ ಮೇಘನಾದ್ ಸಾಹಾ ಹಾಗೂ ಗಣಿತಜ್ಞ ಡಿ. ಡಿ. ಕೊಸಾಂಬಿ ಭಾರತದ ವಿಜ್ಞಾನದ ಬೆಳವಣಿಗೆಯನ್ನು ತೀವ್ರ ವಿಮರ್ಶೆಗೆ ಒಳಪಡಿಸಿದ್ದರು. ಸಾಹಾ 1952 ರಿಂದ 56ರ ತನಕ ಲೋಕಸಭೆಯ ಸದಸ್ಯರಾಗಿದ್ದರು. ಎಷ್ಟೋ ಬಾರಿ ಸದನದಲ್ಲಿ ವೈಜ್ಞಾನಿಕ ಸಂಶೋಧನಾಲಯಗಳ ಕಾರ್ಯಪ್ರವೃತ್ತಿಯನ್ನು ತೀವ್ರ ವಿಮರ್ಶೆಗೆ ಗುರಿಪಡಿಸಿದ್ದರು. ಅವರ ಪ್ರಕಾರ ಸಂಶೋಧನೆಯ ಕೇಂದ್ರಸ್ಥಾನವು ವಿಶ್ವವಿದ್ಯಾಲಯಗಳಾಗಬೇಕು. ಇದರಿಂದ ಶಿಕ್ಷಣ ಮತ್ತು ಸಂಶೋಧನೆಯ ನಡುವೆ ಸಮನ್ವಯ ಸಾಧ್ಯವಾಗುತ್ತದೆ. ವಿಜ್ಞಾನಿಗಳಲ್ಲಿ ಶಾಂತಿಸ್ವರೂಪ್ ಭಟನಾಗರ್ ಮತ್ತು ಹೋಮಿ ಭಾಭಾ ಪ್ರತ್ಯೇಕ ಸಂಶೋಧನಾಲಯ ಸ್ಥಾಪಿಸ ಬೇಕೆಂಬ ವಿಚಾರದಲ್ಲಿ ಒಲವುಳ್ಳವರಾಗಿದ್ದರು.

ಡಿ. ಡಿ. ಕೊಸಾಂಬಿ ಮತ್ತೆ ಮತ್ತೆ ಹೇಳುತ್ತಿದ್ದರು: 'ಭಾರತೀಯ ವಿಜ್ಞಾನ ಮತ್ತು ತಂತ್ರಜ್ಞಾನವು ಸಾಮಾನ್ಯ ಜನರ ಜೀವನ ಮತ್ತು ಉತ್ಪಾದನಾ ಪ್ರಕ್ರಿಯೆಯಲ್ಲಿ ಬರುವ ಸಮಸ್ಯೆಗಳ ಕಡೆಗೆ ಗಮನಕೊಡುತ್ತಿಲ್ಲ. ಇದು ವಿದೇಶಗಳಿಂದ ಆಮದು ಮಾಡಿಕೊಂಡ ಉಪಕರಣ ಮತ್ತು ಪರಿಹಾರಗಳ ಮೇಲೆಯೇ ಆಧರಿಸಿದೆ. ಅಣುಶಕ್ತಿಯ ಸಂಶೋಧನೆಗೆ ಮಾಡುವ ಖರ್ಚಿನ ಮೇಲೆ ತೀವ್ರ ಆಕ್ಷೇಪವನ್ನು ಅವರು ಎತ್ತಿದ್ದರು. ಅವರ ಪ್ರಕಾರ ಸಂಶೋಧನೆ 'ಸೌರಶಕ್ತಿ'ಯ ಬಗೆಗೆ ನಡೆಯಬೇಕು. ಆದರೆ ಭಾರತೀಯ ವಿಜ್ಞಾನದ ವಿಕಾಸವು ಶಾಸಕ ವರ್ಗದ ಬೇಡಿಕೆಗೆ ಅನುಗುಣವಾಗಿಯಷ್ಟೇ ನಡೆಯಿತು. ಸಾಮಾನ್ಯ ಜನರ ಜೀವನದ ಪ್ರಶ್ನೆ ಇವರ ಗುರಿಯೇ ಆಗಿರಲಿಲ್ಲ. ಜನಸಾಮಾನ್ಯರಲ್ಲಿ ವೈಜ್ಞಾನಿಕ ದೃಷ್ಟಿಕೋನವನ್ನು ಮೂಡಿಸುವುದಂತೂ ಅಜೆಂಡಾದಲ್ಲಿ ಇರಲೇ ಇಲ್ಲ. ಪ್ರಾಥಮಿಕ ಶಿಕ್ಷಣಕ್ಕೂ ಇವರು ಆದ್ಯತೆ ಕೊಡಲಿಲ್ಲ. ಪಾಠಶಾಲೆಗಳಲ್ಲಿ ವಿದ್ಯಾಲಯಗಳಲ್ಲಿ ಪ್ರಾಥಮಿಕ ವಿಜ್ಞಾನದ ಪ್ರಯೋಗಾಲಯಗಳೂ ಇಲ್ಲ. ಆದಾಗ್ಯೂ, ಇವರು ವಿಜ್ಞಾನದ ಸಂಶೋಧನೆಗೆ ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಿದ್ದರು"

ಭಾರತದ ಅಗತ್ಯತೆಗನುಸಾರವಾಗಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ವಿಕಾಸಪಡಿಸಬೇಕು. ಆದರೆ ಇದರ ಬಗ್ಗೆ ಶಾಸಕವರ್ಗಕ್ಕೆ ಎಂದೂ ಗಮನವಿದ್ದಿಲ್ಲ; ಇಂದೂ ಇಲ್ಲ.

ಯಾವುದೇ ಒಂದು ದೇಶದ ವಿಜ್ಞಾನದ ಸ್ತರವನ್ನು ಅಳೆಯುವ ಮಾನದಂಡವು ಅಂತರಾಷ್ಟ್ರೀಯ ಪ್ರಕಾಶನಗಳಲ್ಲಿ ಅದನ್ನು 'ಉದ್ಧರಿಸುವ' ಯೋಗ್ಯತೆಯಿಂದ ಬರುತ್ತದೆ. ಆದರೆ ಈ ಮಾನದಂಡದಲ್ಲಿ 1980ರಲ್ಲಿ ಭಾರತೀಯ ವಿಜ್ಞಾನವು ವಿಶ್ವದಲ್ಲಿ 8ನೆಯ ಸ್ಥಾನದಲ್ಲಿತ್ತು. 2000 ಇಸವಿಯಲ್ಲಿ ಅದರ ಹಣೆಬರಹ 15ನೆಯ ಸ್ಥಾನಕ್ಕೆ ಇಳಿಯಿತು.

ಭಾರತೀಯ ವಿಜ್ಞಾನದ ಒಟ್ಟು ಉತ್ಪಾದಕತೆಯೂ ಅತ್ಯಂತ ನಾಚಿಕೆಗೇಡಿತನದ್ದಾಗಿದೆ.

ಖಾಸಗೀಕರಣ

ಸಂಶೋಧನೆಯ ಸಂಕಟ ಭಾರತೀಯ ಶಾಸಕರಿಗೆ ಗೊತ್ತಿಲ್ಲದ ವಿಷಯವೇನಲ್ಲ. ಆದರೆ ಅದು ತೋರಿಸುವ ದಾರಿ ಖಾಸಗೀಕರಣದ ದಾರಿ. ವಿದ್ಯುತ್, ನೀರು, ಟೆಲಿಫೋನ್ ಇವುಗಳನ್ನು ವ್ಯವಸ್ಥೆಗೊಳಿಸುವ ಸಾಧನವನ್ನೆಲ್ಲಾ ಬಂಡವಾಳ ಗಾರರಿಗೆ ಮಾರಿ ಖಾಸಗೀಕರಣಗೊಳಿಸುವುದೇ ಅವರ ಉದ್ದೇಶ. ಬಂಡವಾಳವಾದದ, ಖಾಸಗಿ ಪಾಲುದಾರಿಕೆಯ ಸಿದ್ಧಾಂತವು ಯಾವಾಗಲೂ ಲಾಭದ ಮೇಲೆಯೇ ಸಂಶೋಧನೆಗಳನ್ನು ನಿಯಂತ್ರಿಸುವುದು ಸಂಶೋಧನೆಯ ಸಾಮೂಹಿಕ ಪ್ರವೃತ್ತಿಯು ಖಾಸಗಿ ಸಂಪತ್ತಿನ ಅಧಿಕಾರಕ್ಕೆ ವಿರುದ್ಧವಾಗಿರುತ್ತದೆ. ಆದ್ದರಿಂದ ಖಾಸಗಿ ಸಂಶೋಧನೆಯ ಸ್ವರೂಪವು ಖಾಸಗಿ ಉತ್ಪಾದನೆಯಿಂದ ಎಷ್ಟು ಹೆಚ್ಚು ಲಾಭಗಳಿಸಬಹುದೆಂಬ ದೃಷ್ಟಿಕೋನದಿಂದ ನಿಯಂತ್ರಿತವಾಗಿರುತ್ತದೆ. ದೇಶದಲ್ಲಿ ಸಂಶೋಧನೆಯ ಖಾಸಗೀಕರಣದ ವಿವಿಧ ಆಯಾಮಗಳಿವೆ.

ಸರಕಾರದ ಪ್ರಕಾರ

"ಅಣುಶಕ್ತಿ ಅಂತರಿಕ್ಷ ಮತ್ತು ರಕ್ಷಣಾ ಸಂಶೋಧನೆಯಂತಹ ತಥಾಕಥಿತ ಸಂಶೋಧನೆಗಳನ್ನು ಬಿಟ್ಟು ಮಿಕ್ಕುಳಿದ ಕ್ಷೇತ್ರದಲ್ಲಿ ನಡೆಯುವ ಬೇರೆಲ್ಲಾ ಸಂಶೋಧನೆಗಳಿಗೆ ಸಂಪತ್ತನ್ನು ಸಂಬಂಧ ಪಟ್ಟವರೇ ಕ್ರೋಢೀಕರಿಸಿಕೊಳ್ಳಬೇಕು"

ಇದರಿಂದಾಗಿ ಕ್ರಮಕ್ರಮವಾಗಿ ರಾಜ್ಯದ ಸಂಶೋಧನಾಲಯಗಳು ಕ್ಷಯಿಸತೊಡಗಿವೆ. ಅವುಗಳ ಕೆಲಸ ಮಾಡುವ ಇಂಜನಿಯರುಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಇನ್ನೊಂದೆಡೆಯಲ್ಲಿ ಬಂಡವಾಳವಾದಿ ಉತ್ಪಾದನೆಯ ಕ್ಷೇತ್ರದಲ್ಲಿ ಸಂಶೋಧನೆಯ ಅನುಪಾತವು ಹೆಚ್ಚುತ್ತಿದೆ.

ಜಾಗತೀಕರಣದಿಂದಾಗಿ ಈ ಬಿರುಕು ಇನ್ನೂ ಆಳವಾಗುತ್ತಿದೆ. ಔಷಧ ಸೂಚನಾ ವಿಭಾಗ ಮತ್ತು ಕಂಪ್ಯೂಟರ್ ಕ್ಷೇತ್ರಗಳಲ್ಲಿ ಕಂಪೆನಿಗಳು 15 ರಿಂದ 20 ಶೇ ಬಂಡವಾಳವನ್ನು ಸಂಶೋಧನೆಗೆ ಖರ್ಚುಮಾಡುತ್ತಿವೆ. ರೈನ್‌ಬಾಕ್ಸಿ, ಇನ್‌ಫೋಸಿಸ್ ಅದೇ ಕೆಲಸ ಮಾಡುತ್ತಿವೆ.

WTOಕ್ಕೆ ಅಧೀನವಾದ 'ಟಿಪ್ಸ್' ಒಪ್ಪಂದಕ್ಕನುಸಾರವಾಗಿ ಭಾರತದ ಪ್ರಜಾಪ್ರಭುತ್ವವು ದೇಶದ ಪೇಟೆಂಟ್‌ಗಳನ್ನು ಹಿರೇ ಬಂಡವಾಳಗಾರರ ವಶಕ್ಕೆ ಒಪ್ಪಿಸಿದೆ.

ಮೊದಲೇನೆ ಭಾರತದಲ್ಲಿ ಅಸ್ತಿತ್ವದಲ್ಲಿರುವ ಪೇಟೆಂಟ್‌ಗಳ ಬಹುದೊಡ್ಡ ಭಾಗ ಹೊರಗಿನ ಕಂಪೆನಿಗಳ ಮತ್ತು ಸಂಶೋಧನಾಲಯಗಳದ್ದಾಗಿವೆ. ಅವು ಭಾರತದ ವ್ಯಾಪಾರ ಮಂಡಳಿಗಳಲ್ಲಿ ತಮ್ಮ ಲಾಭ ಗಟ್ಟಿಗೊಳಿಸಲು ಕೆಲಸ ಮಾಡುತ್ತಿವೆ.

ಖಾಸಗಿ ವಿಜ್ಞಾನದ ಇನ್ನೊಂದು ಭಾಗದ ಸಂಬಂಧವು ಸಂಶೋಧನ ಸಂಬಂಧದ 'ನೈತಿಕತೆ'ಯ ನಿಯಂತ್ರಣದಲ್ಲಿದೆ. ಕೆಲವೊಂದು ಔಷಧಿಗಳ (ಉದಾ: ಜೀವರಕ್ಷಕ) ನೈತಿಕ ನಿಯಂತ್ರಣ ಅತ್ಯಂತ ಮುಖ್ಯವಾದುದು. ಔಷಧಿ ನಿಯಂತ್ರಣ ಪ್ರಾಧಿಕಾರ ಮತ್ತು ಮೆಡಿಕಲ್ ಕೌನ್ಸಿಲ್‌ನಂತಹ ಸಂಸ್ಥೆಗಳು ನೈತಿಕ ನಿಯಂತ್ರಣದ ಮಹತ್ವಪೂರ್ಣ ಸಂಸ್ಥೆಗಳು. ಆದರೆ ಭಾರತದಲ್ಲಿ ಮಾತ್ರ ಇವುಗಳ ಅಧಿಕಾರ ಕ್ಷೇತ್ರ ಅತ್ಯಂತ ಸೀಮಿತವಾಗಿದೆ.

ಈ ರೀತಿ ಜಾಗತೀಕರಣದ ಪ್ರಕ್ರಿಯೆಯಲ್ಲಿ ಹಿಂದೊಮ್ಮೆ ಪ್ರಾಚೀನ ಕಾಲದಲ್ಲಿ ವಿಜ್ಞಾನದ ಕ್ಷೇತ್ರದಲ್ಲಿ ಜಗತ್ತಿನಲ್ಲಿಯೇ ಮುಂದಿದ್ದ ಭಾರತಕ್ಕೆ ಇಂದು ಲಕ್ವ ಹೊಡೆದಿದೆ.

○

ಖಾಸಗಿ ವಲಯದ ಕರಾಳ ರೂಪ



ಆರನೇ ವೇತನ ಆಯೋಗದ ವರದಿಯು ಬೆನ್ನಲ್ಲೇ ಹಲವು ಸ್ವಾರಸ್ಯಕರ ವಿಷಯಗಳು ಹೊರ ಬರುತ್ತಿವೆ. ಇಂತಹ ಒಂದು ಸಂಖ್ಯಾಧರಿತ ವರದಿ ಖಾಸಗೀ ವ್ಯವಸ್ಥೆ ಎಷ್ಟು ಶೋಷಣಾತ್ಮಕವಾದದ್ದು ಎಂಬುದನ್ನು ಬಟಾಬಯಲು ಮಾಡುತ್ತದೆ.

ಕೆಳಗಿನ ಕೋಷ್ಟಕವನ್ನು ನೋಡಿ. ಇದು ಖಾಸಗಿ ವಲಯ ಮತ್ತು ಸರ್ಕಾರಿ ವಲಯದಲ್ಲಿ ಕೆಲಸ ಮಾಡುವವರ ವೇತನ ತುಲನಾತ್ಮಕ ವಿವರ.

ಖಾಸಗಿ ವಲಯ

ಹುದ್ದೆ ವಿವರ	ಒಟ್ಟು ಉದ್ಯೋಗದಲ್ಲಿ ಪಾಲು	ಸರಾಸರಿ ವಾರ್ಷಿಕ ವೇತನ ರೂ.ಗಳಲ್ಲಿ
ಹಿರಿಯ ವ್ಯವಸ್ಥಾಪಕರು	1	17,20,345
ಮಧ್ಯಮ ವ್ಯವಸ್ಥಾಪಕರು	5	5,52,000
ಕಿರಿಯ ವ್ಯವಸ್ಥಾಪಕರು		
ಮೇಲ್ವಿಚಾರಕರು ಇತ್ಯಾದಿ	18	1,93,000
ಜವಾನ, ಕಾರಕೂನ ಕೆಲಸಗಾರ ಇತ್ಯಾದಿ	76	58,289

ಹಿರಿಯ ವ್ಯವಸ್ಥಾಪಕ ಗುಂಪಿನಲ್ಲಿ ಬರೀ ಶೇ 1 ರಷ್ಟು ಉದ್ಯೋಗದಲ್ಲಿ ಪಾಲು ಆದರೆ ವೇತನ ಮಾತ್ರ ಅತ್ಯಂತ ಹೆಚ್ಚು. ಕೆಲಸಗಾರರ ಗುಂಪನ್ನು ನೋಡಿ ಉದ್ಯೋಗದಲ್ಲಿ ಅತಿ ಹೆಚ್ಚಿನ ಷರಾ ಅಂದರೆ ಶೇ.76 ರಷ್ಟು ವೇತನ ಮಾತ್ರ ಅತಿ ಕಡಿಮೆ.

ಸರ್ಕಾರಿ ವಲಯದಲ್ಲಿ ವೇತನ ರೂಪ ಕೆಳಗಿನ ಕೋಷ್ಟಕದಲ್ಲಿದೆ.

ಹುದ್ದೆ ವಿವರ	ಒಟ್ಟು ಉದ್ಯೋಗದಲ್ಲಿ ಪಾಲು	ಸರಾಸರಿ ವಾರ್ಷಿಕ ವೇತನ ರೂ.ಗಳಲ್ಲಿ
ವಿಭಾಗದ ಮುಖ್ಯಸ್ಥರು		
ಜಂಟಿ ನಿರ್ದೇಶಕರು ಕಾರ್ಯದರ್ಶಿ	2	9,23,940
ಉಪ ಜಂಟಿ ನಿರ್ದೇಶಕರು ಇತ್ಯಾದಿ	3.5	4,75,890
ಕಾರರೂನ ಲೆಕ್ಕಾಧಿಕಾರಿ ಇತ್ಯಾದಿ	63	3,78,450
ಜವಾನ, ವಾಹನ ಚಾಲಕ ಇತ್ಯಾದಿ	31.5	2,33,682

ಇದು ಸಂಘಟಿತ ವಲಯದ ಉದಾಹರಣೆ ಮಾತ್ರ. ಜಗತ್ತಿನ ಸಂಪತ್ತನೆಲ್ಲಾ ಕೆಲವೇ ಕೆಲವರ ಕೈಯಲ್ಲಿ ಕ್ರೋಢೀಕರಿಸಿ ಅತೀ ಶ್ರೀಮಂತರನ್ನು ಸೃಷ್ಟಿಸಿ ಉಳಿದವರನ್ನೆಲ್ಲಾ ಶ್ರೀಮಂತರಿಗಾಗಿ ದುಡಿವ ದಾಳವನ್ನಾಗಿ ಮಾಡುವ ವ್ಯವಸ್ಥೆಯ ರೂಪವಿದ್ದು. ಸಂಪತ್ತನ್ನು ಸೃಷ್ಟಿಸಲು ದಿನ ರಾತ್ರಿ ಬೆವರು ಸುರಿಸಿ ದುಡಿವ ಜನರನ್ನು ಶಾಶ್ವತವಾಗಿ ಬಡವರನ್ನಾಗಿಯೇ ಉಳಿಸಿಕೊಳ್ಳುವ ಹುನ್ನಾರವೇ ಖಾಸಗೀಕರಣದ ಕೂಗು. ಇದಕ್ಕೆ ಬೇರೆ ಸಾಕ್ಷಿ ಬೇಕೇ?



ಸಖತ್ ಕುಯ್ತಾನೆ 'ಮಿ. ಗರಗಸ'

ಮುನಿಯ, (ಮು ಫಾರ್ ಮೂದೇವಿ) ಅನ್ನೋದು ಆತನ ಹೆಸರು. ಅವನೊಬ್ಬ ಕತೆಗಾರ. ಕತೆಗಳನ್ನು ಅವನು ಬರೆದಿಟ್ಟುಕೊಂಡಿರೋದು ಸಿನಿಮಾಗಳಿಗಾಗಿ. ಆ ಕತೆಗಳನ್ನು ಸಿನಿಮಾ ಮಾಡಬಲ್ಲ ನಿರ್ಮಾಪಕ, ನಿರ್ದೇಶಕರ ಹುಡುಕಾಟದಲ್ಲಿದ್ದಾನೆ ಅವನು.

ಅವನೊಂದು ಉತ್ಸಾಹದ ಬುಗ್ಗೆ. ಯಾರಾದರೂ ಸಿನಿಮಾ ಕತೆ ಬಗ್ಗೆ ಕೇಳಿದರೋ ಮುಗಿಯಿತು. ಶುರುಕತೆ. ಕತೆ ಹೇಳುವ ಮೊದಲು ವಿಘ್ನ ನಿವಾರಕ ವಿನಾಯಕನಿಗೆ ಒಂದು ಸಣ್ಣ ಪೂಜೆ. ನೀವು ಕೇಳದಿದ್ದರೂ ಹೇಗಾದರೂ ಮಾಡಿ ಕತೆ ಹೇಳುವ ಕಲೆ ಅವನಿಗೆ ಗೊತ್ತು. ನೀವು ಕತೆ ಕೇಳುವವರಾದರೆ, ಸ್ವಲ್ಪ ಕಾಲ ತನ್ನ ಸೂಟ್‌ಕೇಸನ್ನು ಹಿಡಿದುಕೊಳ್ಳಲು ನಿಮ್ಮ ಕೈಗೆ ಕೊಡುತ್ತಾನೆ. ಸೂಟ್‌ಕೇಸ್ ಮೇಲೆ ಸಿನಿಮಾ ಕತೆಗಳಿರುವ ದೊಡ್ಡ ಕಡತ ಇಟ್ಟು ಅದರ ಮೇಲೊಂದು ಪುಟ್ಟ ಗಣಪತಿ ವಿಗ್ರಹ ಇಟ್ಟು ಜೇಬೊಳಗಿನ ಗಂಟೆ ತೆಗೆದು ಪೂಜೆ ಮಾಡಿಯೇ ಅವನು ಕತೆ ಹೇಳುವುದು. ಯಾರು ಯಾವ ವಿಷಯದ ಬಗೆಗೆ ಮಾತನಾಡಿದರು ಅದನ್ನೇ ತನ್ನ ಸಿನಿಮಾ ಕತೆಗೆ ತಂದು ತಗುಲಿಸುವ ಅದ್ಭುತ ಸಾಮರ್ಥ್ಯ ಅವನದು. ಜೊತೆಗೆ ಕತೆ, ಕತೆಯ ಸನ್ನಿವೇಶಕ್ಕೆ ತಕ್ಕಂತೆ ಕನ್ನಡ ಸಿನಿಮಾದ ಪ್ರಖ್ಯಾತ ಹಾಡುಗಳನ್ನು ಆತ ಹಾಡುತ್ತಾನೆ...ಆದರೆ ಆಗಾಗ ಧ್ವನಿ ಕೈ ಕೊಟ್ಟು ಕೀರಲಾಗುತ್ತದೆ.

ಇಂತಹ ಒಬ್ಬ ಕತೆಗಾರನ ಕೈಯಲ್ಲಿ ಸಿಕ್ಕಿಕೊಂಡ ಒಬ್ಬ ನಿರ್ಮಾಪಕ, ನಿರ್ದೇಶಕ ಮತ್ತು ಅವನ ಸಂಸಾರ, ಸ್ನೇಹಿತರ ಪಾಡೇ 'ಮಿ.ಗರಗಸ' ಚಿತ್ರದ ಕತೆ, ಅಲ್ಲಲ್ಲಿ ಹಾಸ್ಯ ಹೊಮ್ಮುತ್ತದೆ.

ಒಂದು ಬೆಳಗಿನಿಂದ ರಾತ್ರಿಯ ಅವಧಿಯ ನಡುವೆ ಒಂದೇ ದಿನದ ಬೆಳವಣಿಗೆ ಚಿತ್ರದ ಕತೆ. ಚಿತ್ರಕತೆ ಕೇಳುವ ನಿರ್ಮಾಪಕನೊಬ್ಬನ ಮನೆಗೆ (ಅನಂತನಾಗ್) ಬರುವ ಮುನಿಯ(ಕೋಮಲ್) ಸೃಷ್ಟಿಸುವ ಅವಾಂತರಗಳು ಒಂದೆರಡಲ್ಲ. ಇದರಿಂದ ಮೊದಲೇ ಸಂಶಯದ ಕಾರಣದಿಂದ ಬಿರುಕು ಬಿಟ್ಟಿದ್ದ ನಿರ್ಮಾಪಕನ ಸಂಸಾರ ಮತ್ತು ನಿರ್ದೇಶಕನ ಸಂಸಾರ ಮತ್ತಷ್ಟು ಬಿರುಕು ಬಿಡುತ್ತದೆ.

> ಟಿ.ವಿ. ಧಾರವಾಹಿ, ಗಾಂಧಿನಗರದ ಸಿನಿಮಾ ಸೂತ್ರಗಳನ್ನು ಅಲ್ಲಲ್ಲಿ ಚೆನ್ನಾಗಿಯೇ ಗೇಲಿ ಮಾಡಲಾಗಿದೆ. ಅಷ್ಟರ ಮಟ್ಟಿಗೆ ಸಿನಿಮಾ ಯಶಸ್ವಿ.

ಕೊನೆಗೆ ಇದೇ ಕತೆಗಾರನ ಮಾತು, ಹಾಸ್ಯ, ಮಾನವೀಯತೆಯ 'ಪಾಠ' ದಿಂದಾಗಿ ಈ ಸಂಸಾರಗಳ ನಡುವೆ ಸಂಶಯ ಪರಿಹಾರವಾಗಿ ಅವು ಒಂದಾಗುತ್ತವೆ ಇದೇ ಚಿತ್ರದ ಕತೆ.

ಕೋಮಲ್ ಒಬ್ಬ ಉತ್ತಮ ನಟ. ಅವರು ಚಿತ್ರನಟ ಜಗ್ಗೇಶ್ ಅವರ ತಮ್ಮ ಆಗಿದ್ದರೂ



'ಜಗ್ಗೇಶ್‌ಬ್ರಾಂಡ್' ಹಾಸ್ಯದ ಪ್ರಭಾವದಿಂದ ಬಹುಮಟ್ಟಿಗೆ ತಪ್ಪಿಸಿಕೊಂಡಿದ್ದಾರೆ ಎನ್ನುವುದು ಮೆಚ್ಚಬೇಕಾದದ್ದೇ. ಚಿತ್ರದಲ್ಲಿ ಪ್ರೀತಿ ಪ್ರಣಯದ ವಿಷಯ, ಮಾತುಕತೆಗಳೇ ಕೇಂದ್ರವಾದರೂ ದ್ವಂದ್ವಾರ್ಥದ ಸಂಭಾಷಣೆ ಹೆಚ್ಚು ತಲೆ ಹಾಕುವುದಿಲ್ಲ ಎಂಬುದೊಂದು ಸಮಾಧಾನದ ವಿಷಯ. ಅನಂತ್‌ನಾಗ್ ಅಭಿನಯ ಸಹಜವಾಗಿದೆ. ಸಿನಿಮಾದೊಳಗಿನ ನಿರ್ದೇಶಕರ ಪಾತ್ರದಲ್ಲಿ ನಾಗಾಭರಣರ ಅಭಿನಯ ಸಾಲದು. ಅವರು ಕೆಲವೊಮ್ಮೆ ಉತ್ತಮ ನಿರ್ದೇಶಕಷ್ಟೇ - ನಟರಲ್ಲ, ಎಂಬುದು ಇಲ್ಲಿ ಸಾಬೀತಾಗಿದೆ.

ಚಿತ್ರೋದ್ಯಮದೊಳಗಿನ ಹಲವು ಹುಳುಕುಗಳು ಚಿತ್ರದಲ್ಲಿ ಹಾಸ್ಯಕ್ಕೆ ಗುರಿಯಾಗಿದೆ. ನಟಿ, ನಿರ್ದೇಶಕ, ನಿರ್ಮಾಪಕ ಮುಂತಾದವರ ನಡುವಿನ ಸಂಬಂಧಗಳು ಇತ್ಯಾದಿ. ಟಿ.ವಿ. ಧಾರವಾಹಿ, ಗಾಂಧಿನಗರದ ಸಿನಿಮಾ ಸೂತ್ರಗಳನ್ನು ಅಲ್ಲಲ್ಲಿ ಚೆನ್ನಾಗಿಯೇ ಗೇಲಿ ಮಾಡಲಾಗಿದೆ. ಅಷ್ಟರ ಮಟ್ಟಿಗೆ ಸಿನಿಮಾ ಯಶಸ್ವಿ.

ಹೆಂಡತಿಯನ್ನು ಗೌರವದಿಂದ ಕಾಣಬೇಕು, ಸಂತೋಷವಾಗಿರುವಂತೆ ನೋಡಿಕೊಳ್ಳಬೇಕು ಮತ್ತು ಸಂಸಾರದಲ್ಲಿ ಸಹನೆ, ತಾಳ್ಮೆ, ತೋರಬೇಕು ಎಂಬುದು ಚಿತ್ರದ ಅಂತಿಮ ಸಂದೇಶ. ಅದನ್ನು ಬರೀ ಹೆಂಡತಿಯರಿಗೆ ಹೇಳುವುದಕ್ಕೆ ಬದಲಾಗಿ ಈ ಸಿನಿಮಾ ಮುಖ್ಯವಾಗಿ ಗಂಡಸರಿಗೆ ಹೇಳಿದೆ ಎನ್ನುವುದು ಗಮನಾರ್ಹ. ಇದಕ್ಕಿಂತ ವಿಶೇಷವನ್ನೇನೂ ಈ ಸಿನಿಮಾದಿಂದ ನಿರೀಕ್ಷಿಸುವಂತಿಲ್ಲವಲ್ಲ.

○

ಆರ್ಟ್ ಕಾರ್ನರ್



ಕಣ್ಣೀರು ಹನಿಯೊಂದು

ಸ್ಪಾನಿಶ್ ನಾಗರೀಕ ಅಂತರ್‌ಯುದ್ಧದಲ್ಲಿ ಅತ್ಯಂತ ಕೆಟ್ಟ ದೌರ್ಜನ್ಯವೆಂದರೆ ಗೆರ್ನಿಕಾದ ಬಾಸ್ಕೋ ನಗರದ ಮೇಲೆ ಜರ್ಮನ್ ವಾಯುದಳ ಹಾಕಿದ ಬಾಂಬ್ ಧಾಳಿ. ಈ ಹತ್ಯೆಗೆ ಖ್ಯಾತ ಕಲಾವಿದ ಪಾಬ್ಲೋ ಪಿಕಾಸೋ ಪ್ರತಿಕ್ರಿಯಿಸಿದ್ದು ಹೀಗೆ. ಸಾವನ್ನಪ್ಪಿದ ಕಂದನ ಕೈಯಲ್ಲಿ ಹಿಡಿದ ದುಃಖಿತ ಮಹಿಳೆಯ ಪ್ರಸಿದ್ಧ ವರ್ಣಚಿತ್ರ





ರುಂಡಮಾಲೆಗಳ ಧರಿಸಿ ಬಂತು ಹೊಸ ವರ್ಷದ ಬೆಳಗು
ಅಗ್ನಿ ತೇರನ್ನೆಳೆಯುತ್ತ ಬಂತು 'ಚಿತ್ರಭಾನ'ದ ಬೆಳಗು
ಕೋಗಿಲೆ ಬುಲ್ ಬುಲ್ ಬಾಯಿಗೆ ಬೀಗ
ಕೊಗುತ್ತಿವೆ ಹೆಣಗಳು ನಭ ಹರಿವಂತೆ ಉರಿಯುತ್ತಿದೆ ಕಿವಿಯಿಲ್ಲದ ಬೆಳಗು
ಸ್ವಸ್ತಿ ಹೇಳಿವಿಯೇನು ನಿನ್ನ ಬಟ್ಟಲು ಬರಿದು
ರಕ್ತದ ವಧುವೀಂಟಿ ತೂನೆಯುತ್ತಿದೆ ಮತ್ತೇರಿದ ಬೆಳಗು
ಧರ್ಮವೇ ಕೋವಿಯಾಗಿದೆ ಬೇಟೆಗಾರನಿಗೆ
ನಗುತಿಹುದು ಬಲೆಯ ಬೀಸಿದ ಬೆಳಗು
ಬದುಕು ಮೃತ್ಯುಗಳು ರಣರಂಗದಲ್ಲಿ
ತೊಡೆಯ ಚಪ್ಪರಿಸುತಿಹುದು ರಣಕಹಳೆ ಹಿಡಿದ ಬೆಳಗು
ಗಾಢ ಕತ್ತಲೆ ರಾತ್ರಿ ಕೆಂಪಾಯ್ತು ರಕ್ತಹೀರಿ
ಶವಗಳನು ತುಳಿಯುತ್ತ ಬಂದು ನಿರ್ದಯದ ಬೆಳಗು



ಚಿಗುರಲಿಲ್ಲ ನೆಲ ಬಾಯಾರಿದ ಭೂಮಿ
ವಸಂತಗೆ ನಾಣು ಹಾಕಿದ ಬೆಳಗು
ನಿನ್ನೆಡೆಗೆ ನೋಡುತಿದೆ ಲೋಕವೆಲ್ಲ 'ಸಾಕಿ' ಕುಡಿಸು ಹೊಸ ಮದಿರೆ
'ಬೆಳಕಾಗಿ' ಬರಲಿ ಅರಿವು ಕಳಕೊಂಡ ಕಣ್ಣಿಲ್ಲದ ಬೆಳಗು

– ಶಾಂತರಸ
ಏಪ್ರಿಲ್ 2003

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH